ಜೈನ ಸಾಹಿತ್ಯ ಕಥೆಗಳು

ಲೇಖಕರು :

ಶ್ರೀ|| ಡಿ. ಪದ್ಮನಾಭಶರ್ಮ, ಭುವನಹಳ್ಳಿ



ಹಾಸನಜಿಲ್ಲೆ ಹಳೇಬೀಡಿನಲ್ಲಿ ಈ ಕೃತಿ 28-11-71ರಂದು ಬಿಡುಗಡೆಯಾಯಿತು.

ಅಧ್ಯಕ್ಷತೆ ; ಶ್ರೀ ಬ್ರಹ್ಮಪ್ಪ ಅಸಿಸ್ಟೆಂಟ್ ಕಮೀಷನರ್.

ಬಿಡುಗಡೆ : ಶ್ರೀ ಜ್ವಾಲನಯ್ಯ ಮಾಜಿ ಶಾಸಕರು.

ಜಿನಭಕ್ತಿ ಗೀತೆ : ಗುಡಿಬಂಡೆ ರಾಮಾಚಾರ್

ಪರಿಚಯ, ಕೃತಜ್ಞತೆ, ಸುರೇಶ್ ಜೈನ್ : ಗುಂಡಪ್ಪ.

ವ್ಯವಸ್ಥೆ : ಜೆ. ಯಸ್. ಬ್ರಹ್ಮದೇವಯ್ಯ ಮತ್ತು ಜೈನಮಂಡಳಿಯವರು ಹಾಸನ.

ಜೈನ ಸಾಹಿತ್ಯ ಕಥೆಗಳು

(ಮೊದಲನೆ ಭಾಗ)

ಲೇಖಕರು

ಶ್ರೀ॥ ಡಿ. ಪದ್ಮನಾಭಶರ್ಮ, ಭುವನಹಳ್ಳಿ

ಪ್ರಕಾಶಕರು

ಪ್ರಕಾಶನ.

ಶ್ರೀ ವಿವೇಕೋದಯ ಗ್ರಂಥಮಾಲೆ.
ಗುಡಿಬಂಡೆ, ಕೋಲಾರ ಜಿಲ್ಲೆ.

ಪ್ರಥಮ ಮುದ್ರಣ ೧೯೭೧

ಬೆಲೆ.

(ಮೂರು ರೂಪಾಯಿಗಳು ಮಾತ್ರ)

ಚಿತ್ರಗಳು: **ಶ್ರೀ ಡಿ. ಶ್ರೀಪಾಲ್. ಮೈಸೂರು.**

ಮುದ್ರಣ :

ಶ್ರೀ ಪದ್ಮಾಂಬ ಪ್ರಿಂಟರ್ಸ್
ಬಸವನಗುಡಿ, ಬೆಂಗಳೂರು–4.

[ಧಾರ್ಮಿಕ ಸಾಹಿತ್ಯ ಪ್ರಚಾರ ದೃಷ್ಟಿಯಿಂದ, ಅಂಚೆ ಮೂಲಕ ತರಿಸುವವರಿಗೆ, ಅಂಚೆ ವೆಚ್ಚ ಉಚಿತ]

ಶ್ರೀ ವಿವೇಕೋದಯ ಗ್ರಂಥಮಾಲೆ

ಗುಡಿಬಂಡೆ : : ಕೋಲಾರ ಜಿಲ್ಲೆ

ಪ್ರಾರಂಭ ೮-೪-೧೯೭೧

ಶ್ರೀ ಮಹಾವೀರ ಜಯಂತಿ

ಸಂಚಾಲಕರು

ಶ್ರೀ ಸುರೇಶ್ ಜೈನ್ ಮತ್ತು ಶ್ರೀ ಮ. ರಾ. ಗುಂಡಪ್ಪನವರು

ಶಾಸ್ತ್ರ ಸಲಹೆಗಾರರು : ಸಿದ್ಧಾಂತಾಚಾರ್ಯ, ವಿದ್ಯಾಭೂಷಣ, ನ್ಯಾಯಭೂಷಣ, ಪಂಡಿತ ಕೆ. ಭುಜಬಲಿ ಶಾಸ್ತ್ರಿಗಳು, ಧಾರವಾಡ.

ಸಾಹಿತ್ಯ ಸಲಹೆಗಾರರು

ಶ್ರೀ ಮಿರ್ಜಿ ಅಣ್ಣಾರಾಯರು, ರಾಷ್ಟ್ರಪ್ರಶಸ್ತಿ ವಿಜೇತರು ಸೇಡಬಾಳ.

ಶ್ರೀ ಜಿ. ಬ್ರಹ್ಮಪ್ಪನವರು, ಪ್ರಿನ್ಸಿಪಾಲ್, ಶ್ರವಣಬೆಳಗೊಳ.

ಶ್ರೀ ಹಂಪ. ನಾಗರಾಜಯ್ಯನವರು, ಪ್ರಾಧ್ಯಾಪಕರು, ಸೆಂಟ್ರಲ್ ಕಾಲೇಜ್, ಬೆಂಗಳೂರು.

ಶ್ರೀಮತಿ ಸಿ. ಆರ್. ಕಮಲಮ್ಮನವರು, ಪ್ರಾಧ್ಯಾಪಕರು, ಮಹಾರಾಣಿಯವರ ಕಾಲೇಜು, ಬೆಂಗಳೂರು.

ಗ್ರಂಥಮಾಲೆಗೆ ಸಹಾಯ ಧನ ನೀಡಲು ವಿವರ

ಸಂರಕ್ಷಕರು : ೫೦೧ ರೂ.ಗಳು ಪೋಷಕರು : ೨೫೧ ರೂ.ಗಳು

ಆಜೀವ ಸದಸ್ಯರು ೧೦೧ ರೂ.ಗಳು

ಈ ಮೂರು ವರ್ಗದವರಿಗೂ ಆಜೀವ ಪರ್ಯಂತ ಮಾಲೆಯ ಗ್ರಂಥಗಳು ಉಚಿತ

ಸದಸ್ಯರು : ೫೧ ರೂ.ಗಳು (ಐದು ವರ್ಷ ಮಾಲೆಯ ಗ್ರಂಥಗಳು ಉಚಿತ)

ಚಂದಾದಾರರು : ೧೧ ರೂ.ಗಳು (ವರ್ಷಕ್ಕೊಂದು ಸಲ ಕೊಡಬೇಕು)

ಒಂದು ವರ್ಷಕ್ಕೆ ೫೦೦ ಪುಟಗಳಲ್ಲಿ, ಧಾರ್ಮಿಕ ಸಾಹಿತ್ಯವನ್ನು ತಿಳಿಗನ್ನಡದಲ್ಲಿ ಕೊಡಲಾಗುವುದು

ಗ್ರಂಥಮಾಲೆ ಪ್ರಾರಂಭೋತ್ಸವ ಸಂದರ್ಭ

(ಗುಡಿಬಂಡೆ ಶ್ರೀ ಪಾರ್ಶ್ವನಾಥಸ್ವಾಮಿ ಬಸದಿ ಆವರಣ)



ಶ್ರೀಮತಿ ಕಮಲಾ ಹಂಪನಾ, ಶ್ರೀ ಹಂಪ. ನಾಗರಾಜಯ್ಯ, ಪ್ರೊ॥ ಜಿ. ಎಸ್. ಶಿವರುದ್ರಪ್ಪ, ಶ್ರೀ ಜಿ. ನಾರಾಯಣ, ಶ್ರೀ ವೈ. ಎಸ್. ರಾಮಲಿಂಗಾ ರೆಡ್ಡಿ, ಹಿಂದೂಪುರದ ಶ್ರೀ ಡಿ ಬ್ರಹ್ಮರಾಯಪ್ಪನವರು.

ನಮ್ಮ ಮಾತು

ಧರ್ಮಬಂಧುಗಳೇ,

ಉತ್ತಮಚಾರಿತ್ರ ರೂಪುಗೊಂಡು, ಮಲಿನ ಮನಸ್ಸು ಶುದ್ಧಗೊಳ್ಳಬೇಕಾದರೆ ಒಳ್ಳೆಯ ಧಾರ್ಮಿಕ ಗ್ರಂಥಗಳನ್ನು ಓದಬೇಕು. ಓದಿದ್ದು ತಿಳಿಯಬೇಕಾದರೆ ನಮಗೆ ಅರ್ಥವಾಗುವ ಭಾಷೆಯಲ್ಲಿ ಅಂತಹ ಗ್ರಂಥಗಳು ಇರಬೇಕು. ಅನಾದಿಯಿಂದಲೂ ಜೈನ ಸಾಹಿತ್ಯವು ಅಯಾ ಕಾಲದ ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ರಚಿತವಾಗಿ, ಪ್ರಚಾರವಾಗುತ್ತಿರುವುದು ನಮ್ಮ ಸಾಹಿತ್ಯಾವಲೋಕನದಿಂದ ತಿಳಿಯುವುದು.

ಹಿಂದಿ ಸಾಹಿತ್ಯ ಕ್ಷೇತ್ರ ವಿಶಾಲವಾಗಿರುವಂತೆಯೇ ಅಲ್ಲಿಯ ಸಾಹಿತ್ಯ ಕಾರ್ಯ (ಜೈನ ಧರ್ಮದ ದೃಷ್ಟಿಯಿಂದ) ಒಂದು ನಿರ್ದಿಷ್ಟ ಗುರಿಯನ್ನು ತಲುಪಿದೆ. ಅನುವಾದದ ಕಾರ್ಯ ಮುಗಿದು ಸಮಕಾಲೀನ ಪ್ರಜ್ಞೆಯಿಂದ ಕೂಡಿದ ಸ್ವತಂತ್ರ ಕೃತಿಗಳೂ ಬರುತ್ತಿವೆ. ಹಿಂದಿಯ ಗದ್ಯ ಸಾಹಿತ್ಯದಲ್ಲಿ ಸ್ವತಂತ್ರವಾಗಿ ರಚಿತವಾಗಿರುವ ಪಂಡಿತ ಟೋಡರಮಲ್ಲರ 'ಮೋಕ್ಷಮಾರ್ಗ ಪ್ರಕಾಶಕ' ಮತ್ತು ಪದ್ಯ ಸಾಹಿತ್ಯದಲ್ಲಿ ಪಂಡಿತ ದೌಲತರಾಮರ 'ಛಹಢಾಲಾ' ಇವು ಜೈನ ಸಿದ್ಧಾಂತದ ಅಮೂಲ್ಯ ರತ್ನಗಳು ಎಂದು ಪರಿಗಣಿಸಲ್ಪಟ್ಟಿದೆ. ಇವಲ್ಲದೆ ಇತರ ಅನೇಕ ಲೇಖಕರ ಉತ್ತಮ ಕೃತಿಗಳಲ್ಲಿ ಶಾಂತ ರಸವೇ ಹರಿಯುವಂತಾಗಿದೆ.

ಈ ದೃಷ್ಟಿಯಿಂದ ನೋಡಿದಾಗ ಎರಡೂವರೆ ಲಕ್ಷಕ್ಕೂ ಮೇಲ್ಪಟ್ಟು ಜೈನರಿರುವ ಕನ್ನಡನಾಡಿನಲ್ಲಿ, ಕನ್ನಡ ಭಾಷೆಯಲ್ಲಿ ಜೈನ ಸಿದ್ಧಾಂತ ಗ್ರಂಥಗಳು ಯಾವ ಮಟ್ಟದಲ್ಲಿವೆ? ಪ್ರಾಕೃತ, ಸಂಸ್ಕೃತ, ಅಪಭ್ರಂಶ, ಹಳೆಗನ್ನಡಗಳಿಂದ ತಿಳಿಗನ್ನಡಕ್ಕೆ ತರ್ಜುಮೆಯ ಕಾರ್ಯವೇ ಹೇಳಿಕೊಳ್ಳುವಂತೆ ಆಗಿಲ್ಲ.

'ಜೈನರೇ ಕನ್ನಡ ಭಾಷೆಯ ಆದಿಕವಿಗಳು. ಎಲ್ಲಾ ಪ್ರಾಚೀನ ಉತ್ತಮ ಕೃತಿಗಳೂ ಜೈನ ಕವಿಗಳದೇ ಆಗಿವೆ. ಕನ್ನಡ ಭಾಷೆಯ ಸೌಂದರ್ಯವೂ, ಕಾಂತಿಯೂ ಹೆಚ್ಚಲು ಜೈನ ಕವಿಗಳೇ ಕಾರಣ. ಪಂಪ, ರನ್ನ, ಪೊನ್ನರು ಕವಿಗಳಲ್ಲಿ ರತ್ನರೇ ಆಗಿರುವರು. ಹದಿನಾಲ್ಕನೆಯ ಶತಮಾನದ ವರೆಗೆ ಕನ್ನಡ ಭಾಷೆಯ ಸಹಾಯಕ ಗ್ರಂಥಗಳಾದ ಛಂದಸ್ಸು, ಅಲಂಕಾರ, ವ್ಯಾಕರಣ, ಕೋಶ ಮೊದಲಾದ ಗ್ರಂಥಗಳು ಜೈನರಿಂದಲೇ ರಚಿತವಾದವು.' ಎಂದು ದಿ|| ಆರ್. ನರಸಿಂಹಾಚಾರ್ಯರು ತಮ್ಮ 'ಕರ್ಣಾಟಕ ಕವಿ ಚರಿತೆ'ಯಲ್ಲಿ ಬರೆದಿರುವರು. ಇದೇ ಸದಭಿಪ್ರಾಯವನ್ನು ಸುದೃಢವಾಗಿರುವ ಈಗಿನ ಜೈನ ಸಮಾಜ ಮುಂದೆಯೂ ಬರುವಂತೆ ಮಾಡಬೇಕಾಗಿದೆ.

ಶ್ರೀ ದಿ|| ಎ. ಶಾಂತರಾಜಶಾಸ್ತ್ರಿಗಳ 'ಮಹಾಪುರಾಣ'ದ ಸುಂದರ ಅನುವಾದದ ನಂತರ ಪ್ರಕಟವಾಗಿರುವ 'ಜೈನಧರ್ಮ' 'ರತ್ನಕರಂಡಶ್ರಾವಕಾಚಾರ' 'ಷಟ್ಖಂಡಾಗಮ' 'ರವಿಷೇಣ ರಾಮಾಯಣ' 'ದೇವಪ್ಪ ಕೃತ ರಾಮಾಯಣ' 'ಪದಾರ್ಥಸಾರ' 'ಸಮಯಸಾರ'ದಂತಹ ಉದ್ಗ್ರಂಥಗಳೂ, ಬೆರಳಲ್ಲಿ ಎಣಿಸುವಷ್ಟು ಉತ್ತಮ ಚಿಕ್ಕ ಗ್ರಂಥಗಳೂ ದೊರೆಯುತ್ತವೆ. ಇನ್ನು ಸಮಕಾಲೀನ ವಿಷಯದೊಂದಿಗೆ ಕೂಡಿ, ಸ್ವತಂತ್ರ ಕೃತಿಗಳು ಬರುವುದು ಯಾವಾಗ ?

ಒಂದು ಧರ್ಮಕ್ಕೆ ಸಂಬಂಧಪಟ್ಟ ಸಾಹಿತ್ಯ ಹೆಚ್ಚು ಬೆಳಕಿಗೆ ಬರಬೇಕಾದರೆ, ಬರೆಯಬಲ್ಲ ವಿದ್ವಾಂಸರಷ್ಟೇ, ಪ್ರಕಾಶನಕ್ಕೆ ನೆರವಾಗುವ ಶ್ರೀಮಂತರೂ, ಕೊಂಡು ಓದುವ ಸಾಮಾನ್ಯರೂ ಅಗತ್ಯ.

ಸಮಾಜದ ಪ್ರಗತಿಗೆ ಇರುವ ಐದು (?) ಮಾಸ ಪತ್ರಿಕೆಗಳು ಸಾಲದು.

ವಿದ್ವತ್ಪೂರ್ಣ ಲೇಖನ ಮತ್ತು ವಿಚಾರಾತ್ಮಕ ವಿಷಯಗಳನ್ನೊಳಗೊಂಡ ವಾರಪತ್ರಿಕೆಗಳು ಒಂದೆರಡು ಅಗತ್ಯ. ವಾರವಾರವೂ ನಮ್ಮ ಸಮಾಜ ಬಾಂಧವರನ್ನು ಎಚ್ಚರಿಸುವ ಕಾರ್ಯ ಆಗಬೇಕಾಗಿದೆ--ಹಿಂದಿಯ

'ಜೈನಮಿತ್ರ'ದಂತೆ. ಕನ್ನಡದಲ್ಲಿ ಜೈನ ಸಿದ್ಧಾಂತ ಗ್ರಂಥಗಳನ್ನು ತಿಳಿಗನ್ನಡದಲ್ಲಿ ಪ್ರಕಟಿಸಲು 'ಜೀವರಾಜ ಜೈನ ಗ್ರಂಥಮಾಲೆ' ಮತ್ತು 'ಶಾಂತಿ ಸೇವಾ ಸದನ'ಗಳು ಶ್ರಮಿಸುತ್ತಿವೆ. ಈ ಎರಡೇ ಸಾಕೇ ?

ಪ್ರತಿ ಜೈನ ಮನೆಯವರೂ ನಮ್ಮ ಉತ್ತಮ ಸಾಹಿತ್ಯ ಹೆಚ್ಚು ಬರುವಂತಾಗಲಿ ಎಂಬ ಸದ್ಭಾವನೆಯಿಂದ ಮಾಸಪತ್ರಿಕೆ ಮತ್ತು ಪ್ರಕಟವಾದ ಗ್ರಂಥವನ್ನು ತರಿಸುವ ವ್ಯವಸ್ಥೆಯನ್ನು ಕಡ್ಡಾಯಗೊಳಿಸಿಕೊಳ್ಳಬೇಕು. ಒಂದು ಕುಟುಂಬದವರು ತಿಂಗಳಿಗೆ 5 ರೂ. ಗಳಂದೆ ವರ್ಷಕ್ಕೆ ೬೦ ರೂ. ಗಳನ್ನು ನಮ್ಮ ಧಾರ್ಮಿಕ ಸಾಹಿತ್ಯಕ್ಕೆ ಎಂದು ಮೀಸಲಿಟ್ಟರೆ, ಒಂದೇ ದಶಕದಲ್ಲಿ ಜೈನ ಸಾಹಿತ್ಯಕ್ಕೆ ಕನ್ನಡ ನಾಡಿನಲ್ಲಿ ಅಗ್ರಸ್ಥಾನ ದೊರಕುತ್ತದೆ. ಪ್ರಕಟವಾದ ಎಲ್ಲ ಪತ್ರಿಕೆ ಮತ್ತು ಪುಸ್ತಕಗಳೂ ಮನೆಗೆ ಬಂದು ಇನ್ನೂ ಹಣ ಉಳಿಯುತ್ತದೆ.

ನಮ್ಮಲ್ಲಿರುವ ಶ್ರೀಮಂತರು ಮುಂದಾಗಿ, ಈ ಕಾರ್ಯವನ್ನು ಇಷ್ಟಾದರೂ ಉದಾರ ವಾಗಿ ಮಾಡಿ ಮೇಲ್ಪಂಕ್ತಿ ಹಾಕಬೇಕು.

ಶ್ರೀಶ್ರೀ ಪಟ್ಟಾಚಾರ್ಯವರ್ಯಸ್ವಾಮಿಗಳು ಈ ವಿಷಯದತ್ತ ತಮ್ಮ ಗಮನ ಹರಿಸಲು ವಿನಂತಿಸುವೆವು.

'ನಮ್ಮ ಧರ್ಮದ ಕೆಲಸವನ್ನು ನಾವಲ್ಲದೆ ಮತ್ತೆ ಯಾರು ಮಾಡುತ್ತಾರೆ' ಎಂಬ ಅಂಶ ಎಲ್ಲರ ನೆನಪಿನಲ್ಲಿ ಸದಾ ಉಳಿದಿರಬೇಕು.

ಕರ್ಣಾಟಕ ಶಬ್ದಾನುಶಾಸನಂ, ಶಬ್ದಮಣಿ ದರ್ಪಣದಂತಹ ಬೃಹತ್ ವ್ಯಾಕರಣಗ್ರಂಥಗಳಿಗೆ ವ್ಯಾಖ್ಯಾನವನ್ನು ಬರೆದು,ಘನಸರ್ಕಾರದ ಬಹುಮಾನವನ್ನು ಪಡೆದಿರುವ ಶ್ರೀ ಡಿ. ಪದ್ಮನಾಭಶರ್ಮರು ಶಾಸ್ತ್ರ ಸಾಹಿತ್ಯದಲ್ಲಿ ಪಾರಂಗತರು. ಹಿಂದಿಯ 'ಛಹಢಾಲಾ' ಕೃತಿಯನ್ನು ಕನ್ನಡಕ್ಕೆ ಅನುವಾದ ಮಾಡಿರುವರು. ಇವರ ಕೃತಿಗಳು ಪಠ್ಯಪುಸ್ತಕಗಳಾಗಿವೆ. ಕಾವ್ಯ, ವ್ಯಾಕರಣ, ನಾಟಕ, ಜೀವನಚರಿತ್ರೆಗಳನ್ನು ಬರೆದ ನಿಷ್ಣಾತರು. ಧರ್ಮದ

ತಳಹದಿಯ ಮೇಲೆ ರಚಿತವಾಗಿರುವ ಇವರ 'ಪತಿತಪಾವನೆ' ಸಾಮಾಜಿಕ ಕಾದಂಬರಿ ವಿದ್ವಾಂಸರ ಮೆಚ್ಚುಗೆ ಗಳಿಸಿದೆ. ಪ್ರೌಢಶಾಲಾ ಕನ್ನಡ ಪಂಡಿತರೂ, ಸರಳರೂ, ವಿದ್ವಾಂಸ ಮನೆತನದವರೂ ಆದ ಶ್ರೀ ಪದ್ಮನಾಭ ಶರ್ಮರು ತಮ್ಮ 'ಜೈನ ಸಾಹಿತ್ಯ ಕಥೆಗಳು' ಕೃತಿಯನ್ನು ಮಾಲೆಯ ಮೂಲಕ ಪ್ರಕಟಿಸಲು ಅನುಮತಿ ಇತ್ತಿರುವರು. ಇವರ ಸೋದರರಾದ ಶ್ರೀ ಡಿ. ಶ್ರೀಪಾಲ್‌ರವರಿಂದ ಉತ್ತಮ ಚಿತ್ರಗಳನ್ನೂ ಬರೆಸಿರುವರು.

ಸ್ತ್ರೀಯರನ್ನೇ ಅಲ್ಲದೆ ಮಕ್ಕಳನ್ನೂ ರಂಜಿಸಿ, ನೀತಿಯನ್ನು ತಿಳಿಸುವ 'ಶಾಸ್ತ್ರಾಧಾರಿತ' ಈ ಕೃತಿಯನ್ನು ಮಾಲೆಗೆ ಕೊಟ್ಟು, ತಪ್ಪಿಲ್ಲದ ಮುದ್ರಣಕ್ಕಾಗಿ 'ಪ್ರೂಫ್' ನೋಡುವ ಹೊಣೆಯನ್ನು ಹೊತ್ತ ಶ್ರೀಯುತರಿಗೆ ನಾವು ಚಿರಋಣಿಗಳು.

ಇಡೀ ಭಾರತದಲ್ಲಿ ಜೈನ ಸಿದ್ಧಾಂತದಲ್ಲಿ ಆಚಾರ್ಯರಾಗಿರುವ ಕೆಲವೇ ಮಂದಿ ವಿದ್ವಾಂಸರಲ್ಲಿ ಒಬ್ಬರಾಗಿರುವ ಶ್ರೀ ಕೆ. ಭುಜಬಲಿಶಾಸ್ತ್ರಿಗಳು ನಮ್ಮ ಮಾಲೆಯ ಶಾಸ್ತ್ರ ಸಲಹೆಗಾರರಾಗಿರಲು ಸಮ್ಮತಿಸಿರುವರು. ಕರ್ನಾಟಕದಲ್ಲಿ ನಮ್ಮ ಧರ್ಮದ ಬಗೆಗೆ ಇವರಷ್ಟು ಅಭ್ಯಾಸಮಾಡಿ, ತಿಳಿದು, ಅದರ ಉಪಯೋಗವಾಗುವಂತೆ ಮಾಡುತ್ತಿರುವರು ವಿರಳ. ವಿದ್ಯಾಭೂಷಣರೂ, ಸಿದ್ಧಾಂತಾಚಾರ್ಯರೂ, ನ್ಯಾಯಭೂಷಣರೂ, ಪಂಡಿತೋತ್ತಮರೂ ಆದ ಶ್ರೀ ಭುಜಬಲಿಶಾಸ್ತ್ರಿಗಳ ಸಹಕಾರ ದೊರೆತಿರುವ 'ಮಾಲೆ' ಧನ್ಯ. ಅವರಿಗೆ ನಮ್ಮ ಅನಂತ ಕೃತಜ್ಞತೆಗಳು. ಸುಂದರ ಚಿತ್ರಗಳನ್ನು ಬರೆದು ಕೊಟ್ಟ ಶ್ರೀ ಡಿ. ಶ್ರೀಪಾಲ್‌ರವರಿಗೂ, ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಪದ್ಮಾಂಬ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಹೆಚ್. ಎಸ್. ನೇಮಿನಾಥಯ್ಯನವರಿಗೂ ನಮ್ಮ ಕೃತಜ್ಞತೆಗಳು. ಮಾಲೆಯ ಕಾರ್ಯದಲ್ಲಿ ಸಹಕರಿಸುತ್ತಿರುವ ಗಿ॥ ಶ್ರೀ ರವಿಕೀರ್ತಿಯವರನ್ನು ನೆನೆಯದಿರಲಾರೆವು.

ಮಾಲೆಗೆ ಚಂದಾದಾರರನ್ನು ಸಂಗ್ರಹಿಸಲು ಹೊರಟಾಗ ಸಂಕಿಘಟ್ಟದ ಶ್ರೀ ಜೀವಂಧರಯ್ಯನವರು ತಮ್ಮ ಸ್ವಂತ ಕೆಲಸಗಳನ್ನು ಗೌಣವಾ

ಕಂಡು ನಮ್ಮೊಂದಿಗೆ ಎಲ್ಲ ಕಡೆ ಸಂಚರಿಸಿದರು. ಮಾಯಸಂದ್ರದ ಶ್ರೀ ಎಸ್. ಬಿ. ಧನ್ಯಕುಮಾರಯ್ಯನವರು, ಗುಬ್ಬಿಯ ಶ್ರೀ ಚಂದ್ರಯ್ಯನವರು, ಸಾಲಿಗ್ರಾಮದ ಶ್ರೀ ಬ್ರಹ್ಮಯ್ಯನವರು, ದಡಗದ ಶ್ರೀ ಸುಮತಿ ಕುಮಾರ್ ಬಳಗದವರು ಮರೆಯಲಾರದಂತಹ ಸಹಕಾರ ನೀಡಿದರು. ಅವರೆಲ್ಲರಿಗೂ ಕೃತಜ್ಞತೆಗಳು. ಅಂತೆಯೇ ಸರಗೂರು, ಚಾಮರಾಜನಗರ, ನಿಟ್ಟೂರು ಕುಣಿಗಲ್ಲು ಪುರೋಹಿತರು, ತಂಡಗ, ಬೆಳಗೂಲಿ, ಅಟ್ಟ, ಮಾಯಸಂದ್ರ, (ಸಂಕೀಘಟ್ಟ)ಗಳಲ್ಲಿ ಯ ಮುಖಂಡರು ಮುಂದುನಿಂತು, ಮಾರ್ಗದರ್ಶಕರಾದರು. ಈ ಎಲ್ಲ ಧಾರ್ಮಿಕರಿಗೂ ಹಣ ನೀಡಿದ ದಾನಿಗಳಿಗೂ ಕೃತಜ್ಞತೆಗಳು.

ಮಾಲೆಯ ಅಭಿವೃದ್ಧಿಗೆ ಎಲ್ಲರೂ ಸಹಕರಿಸಲು ವಿನಂತಿಸುವೆವು.

ಗುಡಿಬಂಡೆ. **ಸಂಚಾಲಕರು**

ಮೊದಲಮಾತು

"ಪ್ರಜಾಮತ" ಪತ್ರಿಕೆಯ ಸಂಪಾದಕರಾದ ಶ್ರೀ|| ಹ|| ವೆ|| ನಾಗರಾಜರಾವ್ ನನ್ನ ಸ್ನೇಹಿತರು. ಒಮ್ಮೆ ಅವರು ಜೈನ ಸಾಹಿತ್ಯದ ಕಥೆಗಳನ್ನು ಬರೆದು ಪ್ರಜಾಮತ ವಾರ ಪತ್ರಿಕೆಗೆ ಕಳುಹಿಸಿಕೊಡುವಂತೆ ಕೇಳಿದರು. ನಾನು ಅದರಂತೆ ವಾರಕ್ಕೆ ಒಂದು ಕಥೆಯಂತೆ ಬರೆದು ಕಳುಹಿಸುತ್ತಿದ್ದೆ. ಅವೆಲ್ಲವೂ ಅದೇ ಪತ್ರಿಕೆಯಲ್ಲಿ ಪ್ರಕಟವಾದುವು. ಅನಂತರ ಇವೆಲ್ಲವನ್ನು ಒಟ್ಟಿಗೆ ಸೇರಿಸಿ ಪುಸ್ತಕ ರೂಪದಲ್ಲಿ ಏಕೆ ಪ್ರಕಟಿಸಬಾರದೆಂಬ ಆಲೋಚನೆ ಬಂದಿತು, ಅದಕ್ಕೆ ಸರಿಯಾದ ಚಿತ್ರಗಳನ್ನು ನನ್ನ ತಮ್ಮನಾದ ಚಿ|| ಡಿ. ಶ್ರೀಪಾಲ ಬರೆದುಕೊಟ್ಟನು.

ಈ ಮಧ್ಯೆ ಗುಡಿಬಂಡೆಯಲ್ಲಿ ಶ್ರೀ ಸುರೇಶ್ ಜೈನ್ ಮತ್ತು ಶ್ರೀ ಗುಂಡಪ್ಪ, ಈ ಮಿತ್ರರು "ವಿವೇಕೋದಯ ಕಾರ್ಯಾಲಯ" ಎಂಬ ಪುಸ್ತಕ ಪ್ರಕಟನ ಸಂಸ್ಥೆಯನ್ನು ಆರಂಭಿಸಿದರು. ಅದರ ಆಶ್ರಯದಲ್ಲಿ ಈ ಪುಸ್ತಕವನ್ನು ಪ್ರಕಟಿಸಲು ಮುಂದೆ ಬಂದು ಕನ್ನಡ ನಾಡಿನ ಮುಂದೆ ಇಟ್ಟಿದ್ದಾರೆ.

ಈ ಕಿರು ಹೊತ್ತಿಗೆಯಲ್ಲಿ ೨೫ ಕಥೆಗಳ ಸಂಗ್ರಹವಿದೆ. ಈ ಕಥೆಗಳನ್ನು ನೇಮಿಜಿನೇಶ ಸಂಗತಿ, ಒಡ್ಡಾರಾಧನೆ ಮಹಾಪುರಾಣ, ಅನಂತನಾಥ ಪುರಾಣ ಮೊದಲಾದ ಕೃತಿಗಳಿಂದ ಆಯ್ದುಕೊಳ್ಳಲಾಗಿದೆ. ಇವುಗಳಲ್ಲಿ ಪೌರಾಣಿಕ, ಸಾಮಾಜಿಕ, ಐತಿಹಾಸಿಕ, ನೈತಿಕ ಮೊದಲಾದ ಎಲ್ಲಾ ಬಗೆಯ ಕಥೆಗಳು ಇವೆ. ಈ ಪುಸ್ತಕವು ಮೊದಲನೆಯ ಭಾಗವಾಗಿದೆ. ಇನ್ನೂ ಹಲವಾರು ಭಾಗಗಳಲ್ಲಿ ಪ್ರಕಟಿಸಬೇಕೆಂಬ ಆಪೇಕ್ಷೆಯಿದೆ.

ಈ ಪುಸ್ತಕದ ಪ್ರಕಟನೆಗೆ ಕಾರಣವಾದ ಶ್ರೀ|| ಸುರೇಶ್ ಜೈನ್ ಮತ್ತು ಶ್ರೀ ಗುಂಡಪ್ಪನವರು ವಂದನಾರ್ಹರಾಗಿದ್ದಾರೆ. ಇವುಗಳನ್ನು ಬರೆಯಲು ಪ್ರೋತ್ಸಾಹಿಸಿ, ತಮ್ಮದೇ ಪತ್ರಿಕೆಯಲ್ಲಿ ಪ್ರಕಟಿಸಿದ ಶ್ರೀ|| ಹ|| ವೆಂ. ನಾಗರಾಜರಾವ್ ಸಹ ಅಭಿನಂದನಾರ್ಹರಾಗಿದ್ದಾರೆ. ಈ ಎಲ್ಲಾ ಸಾಹಿತ್ಯಗಳ ರಚನೆ ಹಾಗೂ ಮುದ್ರಣ ಕಾರ್ಯದಲ್ಲಿ ನೆರವಾಗುತ್ತಿರುವ, ಪದ್ಮಾಂಬ ಮುದ್ರಣಾಲಯದ ಮಾಲೀಕರೂ, ಬೆಂಗಳೂರು ಮಹಾವೀರ ಮಿಶನ್ನಿನ ಕಾರ್ಯದರ್ಶಿಗಳೂ ಆಗಿರುವ ಶ್ರೀಮಾನ್ ಹೆಚ್. ಎಸ್ ನೇಮಿನಾಥಯ್ಯನವರು ಕೂಡ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಈ ಕಥೆಗಳಿಗೆ ಯೋಗ್ಯವಾದ ಚಿತ್ರಗಳನ್ನು ಬರೆದು, ಪುಸ್ತಕದ ಅಂದವನ್ನು ಹೆಚ್ಚಿಸಿದ ನನ್ನ ಸಹೋದರ ಚಿ|| ಶ್ರೀಪಾಲನಿಗೂ ಧನ್ಯವಾದಗಳು.

ತಾ|| 21-9-1971

33/1, ನಾಲ್ಕನೇ ಬ್ಲಾಕ್
ತ್ಯಾಗರಾಜನಗರ,
ಬೆಂಗಳೂರು-28.

ಡಿ. ಪದ್ಮನಾಭಶರ್ಮ, ಭುವನಹಳ್ಳಿ
ಕನ್ನಡ ಪಂಡಿತ ಮತ್ತು ಹಿಂದಿ ರತ್ನ
ಸರ್ಕಾರಿ ಪ್ರೌಢಶಾಲೆ, ಮಲ್ಲೇಶ್ವರಂ
ಬೆಂಗಳೂರು-೩.

ಭೂಮಿಕೆ

ಕಥೆ ಎಂದರೆ ಯಾರ ಮನಸ್ಸು ತಾನೇ ಕೇಳಲುಕಾತರಿಸದು? ಬಾಲಕರಾಗಲಿ, ಯುವಕರಾಗಲಿ, ಹೆಂಗಸರಾಗಲಿ, ಮುದುಕರಾಗಲಿ ಕಥೆಯನ್ನು ಕೇಳಲು ಕಿವಿಗೊಟ್ಟು ಕುಳಿತುಕೊಳ್ಳುತ್ತಾರೆ. ಈ ಕಥೆಯನ್ನು ಕಟ್ಟಿದವರು ಯಾರು? ಇವು ಎಂದಿನಿಂದ ಆರಂಭವಾದುವು? ಇವುಗಳಿಂದ ಏನು ಪ್ರಯೋಜನ? ಮೊದಲಾದ ವಿಚಾರಗಳು ನಮ್ಮ ಕುತೂಹಲವನ್ನು ಕೆರಳಿಸುತ್ತವೆ.

ಜೀವನದಲ್ಲಿ ನಡೆಯುವ ಘಟನೆಗಳೇ ಕಥೆಗೆ ಆಧಾರ. ಸುಖವೋ ದುಃಖವೋ, ಕಲಹವೋ, ಪ್ರಣಯವೋ–ಹೀಗೆ ಒಂದಲ್ಲ ಮತ್ತೊಂದು ಘಟನೆಗಳು ಮನುಷ್ಯನ ಜೀವನದಲ್ಲಿ ಜರುಗುತ್ತಲೇ ಇರುತ್ತವೆ. ಇವುಗಳನ್ನೇ ಯಥಾವತ್ತಾಗಿ ಬರೆದಿಡುವುದು ಅಥವಾ ಆ ಯಥಾವತ್ತಾದ ಸಂಗತಿಯನ್ನು ಕಲ್ಪನಾಚಾತುರ್ಯದ ಮೂಸೆಯಲ್ಲಿ ಕಾಯಿಸಿ ಮತ್ತಷ್ಟು ರಸಭರಿತವನ್ನಾಗಿ ಮಾಡಿ ಸಹೃದಯ ರಂಜಕವನ್ನಾಗಿ ಮಾಡುವುದೇ ಕಥೆ ಎನಿಸುತ್ತದೆ.

ಈ ಕಥಾ ಸಾಹಿತ್ಯವು ಪ್ರಾಚೀನ ಕಾಲದಿಂದಲೂ ಸಾಹಿತ್ಯ ಕ್ಷೇತ್ರದಲ್ಲಿ ಉನ್ನತ ಸ್ಥಾನವನ್ನು ಗಳಿಸಿಕೊಂಡು ಬಂದಿದೆ. ಋಗ್ವೇದ, ಬ್ರಾಹ್ಮಣ, ಉಪನಿಷತ್, ಮಹಾಭಾರತ, ರಾಮಾಯಣ ಮೊದಲಾದ ವೈದಿಕ ವಾಙ್ಮಯದಲ್ಲಿ ಅಸಂಖ್ಯಾತ ದೃಷ್ಟಾಂತ ಕಥೆಗಳು ಕಂಡುಬರುತ್ತವೆ. ಈ ಕಥೆಗಳು ನೀತಿ ಬೋಧನಾಮಯವಾಗಿದ್ದು ಮನುಷ್ಯನ ಜೀವನವನ್ನು ಅವನತಿಯಿಂದ ಉನ್ನತಿಗೆ ಎತ್ತಲು ಸಹಾಯಕವಾಗಿವೆ. ಬೌದ್ಧ ಸಾಹಿತ್ಯದಲ್ಲಿ ಜಾತಕ ಕಥೆಗಳು ಪ್ರಸಿದ್ಧವಾಗಿವೆ. ಈ ಜಾತಕ ಕಥೆಗಳನ್ನು ಸಿಲೋನ್, ಬರ್ಮಾ

ಮೊದಲಾದ ದೇಶಗಳಲ್ಲಿ ಈಗಲೂ ಜನರು ರಾತ್ರಿ ವೇಳೆಗಳಲ್ಲಿ ಬಹು ಪ್ರೀತಿಯಿಂದ ಕೇಳುತ್ತಿರುತ್ತಾರೆಂಬುದನ್ನು ನಾವು ಕೇಳಿದ್ದೇವೆ. ಈ ಕಥೆಗಳಲ್ಲಿ ಕೆಲವು ಕ್ರಿಸ್ತಶಕ ಪೂರ್ವದ ಸಮಯದಿಂದಲೂ ಪ್ರಚಲಿತವಾದುವೆಂದು ತಿಳಿದುಬರುತ್ತದೆ. ಇವುಗಳಲ್ಲಿ ಕೆಲವು ಸಾಂಚಿ ಸ್ತೂಪದಂತಹ ಕೆಲವು ಬೌದ್ಧ ಸ್ತೂಪಗಳ ಮೇಲೆ ಚಿತ್ರಿತವಾಗಿವೆ. ಅಜಂತ ಎಲ್ಲೋರ ಮೊದಲಾದ ಗುಹೆಗಳಲ್ಲಿ ಈ ಜಾತಕ ಕಥೆಗಳನ್ನು ಚಿತ್ರಗಳ ರೂಪದಲ್ಲಿ ಬರೆದಿರುವುದು ಲೋಕಪ್ರಸಿದ್ಧವಾಗಿದ್ದು, ಆ ಸ್ಥಳಗಳು ಕಲಾ ಪ್ರೇಮಿಗಳ ಸಂದರ್ಶನೀಯ ಕ್ಷೇತ್ರವಾಗಿರುವುದು ಎಲ್ಲರೂ ತಿಳಿದ ವಿಷಯವಾಗಿದೆ.

ಜೈನ ಸಂಸ್ಕೃತಿಯು ಭಾರತ ರಾಷ್ಟ್ರದ ಪ್ರಾಚೀನ ಪರಂಪರೆಯ ಇತಿಹಾಸವನ್ನು ಪಡೆದಿದೆ. ಸಾಹಿತ್ಯ, ಕಲೆ, ವ್ಯಾಪಾರ, ಮೊದಲಾದ ಎಲ್ಲಾ ಕ್ಷೇತ್ರಗಳಲ್ಲೂ ಜೈನ ಸಂಸ್ಕೃತಿಯು ಅವ್ಯಾಹತವಾಗಿ ಬೆರೆತುಬಂದಿದೆ. ಕಥಾ ಸಾಹಿತ್ಯದಲ್ಲೂ ಸಹ ಸಮೃದ್ಧವಾಗಿ ಬೆಳೆದುಬಂದಿದೆ. ಜೈನ ಸಾಹಿತ್ಯದ ಪ್ರಾಚೀನ ವಿಭಾಗವನ್ನು "ಆಗಮ" ಎಂಬ ಹೆಸರಿನಿಂದ ಕರೆಯುತ್ತಾರೆ. ಅವು ಅಂಗ, ಉಪಾಂಗ, ಪಇನ್ನಾ, ಛೇದಸೂತ್ರ, ಮೂಲಸೂತ್ರ ಎಂದು ಪ್ರಧಾನವಾಗಿ ಐದು ಭಾಗಗಳಲ್ಲಿವೆ. ಈ ಐದರ ಉಪಭೇದಗಳ ಒಟ್ಟು ಸಂಖ್ಯೆ ೪೬ ಆಗುತ್ತದೆ. ಅವುಗಳ ವಿವರಣೆ ಹೀಗಿದೆ—

ಅಂಗಗಳು ೧೨—ಆಯಾರಂಗ, ಸೂಯಡಾಂಗ, ಠಾಣಾಂಗ, ಸಮವಾಯಾಂಗ, ಭಗವತೀ ನಾಯಾಧಮ್ಮಕಹಾ, ಉವಾಸಗದಸಾ, ಅಂತಗಡದಸಾ, ಅನುತ್ತರೋವವಾಇಯದಸಾ, ಪಣ್ಹವಾಗರಣ, ವಿವಾಗಸುಯ, ದಿಟ್ಟಿವಾಯ.

ಉಪಾಂಗಗಳು ೧೨—ಉವಾಇಯ, ರಾಯಪಸೇಣಿಯ, ಜೀವಾಭಿಗಮ, ಪನ್ನವಣಾ, ಸೂರಿಯಪನ್ನತಿ, ಜಂಬುದ್ದೀವಪನ್ನತಿ, ಚಂದಪನ್ನತಿ, ನಿರಯಾವಲಿ, ಕಪ್ಪವಡಂಸಿಯಾ, ಪುಪ್ಫಿಯಾ, ಪುಪ್ಫಚೂಲಿಯಾ, ವಣ್ಹಿದಸಾ.

ಪಇನ್ನಾಗಳು ೧೦—ಚಉಸರಣ, ಆಉರಪಚ್ಚಕ್ಖಾಣ, ಭತ್ತಪರಿನ್ನಾ, ಸಂಥರಾ, ತಂದುಲವೇಯಾಲಿಯ, ಚಂದವಿಜ್ಝಯ, ದೇವಿಂದತ್ಥವ, ಗಣಿವಿಜ್ಜಾ, ಮಹಾಪಚ್ಚಕ್ಖಾಣ, ವೀರತ್ಥವ.

ಛೇದಸೂತ್ರಗಳು ೬—ನಿಸೀಹ, ಮಹಾನಿಸೀಹ, ವವಹಾರ, ಆಚಾರದಸಾಕಪ್ಪ (ಬೃಹತ್ಕಲ್ಪ), ಪಂಚಕಲ್ಪ.

ಮೂಲಸೂತ್ರಗಳು ೪—ಉತ್ತರಜ್ಝಯಣ, ಆವಸ್ಸಯ, ದಸವೇಯಾಲಿಯ, ಪಿಂಡನಿಜ್ಜುತ್ತಿ. ನಂದಿ ಮತ್ತು ಅನುಯೋಗ

ಈ ಆಗಮ ಗ್ರಂಥಗಳು ಜೈನ ವಾಙ್ಮಯದ ಪ್ರಾಚೀನತಮ ಕೃತಿಗಳಾಗಿವೆ. ವೈದಿಕ ವಾಙ್ಮಯದಲ್ಲಿ ವೇದಗಳಿಗೆ ಯಾವ ಸ್ಥಾನವಿದೆಯೋ, ಬೌದ್ಧ ವಾಙ್ಮಯದಲ್ಲಿ ತ್ರಿಪಿಟಕಕ್ಕೆ ಯಾವ ಸ್ಥಾನವಿದೆಯೋ, ಅದೇ ಸ್ಥಾನವು ಈ ಆಗಮ ಗ್ರಂಥಗಳಿಗೆ ಜೈನ ವಾಙ್ಮಯದಲ್ಲಿದೆ. ಈ ಆಗಮ ಗ್ರಂಥಗಳಲ್ಲಿ, ಮಹಾವೀರ ತೀರ್ಥಂಕರರು ಉಪದೇಶಿಸಿದ ಮತ್ತು ಜೈನ ಸಂಸ್ಕೃತಿಯ ಆಯಾ ಕಾಲೀನ ಸಾಮಾಜಿಕ, ರಾಜಕೀಯ, ನೈತಿಕ ಮೊದಲಾದ ನಾನಾ ವಿಷಯಗಳಿಗೆ ಸಂಬಂಧಿಸಿದ ಕಥೆಗಳೂ ಅಸಂಖ್ಯಾತವಾಗಿ ಕಂಡುಬರುತ್ತವೆ.

ಈ ಆಗಮಗಳು ಮಹಾವೀರ ತೀರ್ಥಂಕರರಿಂದಲೇ ಹೇಳಲ್ಪಟ್ಟುವೇ? ಅಥವಾ ಅವರ ಅನಂತರ ಆದುವೇ ? ಎಂಬ ವಿಚಾರ ಆಲೋಚನೀಯವಾಗಿದೆ. ಪ್ರಾಚ್ಯ ವಿದ್ವಾಂಸರ ಅಭಿಮತದ ಪ್ರಕಾರ ಅದನ್ನು ಈ ರೀತಿ ಹೇಳಬಹುದಾಗಿದೆ. ಭಗವಾನ್ ಮಹಾವೀರರು ನಿರ್ವಾಣವಾದ ೧೬೦ ವರ್ಷಗಳ ನಂತರ (ಸುಮಾರು ಕ್ರಿಸ್ತಪೂರ್ವ ೩೦೬ರಲ್ಲಿ ಮಗಧ ದೇಶದಲ್ಲಿ ಘೋರ ಕ್ಷಾಮವು ಕವಿಯಿತು. ಈ ಕ್ಷಾಮದ ಭೀಕರ ಪರಿಣಾಮದಿಂದ ಜೈನ ಸಾಧುಗಳು ಮಗಧ ದೇಶವನ್ನು ಬಿಡುವುದು ಅನಿವಾರ್ಯವಾಯಿತು. ಆಗ ಜೈನ ಮುನಿಗಳು ಅನ್ಯ ದೇಶಗಳಲ್ಲಿ ವಿಹಾರ ಮಾಡಿದರು. ಕ್ಷಾಮವು ಮುಗಿದ ನಂತರ ಜೈನ ಮುನಿಗಳು ಪಾಟಲಿಪುತ್ರ (ಈಗಿನ ಪಾಟ್ನಾ)ದಲ್ಲಿ

ಒಟ್ಟುಗೂಡಿ ಬೇರೆಬೇರೆಯಾಗಿ ಮಾಡಿದ ಹನ್ನೊಂದು ಅಂಗಗಳನ್ನು ಸಂಗ್ರಹಿಸಿದರು. ಇದಕ್ಕಾಗಿ ನೆರೆದಿದ್ದ ಸಮ್ಮೇಳನವನ್ನು "ಪಾಟಲೀಪುತ್ರ ವಾಚನಾ" ಎಂಬ ಹೆಸರಿನಿಂದ ಕರೆದರು.

ಪಾಟಲೀಪುತ್ರ ವಾಚನಾ ಸಮ್ಮೇಳನ ಜರುಗಿದ ನಂತರ ಕೆಲವು ಕಾಲದ ಮೇಲೆ ಆಗಮ ಸಾಹಿತ್ಯವು ಮತ್ತೆ ಶಿಥಿಲವಾಯಿತು. ಇದಕ್ಕಾಗಿ ಮತ್ತೆ ಮಹಾವೀರರ ನಿರ್ವಾಣವಾದ ೮೩೭ ಅಥವಾ ೮೪೦ ವರ್ಷಗಳ ಮೇಲೆ (ಸುಮಾರು ಕ್ರಿ.ಪೂ. ೩೬೦-೩೬೩) ಜೈನ ಮುನಿಗಳ ಸಮ್ಮೇಳನವು ನಡೆಯಿತು. ಇದು ಎರಡನೇ ಸಮ್ಮೇಳನವಾಗಿದ್ದು, ಮಧುರಾನಗರದಲ್ಲಿ ನಡೆಯಿತು. ಇದರ ಅಧ್ಯಕ್ಷತೆಯನ್ನು "ಆರ್ಯ ಸ್ಕಂದಿಲ" ಎಂಬ ಮುನಿಗಳು ವಹಿಸಿದ್ದರು. ಅದೇ ಸಮಯದಲ್ಲಿ ವಲಭೀ ನಗರದಲ್ಲಿ ನಾಗಾರ್ಜುನ ಸೂರಿಗಳ ಅಧ್ಯಕ್ಷತೆಯಲ್ಲಿ ಮತ್ತೊಂದು ಸಮ್ಮೇಳನ ನಡೆಯಿತು. ಇದು "ಮಾಥುರೀ ವಾಚನಾ" ಎಂಬ ಹೆಸರಿನಿಂದ ಪ್ರಸಿದ್ಧವಾಯಿತು.

ಮಾಥುರೀ ವಾಚನಾ ಸಮ್ಮೇಳನದ ನಂತರ ಸುಮಾರು 150 ವರ್ಷಗಳ ನಂತರ ಅಂದರೆ, ಮಹಾವೀರರ ನಿರ್ವಾಣದ ೯೮೦ ಅಥವಾ ೯೯೩ ವರ್ಷಗಳ ನಂತರ, ಮತ್ತೆ ಆಗಮಗಳ ಕಣ್ಮರೆಯಾಗತೊಡಗಿದುದರಿಂದ, ಮತ್ತೆ ಅದನ್ನು ಉಳಿಸಲು ವಲಭೀಯಲ್ಲಿ "ದೇವರ್ಧಿಗಣ ಕ್ಷಮಾಶ್ರಮಣ" ಎಂಬ ಮುನಿಗಳ ಅಧ್ಯಕ್ಷತೆಯಲ್ಲಿ ನಾಲ್ಕನೇ ಸಮ್ಮೇಳನವು ನಡೆದು ಆಗಮಗಳನ್ನು ಸುವ್ಯವಸ್ಥಿತವಾಗಿ ಸಂಗ್ರಹಿಸಲಾಯಿತು. ಇದು "ವಲಭೀ ವಾಚನಾ" ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಈಗ ನಮ್ಮ ಮುಂದೆ ಇರುವ ಜೈನ ಆಗಮಗಳು ವಲಭೀ ವಾಚನಾ ಸಮ್ಮೇಳನದಲ್ಲಿ ಸುವ್ಯವಸ್ಥೆಯಿಂದ ಸಂಗ್ರಹಿತವಾದುವೇ ಆಗಿವೆ.

ಜೈನಕಥಾ ಸಾಹಿತ್ಯವು ಮೇಲೆ ತಿಳಿಸಿದ ಆಗಮಗಳ ಮೂಲದಿಂದಲೇ ಪ್ರಾರಂಭಿಸುತ್ತದೆ. ಆಯಾರಂಗ, ಸೂಯಗಡಂ, ಉತ್ತರಜ್ಝಯಣ, ದಸವೇಯಾಲಿಯ ಮೊದಲಾದ ಆಗಮಗಳಲ್ಲಿ ಜೈನ ಸಾಧುಗಳ ಆಚಾರ

ವಿಚಾರಗಳ ವರ್ಣನೆ ಬರುತ್ತವೆ. ಮುನಿಗಳು ತಮ್ಮ ಆಚಾರ ಪಾಲನೆ ಯಲ್ಲಿ ಅನುಭವಿಸುವ ತೊಂದರೆಗಳು ಅವರ ಚಾರಿತ್ರದ ಮಹಿಮೆ ಮೊದ ಲಾದವು ಕಥಾ ರೂಪದಲ್ಲಿರುವುದನ್ನು ಕಾಣಬಹುದು.

ಇದಲ್ಲದೆ ಜೈನ ಆಗಮಗಳನ್ನು ಪ್ರಥಮಾನುಯೋಗ, ಕರಣಾನು ಯೋಗ, ಚರಣಾನುಯೋಗ ಮತ್ತು ದ್ರವ್ಯಾನುಯೋಗ ಎಂದು ನಾಲ್ಕು ವಿಧದಲ್ಲಿ ವಿಂಗಡಿಸುತ್ತಾರೆ. ಮೊದಲನೆಯದಾದ ಪ್ರಥಮಾನು ಯೋಗ ದಲ್ಲಿ ಸ್ತ್ರೀ ಪುರುಷರಿಗೆ ಸಂಬಂಧಿಸಿದ ಸದಾಚಾರವೇ ಮೊದಲಾದ ವಿಚಾರ ಗಳನ್ನೊಳಗೊಂಡ ಧರ್ಮ ಕಥೆಗಳು ಬರುತ್ತವೆ. ಯಾವ ವ್ಯಕ್ತಿ ಯಾವ ಧಾರ್ಮಿಕ ವಿಧಾನವನ್ನು ಆಚರಿಸಿದನು ? ಅನೇಕ ಬಾಧೆಗಳು ಬಂದು ಪೀಡಿಸಿದರೂ ತನ್ನ ವ್ರತನಿಷ್ಠ ಪ್ರತಿಜ್ಞೆಯನ್ನು ಹೇಗೆ ನಿಭಾಯಿಸಿದನು ? ಇದರಿಂದ ಅವನಿಗೆ ಯಾವ ಯಾವ ಉತ್ತಮ ಫಲಗಳು ಲಭಿಸಿದುವು ?– ಇಂತಹ ಧಾರ್ಮಿಕ ಪ್ರಸಂಗಗಳು ಬಂದಿವೆ. ಎರಡನೆಯದಾದ ಕರಣಾನು ಯೋಗದಲ್ಲಿ ಗಣಿತ ಪ್ರಧಾನವಾದ ಖಗೋಲ, ಭೂಗೋಲ ಮೊದಲಾದ ವಿಷಯಗಳ ವರ್ಣನೆಯಿದೆ. ಮೂರನೆಯದಾದ ಚರಣಾನುಯೋಗದಲ್ಲಿ ಸದಾಚಾರದ ಮೂಲ ನಿಯಮಗಳು ಮತ್ತು ಅವುಗಳ ಆಚರಣೆಯ ವಿವಿಧ ಪ್ರಕ್ರಿಯೆಗಳ ವರ್ಣನೆಗಳು ಕಂಡು ಬರುತ್ತವೆ. ನಾಲ್ಕನೆಯದಾದ ದ್ರವ್ಯಾನುಯೋಗದಲ್ಲಿ ಜೀವ, ಅಜೀವ, ಕರ್ಮ, ಪರಮಾತ್ಮ, ಜಗತ್ತಿನ ಸ್ವರೂಪ ಮೊದಲಾದ ತತ್ವಗಳ ವ್ಯಾಖ್ಯಾನವು ಬರುತ್ತವೆ. ಇವುಗಳಲ್ಲಿ ಮೊದಲನೇ ಪ್ರಥಮಾನುಯೋಗದಲ್ಲಿ ಧರ್ಮಕಥೆಗಳು ಬರುವುದರಿಂದ ಅದು ಹೆಚ್ಚು ಜನರಿಗೆ ಸುಲಭವಾಗಿ ಪರಿಚಯವಾಗಿದೆ. ಉಳಿದ ಮೂರು ಅನುಯೋಗಗಳು ವಿದ್ಯಾವಂತರಿಗೆ ಮಾತ್ರ ಪರಿಚಿತವಾಗಿರಲು ಸಾಧ್ಯವಿದೆ.

ಈ ಮೊದಲು ತಿಳಿಸಿದ ಹನ್ನೆರಡು ಅಂಗಗಳಲ್ಲಿ ದಿಗಂಬರ ಜೈನ ಸಂಪ್ರದಾಯಕ್ಕೂ, ಶ್ವೇತಾಂಬರ ಜೈನ ಸಂಪ್ರದಾಯಕ್ಕೂ ವ್ಯತ್ಯಾಸವು ಕಂಡುಬರುತ್ತವೆ. ಹೆಸರುಗಳು ಒಂದೇ ತರಹ ಇದ್ದರೂ ಗ್ರಂಥ ಸ್ವರೂಪ ಗಳಲ್ಲಿ ತಾರತಮ್ಯ ಬರುತ್ತದೆ. ಹೇಗೇ ಇರಲಿ ಜೈನಕಥಾ ಸಾಹಿತ್ಯಕ್ಕೆ

ಅವು ಮೂಲವೆನ್ನುವುದರಲ್ಲಿ ಸಂಶಯವಿಲ್ಲ. ಭಗವತಿ, ಕಲ್ಪಸೂತ್ರ, ಠಾಣಾಂಗ, ನಿರಯಾವಲಿ ಮೊದಲಾದ ಗ್ರಂಥಗಳಲ್ಲಿ ಭಗವಾನ್ ಮಹಾವೀರರು, ಅವರ ಚರ್ಯೆ, ಅವರ ಉಪದೇಶಗಳು ಮತ್ತು ಆ ಸಮಯದಲ್ಲಿದ್ದ ರಾಜರು, ರಾಜಕುಮಾರರು ಮತ್ತು ಅವರು ಮಾಡಿದ ಯುದ್ಧ ಮೊದಲಾದುವುಗಳ ವಿಸ್ತೃತ ವರ್ಣನೆ ಇದೆ. ನಾಯಧಮ್ಮಕಹಾ, ಉವಾಸಗದಸಾ, ಅಂತಗಡದಸಾ, ಅನುತ್ತರೋವವಾಇಯದಸಾ, ವಿವಾಗಸುಯ ಮೊದಲಾದ ಗ್ರಂಥಗಳಲ್ಲಿ ಮಹಾವೀರರು ತಮ್ಮ ಉಪದೇಶಗಳಲ್ಲಿ ತಿಳಿಸುತ್ತಿದ್ದ ಅನೇಕ ದೃಷ್ಟಾಂತ ಕಥೆಗಳು ಮತ್ತು ಅವರ ಶಿಷ್ಯರ ವರ್ಣನೆಗಳು ಬರುತ್ತವೆ. ಇವುಗಳಿಂದ ಜೈನ ಸಂಸ್ಕೃತಿಯ ಅನೇಕ ವ್ಯವಹಾರಗಳನ್ನು ತಿಳಿಯ ಬಹುದಾಗಿದೆ. ರಾಯಪಸೇಣಿಯ, ಜೀವಾಭಿಗಮ, ಪನ್ನವಣಾ ಮೊದಲಾದ ಗ್ರಂಥಗಳಲ್ಲಿ ವಾಸ್ತುಶಾಸ್ತ್ರ, ಸಂಗೀತ, ವನಸ್ಪತಿ ಮೊದಲಾದುವುಗಳನ್ನು ಸಂಬಂಧಿಸಿದ ಅನೇಕ ಮಹತ್ವ ಪೂರ್ಣ ವಿಷಯಗಳು ಬರುತ್ತವೆ.

ಜ್ಞಾತೃಧರ್ಮಕಥಾಂಗದಲ್ಲಿ ಅನೇಕ ಕಥೆಗಳು ತುಂಬಿವೆ. ಅದು ೧೮ ಅಧ್ಯಾಯಗಳಲ್ಲಿ ವಿಭಕ್ತವಾಗಿದೆ. ಆ ಕಥೆಗಳಲ್ಲಿ ದ್ರೌಪದೀ ಮೊದಲಾದ ಪೌರಾಣಿಕ ವ್ಯಕ್ತಿಗಳ ಕಥೆಗಳೂ ಸಹ ಬಂದಿವೆ. ಉಪಾಸಕಾಕೃದ್ದಶಾಂಗದಲ್ಲಿ ೧೦ ಶ್ರಾವಕರ ವರ್ಣನೆ ಇದೆ. ಇದೇರೀತಿ ಜೈನ ಮುನಿಗಳ ಕಥೆಗಳು ಅನುತ್ತರೋಪಪಾದಿಕ, ಅಂತಃಕೃದ್ದಶಾ, ಮೂಲಾಚಾರ ಮೊದಲಾದ ಗ್ರಂಥಗಳಲ್ಲೂ ಕೂಡ ಬಹಳಷ್ಟು ಇವೆ. ವಿಪಾಕ ಸೂತ್ರದಲ್ಲಿ ಒಳ್ಳೆಯ ಕೆಲಸ ಮತ್ತು ಕೆಟ್ಟ ಕೆಲಸ ಮಾಡುವ ವ್ಯಕ್ತಿಗಳ ವರ್ಣನೆಯೂ ಬರುತ್ತದೆ. ಛೇದ ಸೂತ್ರದಲ್ಲಿ ಸಾಧುಗಳ ಆಹಾರ ವಿಹಾರ ಮತ್ತು ಪ್ರಾಯಶ್ಚಿತ್ತ ಮೊದಲಾದವುಗಳ ವರ್ಣನೆಯು ಬರುತ್ತದೆ. ಈ ವರ್ಣನಾ ಕಥೆಗಳು ಬೌದ್ಧ ಸಾಹಿತ್ಯದ ವಿನಯಪಿಟಕ ಗ್ರಂಥದಲ್ಲಿ ಹೇಳಿರುವುದನ್ನು ಹೋಲುತ್ತವೆ. ನಿದರ್ಶನಕ್ಕೆ ಬೃಹತ್ಕಲ್ಪ ಸೂತ್ರ (೧-೫೦)ವಲ್ಲಿ ಹೇಳಿರುವುದು ಹೀಗಿದೆ. ಭಗವಾನ್ ಮಹಾವೀರರು ಸಾಕೇತ

(ಅಯೋಧ್ಯೆ)ದಲ್ಲಿ 'ಸುಭೂಮಿಭಾಗ' ಎಂಬ ಉದ್ಯಾನದಲ್ಲಿ ವಿಹಾರ ಮಾಡು ತ್ತಿದ್ದರು. ಆಗ ಅವರು ತಮ್ಮ ಭಿಕ್ಷು ಸಾಧು ಸಾಧ್ವಿಯರಿಗೆ ಸಾಕೇತದ ಪೂರ್ವದಲ್ಲಿ ಮಗಧದವರೆಗೂ, ದಕ್ಷಿಣದಲ್ಲಿ ಕೌಶಾಂಬಿಯುವರೆಗೂ, ಪಶ್ಚಿಮ ದಲ್ಲಿ ಥೂಣಾ (ಸ್ಥಾಣೇಶ್ವರ)ದವರೆಗೂ ಮತ್ತು ಉತ್ತರದಲ್ಲಿ ಕುಣಾಲಾ (ಉತ್ತರಕೋಸಲಾ)ದ ವರೆಗೂ ವಿಹಾರ ಮಾಡಲು ಅನುಮತಿ ನೀಡಿದರು. ಇದರಿಂದ ಜೈನ ಧರ್ಮದ ಪ್ರಚಾರ ಮಹಾವೀರರ ಕಾಲದಲ್ಲಿ ಮಗಧದೇಶ ಹಾಗೂ ಸಂಯುಕ್ತ ಪ್ರಾಂತ್ಯಗಳಲ್ಲಿ ಮಾತ್ರ ಸೀಮಿತವಾಗಿತ್ತೆಂದು ತಿಳಿದು ಬರುತ್ತದೆ. ಈ ಛೇದಸೂತ್ರವು ಮಹಾವೀರರಷ್ಟೇ ಪ್ರಾಚೀನವೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಜೈನ ಕಥೆಗಳಿಗೆ ಆಧಾರವಾದ ಕೃತಿಗಳು ಇನ್ನೂ ಹಲವಾರು ಇವೆ. ವಸುದೇವಹಿಂಡೀ, ಪವುಮಚರಿಯಂ, ಹರಿವಂಶಪುರಾಣ ಪಾದಲಿಪ್ತ ಸೂರಿಗಳಿಂದ ರಚಿತವಾದ 'ತರಂಗವತೀ' ಎಂಬುವು ಮುಖ್ಯವಾಗಿವೆ. ದಿಗಂಬರ ಸಂಪ್ರದಾಯದ ಹರಿಷೇಣ ಸೂರಿಯ ಆರಾಧನಾ ಕಥಾಕೋಶವು ಹನ್ನೆರಡುವರೆ ಸಾವಿರ ಶ್ಲೋಕ ಪ್ರಮಾಣವುಳ್ಳದ್ದಾಗಿದೆ. ಇದೇ ಹೆಸರಿನ ಎರಡು ಸಂಸ್ಕೃತ ಗ್ರಂಥಗಳಿವೆ. ಒಂದು ಆಚಾರ್ಯ ಪ್ರಭಾಚಂದ್ರರಿಂದ ರಚಿತವಾದ ಗದ್ಯರೂಪವಾದುದು. ಮತ್ತೊಂದು ನೇಮಿದತ್ತರೆಂಬುವರು ರಚಿಸಿರುವ ಪದ್ಯರೂಪವಾದುದು ಈ ಕೃತಿಗಳಲ್ಲಿನ ಕಥೆಗಳುಗಳು ಸರಸ ವಾಗಿದ್ದು ಮಹತ್ವವನ್ನು ಪಡೆದಿವೆ. ಎಂಟನೇ ಶತಮಾನದಲ್ಲಿ ಹರಿಭದ್ರ ಸೂರಿಯು ರಚಿಸಿರುವ "ಸಮರಾ ಇಚ್ಚ ಕಹಾ" ಎಂಬುದು ಮುಖ್ಯವಾದುದು. ಇದನ್ನು ಡಾ|| ಹರ್ಮನ್ ಜಾಕೋಬಿಯುವರು ಸಂಪಾದಿಸಿ ರಾಯಲ್ ಏಷಿಯಾಟಿಕ್ ಸೊಸೈಟಿ, ಕಲ್ಕತ್ತಾ, ಇವರಿಂದ ಪ್ರಕಾಶಿತವಾಗಿದೆ. ಶ್ರೀ ಜಿನಸೇನರ ಹರಿವಂಶ ಪುರಾಣ, ರವಿಷೇಣರ ಪದ್ಮ ಪುರಾಣ, ಜಯಸಿಂಹ ನಾದರ ವರಾಂಗ ಚರಿತ್ರೆ, ಧನಪಾಲನ 'ಭವಿಷ್ಯದತ್ತ ಕಥಾ' ಮೊದಲಾದುವು ಜೈನ ಸಾಹಿತ್ಯ ಕಥಾಕ್ಷೇತ್ರದಲ್ಲಿ ಮೈಲಿಗಲ್ಲುಗಳಾಗಿವೆ.

ಆಚಾರ್ಯ ಸಿದ್ಧರ್ಷಿಯ "ಉಪಮಿತಿಭವ ಪ್ರಪಂಚ ಕಥಾ" ಎಂಬುದು ಭಾರತೀಯ ಹಾಗೂ ವಿಶ್ವ ಸಾಹಿತ್ಯದಲ್ಲೇ ಹೆಸರಾಂತಿದೆ.

ಇದರಲ್ಲಿ ಬರುವ ಗಂಭೀರವೂ, ಆಧ್ಯಾತ್ಮಿಕವೂ, ಮತ್ತು ಮನೋವೈಜ್ಞಾನಿಕವೂ ಆದ ವರ್ಣನೆಗಳು ಹೃದಯ ರಂಜಕಗಳಾಗಿವೆ. ದಿಗಂಬರಾಚಾರ್ಯ ಹರಿಷೇಣ ಸೂರಿಯ ಬೃಹತ್ಕಥಾ ಕೋಶವೂ ಮುಖ್ಯವಾದುದು. ಶ್ವೇತಾಂಬರ ವಿದ್ವಾಂಸರಾದ ಶ್ರೀ ಜಿನೇಶ್ವರ ಸೂರಿ, ದೇವಭದ್ರ ಸೂರಿ ಮೊದಲಾದವರು ಸಹ ಕಥಾ ಸಂಗ್ರಹಗಳನ್ನು ರಚಿಸಿದ್ದಾರೆ.

ಹತ್ತನೇ ಶತಮಾನದಲ್ಲಿ ಸಂಸ್ಕೃತ ಭಾಷೆಯಲ್ಲಿ ಒಂದೊಂದು ಕಥೆಗಳೇ ಒಂದೊಂದು ಕಾವ್ಯರೂಪದಲ್ಲಿ ರಚಿತವಾಗಿರುವುವೆಂದು ಕಂಡುಬರುತ್ತದೆ. ಹೀಗೆ ರಚನೆ ಮಾಡಿರುವವರಲ್ಲಿ ಆಚಾರ್ಯ ಶೀಲಾಂಕ, ಹೇಮಚಂದ್ರ, ಪುಷ್ಪದಂತ ಮೊದಲಾದವರ ಹೆಸರುಗಳು ಅಗ್ರಸ್ಥಾನದಲ್ಲಿ ನಿಲ್ಲುತ್ತವೆ. ಇಂತಹ ಕಾವ್ಯಗಳಿಗೆ ತೀರ್ಥಂಕರರ ಭವಾವಳಿ ತ್ರಿಷಷ್ಟಿ ಶಲಾಕಾ ಪುರುಷರ ಚರಿತೆಗಳೂ ಇವೆಲ್ಲವೂ ಕಥಾವಸ್ತುಗಳಾಗಿವೆ. ಹೀಗೆ ಜೈನ ಸಾಹಿತ್ಯ ಕಥೆಗಳು ಪ್ರಾಚೀನ ಕಾಲದಿಂದಲೂ ರಚನೆಯಾಗುತ್ತಾ ಬಂದಿವೆ.

ಈ ಬಗೆಯ ಜೈನ ಸಾಹಿತ್ಯದ ಕಥೆಗಳನ್ನು ವಿಷಯದ ದೃಷ್ಟಿಯಿಂದ ಧಾರ್ಮಿಕ, ಸಾಮಾಜಿಕ, ನೈತಿಕ, ಐತಿಹಾಸಿಕ, ಮೊದಲಾಗಿ ವಿಂಗಡಿಸಬಹುದು. ಈ ಕಥೆಗಳು ಭಾರತೀಯ ಭಾಷೆಗಳಲ್ಲೆಲ್ಲಾ ಸಾಮಾನ್ಯವಾಗಿ ಅನುವಾದವಾಗಿವೆ. ಅಥವಾ ಸ್ವತಂತ್ರವಾಗಿ ರಚನೆಯಾಗಿರಲೂ ಸಾಧ್ಯ. ಪ್ರಾಕೃತ, ಸಂಸ್ಕೃತ, ಹಿಂದಿ, ಗುಜರಾತಿ, ಮಹಾರಾಷ್ಟ್ರ, ಕನ್ನಡ, ತಮಿಳು ಮೊದಲಾದ ಮುಖ್ಯವಾದ ಭಾಷೆಗಳಲ್ಲೆಲ್ಲಾ ನಾವು ಕಾಣಬಹುದಾಗಿದೆ. ಜೀವನಶುದ್ಧಿಗೆ, ನೀತಿಯ ಉತ್ಥಾನಕ್ಕೆ ಈ ಕಥೆಗಳು ಬಹುಮಟ್ಟಿಗೂ ಪೂರಕಗಳಾಗಿವೆ.

ಕನ್ನಡ ಸಾಹಿತ್ಯದಲ್ಲಿ ಜೈನಸಾಹಿತ್ಯ ಕಥೆಗಳನ್ನು ತಿಳಿಸುವ ಅತ್ಯಂತ ಪ್ರಾಚೀನವಾದ ಕೃತಿಯೆಂದರೆ 'ವಡ್ಡಾರಾಧನೆ'. 'ವಡ್ಡಾರಾಧನೆ' ಎಂದರೆ ವೃದ್ಧಾರಾಧನೆಯೆಂದಾಗುತ್ತದೆ. ಅಂದರೆ ಇದರಲ್ಲಿ ಮುನಿಗಳ, ಭಟ್ಟಾರಕರ ಮೊದಲಾದ ಜೈನ ಹಿರಿಯ ತ್ಯಾಗಿಗಳ ಕಥೆಗಳು ಬರುತ್ತವೆ. ಇದನ್ನು

ಮೊಟ್ಟಮೊದಲು ಸಂಶೋಧಿಸಿ ಹೊರತಂದ ಕೀರ್ತಿ ದಿವಂಗತ ಶ್ರೀಮಾನ್ ಡಿ.ಎಲ್. ನರಸಿಂಹಾಚಾರ್ಯರದಾಗಿದೆ. ಇವರದೆ ಕನ್ನಡ ಸಾಹಿತ್ಯದಲ್ಲಿ ಆದಿಪುರಾಣ, ಅಜಿತಪುರಾಣ, ಶಾಂತಿಪುರಾಣ, ಮಲ್ಲಿನಾಥಪುರಾಣ, ಯಶೋಧರ ಚರಿತ್ರೆ, ಅನಂತನಾಥಪುರಾಣ ಮೊದಲಾದುವೆಲ್ಲಾ ಜೈನಕಥೆಗಳ ಆಗರಗಳಾಗಿವೆ. ನಯಸೇನನ 'ಧರ್ಮಾಮೃತ'ವೂ ಒಂದು ಕನ್ನಡದಲ್ಲಿ ಜೈನ ಸಾಹಿತ್ಯ ಕಥೆಗಳನ್ನು ತಿಳಿಸುವುದರಲ್ಲಿ ಮುಖ್ಯವಾದುದಾಗಿದೆ. ಹೀಗಾಗಿ ಜೈನ ಕಥಾ ಸಾಹಿತ್ಯವು ಕನ್ನಡ ಸಾಹಿತ್ಯದಲ್ಲೂ ಸಮೃದ್ಧಿಯಾದ ಸ್ಥಾನವನ್ನು ಪಡೆದಿದೆ ಎಂದರೆ ಅತಿಶಯವಾಗಲಾರದು. ಈ ಪುಸ್ತಕದಲ್ಲಿ ಹಾಕಿರುವ ೨೫ ಕಥೆಗಳಿಗೂ ಆಯಾಯ ಕಥೆಗಳ ವಿಷಯ, ಘಟನೆಗಳು ಮೊದಲಾದುವುಗಳ ಆಧಾರದ ಮೇಲೆ ಹೆಸರನ್ನು ಕೊಡುವ ಪ್ರಯತ್ನವನ್ನು ಮಾಡಲಾಗಿದೆ.

ವಿಷಯ ಸೂಚಿ

೧

ಅಭಿಮಾನ ತ್ಯಾಗ



ನಮಿರಾಜನು ಗಂಭೀರವದನನಾಗಿ ಅತ್ತಿತ್ತ ತಿರುಗುತ್ತಿದ್ದನು. ಅವನ ತಮ್ಮ ಯುವರಾಜನಾದ ವಿನಮಿಯು ಕಾತರದಿಂದ ಅಣ್ಣನ ಮುಖವನ್ನು

ನೋಡುತ್ತಿದ್ದನು. ತುಸು ಹೊತ್ತು ಕಳೆದನಂತರ ನಮಿರಾಜನು "ವಿನಮಿ, ನಿನಗೆ ತಿಳಿಯದು. ಈಗ ದಿಗ್ವಿಜಯದಿಂದ ಮದಿಸಿರುವ ಭರತೇಶ್ವರನನ್ನು ಎದುರುಗೊಳ್ಳಲು ನಾವೇ ಹೋಗುವುದು ಸರಿಯಲ್ಲ. ನಮ್ಮ ಆತ್ಮಗೌರವಕ್ಕೆ ಕುಂದು ಬರುತ್ತದೆ" ಎಂದನು. ಅವನ ಧ್ವನಿ ಗಂಭೀರವಾಗಿತ್ತು.

ನಮಿರಾಜನು ವೃಷಭಾದ್ರಿಯ ಮುಂದಿನ ಪ್ರದೇಶಕ್ಕೆ ರಾಜನಾಗಿದ್ದನು. ಗಗನವಲ್ಲಭಪುರ ಅವರ ರಾಜಧಾನಿಯಾಗಿತ್ತು. ಅವರೀರ್ವರೂ ಯಶೋಭದ್ರೆಯೆಂಬ ಭರತೇಶ್ವರನ ಸೋದರತ್ತೆಯ ಮಕ್ಕಳು. ಅವರಿಗೆ ಸುಭದ್ರೆಯೆಂಬ ಹೆಣ್ಣುಮಗಳು ತಂಗಿಯಾಗಿದ್ದಳು. ಬಾಲ್ಯದಿಂದಲೂ ಸುಭದ್ರಾದೇವಿಯನ್ನು ಭರತೇಶ್ವರನಿಗೇ ಕೊಡಬೇಕೆಂದು ಮಾತು ನಡೆಯುತ್ತಿತ್ತು. ಆದರೆ ವೃಷಭಸ್ವಾಮಿಯ ದೀಕ್ಷಾಗ್ರಹಣ, ಭರತೇಶನ ಪಟ್ಟಾಭಿಷೇಕ, ದಿಗ್ವಿಜಯಗಳಿಂದಾಗಿ ಆ ಮಾತು ಅಷ್ಟಕ್ಕೇ ನಿಂತಿತ್ತು. ಈಗ ಭರತೇಶನೇ ದಿಗ್ವಿಜಯಾರ್ಥಿಯಾಗಿ ಅಲ್ಲಿಗೆ ಬಂದಿದ್ದನು. ಅವನನ್ನು ನಾವೇ ಸ್ವಾಗತಿಸಬೇಕೇ ಬೇಡವೇ ಎಂಬಮಾತು ಅಣ್ಣ-ತಮ್ಮಂದಿರೊಳಗೆ ನಡೆದಿತ್ತು. ವಿನಮಿಯು ತಾವೇ ಹೋಗಿ ಎದುರುಗೊಳ್ಳುವುದೇ ಸರಿಯೆಂದು ಹೇಳಿದನು.

ನಮಿ--ಅವನು ಹಿಂದಿನ ಭರತೇಶನಲ್ಲ. ಈಗ ಷಟ್ಖಂಡಾಧಿಪನಾಗಿದ್ದಾನೆ. ಹಿಂದಿನಂತೆ ಸಲಿಗೆಯಿಂದ ಮಾತನಾಡಲು ಆಗದು. ನಾವೇ ಹೋದರೆ ನಮ್ಮ ಘನತೆಗೆ ಕುಂದು ಬರುತ್ತದೆ. ಅವನೇ ಬರಲಿ.

ವಿನಮಿ—ಅಣ್ಣಾ ! ನೀನು ಹೇಳುವುದೇನೋ ಸರಿ. ಆದರೆ ಚಕ್ರಿಯಾದ ಅವನು ಬರುವುದಾದರೂ ಹೇಗೆ? ಲೋಕದ ಎಲ್ಲ ರಾಜರಿಂದಲೂ ಸನ್ಮಾನಿಸಲ್ಪಡುತ್ತಿರುವಾಗ ಕೇವಲ ನಮ್ಮ ಆಹ್ವಾನವೂ ಇಲ್ಲದೆ ಹೇಗೆ ಆತನು ಬಂದಾನು? ಹೇಗಿದ್ದರೂ ಆತನು ಭಾವನಲ್ಲವೇ ? ನಾವೇ ಮೊದಲು ಹೋದರೆ ತಪ್ಪೇನು ?

ನಮಿ—ಅವನು ಭಾವನಾಗಬೇಕಾದುದರಿಂದಲೇ ನಾವು ಬಿಗಿಯಾಗಬೇಕಾಗಿದೆ. ಬಂಧುತ್ವದಲ್ಲಿ ಯಾವಾಗಲೂ ಗೌರವವನ್ನು ಕಾಯ್ದುಕೊ

ಳ್ಳುವುದು ಒಳ್ಳೆಯದು. ಅಲ್ಲದೆ ಅವನಿಗೆ ಮೊದಲಿನಿಂದಲೂ ತಂಗಿ ಸುಭದ್ರೆಯನ್ನು ಕೊಡಬೇಕೆಂಬ ಮಾತುಕತೆಗಳು ನಡೆಯುತ್ತಿದ್ದುವು. ಹೀಗಿರುವಾಗ ನಾವೇ ಮೇಲೆ ಬಿದ್ದು ಹೋದರೆ ಚೆನ್ನಾಗಿರುವುದಿಲ್ಲ.

ವಿನಮಿ---ನೀವು ಏನೇ ಹೇಳಿರಿ ಅಣ್ಣಾ ! ಭಾವನಿಗೆ ಆಗಿರುವ ವಿಜಯೋತ್ಸವ ನಮ್ಮದೇ ಆದಂತಲ್ಲವೇ? ಅದಕ್ಕೆ ನಾವೇಕೆ ಸಂತೋಷಪಡಬಾರದು? ನಾವೇ ಆಹ್ವಾನಿಸುವುದರಲ್ಲಿ ನನಗೇನೂ ಅಗೌರವವಾಗಿ ಕಾಣುವುದಿಲ್ಲ.

ನಮಿ---ತಮ್ಮಾ ! ನೀನಿನ್ನೂ ಚಿಕ್ಕವನು. ರಾಜಕೀಯ ತಂತ್ರಗಳೂ, ವ್ಯವಹಾರ ಕುಶಲತೆಯೂ ನಿನಗೆ ತಿಳಿಯದು. ಈ ವಿಚಾರದಲ್ಲಿ ನೀನು ನಿಶ್ಚಿಂತನಾಗಿರು. ನಾನು ಅದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಆದರ ವಿನಮಿಗೆ ಅಣ್ಣನ ಮಾತು ಹಿಡಿಸಲಿಲ್ಲ. ನೇರವಾಗಿ ತಾಯಿಯ ಬಳಿಗೆ ಹೋಗಿ ಈ ಸಂಗತಿಯನ್ನೆಲ್ಲ ತಿಳಿಸಿದನು. ಮರೆಯಲ್ಲೇ ಈ ಮಾತುಗಳನ್ನೆಲ್ಲ ಕೇಳುತ್ತ ನಿಂತಿದ್ದ ಸುಭದ್ರಾದೇವಿಗೂ ಅದು ಆಸಕ್ತಿಯನ್ನು ಕೆರಳಿಸಿತು. ಅವಳು ತನ್ನ ಮನಸ್ಸಿನಲ್ಲಿ ಭರತೇಶನನ್ನೇ ಮದುವೆಯಾಗಬೇಕೆಂದು ನಿರ್ಧರಿಸಿದ್ದಳು. ಆದರೆ ಈಗೀಗ ಹಿರಿಯಣ್ಣ ಅದಕ್ಕೆ ಅಷ್ಟಾಗಿ ಇಷ್ಟಪಡದಿದ್ದುದು ಅವಳಿಗೆ ಚಿಂತೆಯನ್ನು ಉಂಟುಮಾಡಿದ್ದಿತು. ಬಾಯಿಬಿಟ್ಟು ಹೇಳಲಾರಳು, ಹೇಳದೆಯೂ ಇರಲಾರಳು. ಹೀಗೆ ಮೂಕ ವೇದನೆಯನ್ನು ಅನುಭವಿಸುತ್ತಿದ್ದಳು. ಮಗಳ ಈ ವೇದನೆ ಯಶೋಭದ್ರೆಗೆ ಅರ್ಥವಾಗಿಬಿಟ್ಟಿತ್ತು. ಸ್ತ್ರೀ ಹೃದಯದ ದುಃಖವನ್ನು ಸ್ತ್ರೀಯರಲ್ಲದೆ ಬೇರೆ ಯಾರೂ ಗ್ರಹಿಸಲಾರರು. ಆದುದರಿಂದ ಅವಳು ನೇರವಾಗಿ ಮಗನಿಗೇ ಹೇಳಿಕಳುಹಿಸಿ ಕರೆಸಿಕೊಂಡಳು.

ಚಾರರು ಬಂದು ತಿಳಿಸಿದ ಕೂಡಲೇ ನಮಿಯು ಬಂದು ತಾಯಿಯ ಪಾದಗಳಿಗೆ ನಮಸ್ಕರಿಸಿ ಪೀಠದಲ್ಲಿ ಕುಳಿತುಕೊಂಡನು. ಇತರ ರಾಜ್ಯವ್ಯವಹಾರಗಳ ಮಾತುಗಳನ್ನು ಆಡಿದನಂತರ ಭರತೇಶನ ದಿಗ್ವಿಜಯದ ಸಂಗತಿ ಬಂದಿತು. ಆಗ ನಮಿಯು ತಾನು ಖಂಡಿತವಾಗಿಯೂ ಹೋಗಿ

ಭರತೇಶನನ್ನು ಆಹ್ವಾನಿಸಿ ತನ್ನ ತಂಗಿಯನ್ನು ವಿವಾಹವಾಗಬೇಕೆಂದು ಕೇಳಿ
ಕೊಳ್ಳುವುದಿಲ್ಲವೆಂದು ತಿಳಿಸಿದನು. ತಾಯಿಯು ಎಷ್ಟೋ ವಿಧದಲ್ಲಿ ಸಮಾ
ಧಾನ ಪಡಿಸಿದಳು. ಸೋದರಸಂಬಂಧವಾದುದರಿಂದ ನಾವೇ ಮೇಲುಬಿದ್ದು
ಕೇಳಿಕೊಂಡರೂ ಅವಮಾನವಲ್ಲವೆಂದು ತಿಳಿಸಿದಳು. ತಾಯಿಯ ಹಿತೋಕ್ತಿ
ಗಳನ್ನು ಕೇಳಿದನಂತರ ಅವನಾಗಿ ಬಂದರೆ ವೈಭವದಿಂದ ಸ್ವಾಗತಿಸುವುದಾ
ಗಿಯೂ ತಂಗಿಯನ್ನು ಸಹ ಕೊಟ್ಟು ಮದುವೆ ಮಾಡುವುದಾಗಿಯೂ ತಿಳಿಸಿ
ದನು. ಇದಕ್ಕಾಗಿ ಭರತೇಶನ ಬಳಿಗೆ ವಿನಮಿಯನ್ನು ಕಾಣಿಕೆಗಳ ಸಹಿತ
ಕಳುಹಿಸಲು ಒಪ್ಪಿಕೊಂಡನು.

ಇತ್ತ ವಿನಮಿಯು ಅಣ್ಣನ ಆಜ್ಞೆಯಂತೆ ಸುಮತಿ ಸಾಗರನನ್ನು ಒಡ
ಗೊಂಡು ಭರತೇಶನ ಪಾಳೆಯದತ್ತ ಹೊರಟನು. ಚತುರಂಗ ಸೈನ್ಯ
ಸಮೇತನಾಗಿ ರಾಜ ಗೌರವದ ಸಂಭ್ರಮದಿಂದಲೇ ಅವನು ಹೋದನು.
ವಿನಮಿಯುಬರುತ್ತಿರುವುದನ್ನು ಗಮನಿಸಿ ಭರತೇಶನಕಡೆಯವರು ಯಾರೋ
ಶತ್ರು ಸೈನ್ಯದವರು ನಮ್ಮ ಮೇಲೇರಿ ಬರುತ್ತಿರಬಹುದೆಂದು ತಿಳಿಸಿದರು.
ಆದರೆ ಭರತೇಶನಿಗೆ ಗೊತ್ತು, ಈ ಪ್ರದೇಶದಲ್ಲಿ ನಮಿರಾಜನಲ್ಲದೆ ಬೇರೆ
ಯಾರೂ ಬರುವುದಿಲ್ಲವೆಂದು. ಆದರೆ ನಮಿರಾಜನು ಶತ್ರುವಾಗಿ ಬರಲಾರ
ನೆಂದೂ ಅವನು ಎಷ್ಟೇ ಆತ್ಮಾಭಿಮಾನಿಯಾದರೂ ಸೋದರತ್ತೆಯಾದ
ಯಶೋಭದ್ರಾದೇವಿ ಇದಕ್ಕೆ ಅವಕಾಶ ಕೊಡುವುದಿಲ್ಲವೆಂದೂ ನಂಬಿದ್ದನು.
ಆದುದರಿಂದ ದೂತರು ಕೊಟ್ಟ ಸಮಾಚಾರದಿಂದ ಭರತೇಶನು ಗಾಬರಿ
ಯಾಗಲಿಲ್ಲ. ಒಂದುವೇಳೆ ಶತ್ರುಗಳೇ ಆಗಿದ್ದರೂ ಅವನು ಹೆದರಬೇಕಾ
ಗಿಯೂ ಇರಲಿಲ್ಲ. ಆದುದರಿಂದ ಅವನು ಬಂದವರ ಮೇಲೆ ತಮ್ಮ
ಕಡೆಯವರರಾರೂ ಕೈಮಾಡದರಬೇಡಿರೆಂದು ತಿಳಿಸಿ ತಾನು ನಿಶ್ಚಿಂತನಾಗಿ
ಜಿನಧ್ಯಾನ ಮಗ್ನನಾಗಿದ್ದನು.

ಪಾಳೆಯದ ಹತ್ತಿರಕ್ಕೆ ಬರುತ್ತಿದ್ದಂತೆ ಭರತೇಶನ ವೈಭವವನ್ನು ನೋಡಿ
ವಿನಮಿಗೆ ಅತ್ಯಾಶ್ಚರ್ಯವಾಯಿತು. ತಾನು ಹಿಂದೆಕಂಡ ಭರತನೆಲ್ಲಿ! ಈಗ
ಕಾಣುತ್ತಿರುವ ಭರತಚಕ್ರಿಯಲ್ಲಿ! ಇಂಥ ವೈಭವೋಪೇತನಾದ ಭರತೇಶನು
ತನ್ನನ್ನು ಮಾತನಾಡಿಸುವನೇ? ಗೌರವವಾಗಿ ಕಾಣುವನೇ? ಎಂಬಿವೇ

ಮೊದಲಾದ ಸಂದೇಹಗಳು ಆತನ ಮನಸ್ಸಿನಲ್ಲಿ ಉತ್ಪನ್ನವಾಗತೊಡಗಿದುವು. ಸಂಗಡವೇ ಇದ್ದ ಸುಮತಿ ಸಾಗರ ಮಂತ್ರಿಯೊಂದಿಗೆ ಸಮಾಲೋಚನೆಯನ್ನು ನಡೆಸಿದನು. ಕೊನೆಗೆ ತಾನು ಹತ್ತಿರದಲ್ಲೇ ಪಾಳೆಯವನ್ನು ಬಿಟ್ಟು, ಸುಮತಿಸಾಗರನ ಮೂಲಕ ತಾನು ಬಂದಿರುವ ಸಂಗತಿಯನ್ನು ಹೇಳಿ ಕಳುಹಿಸಿದನು.

ಸುಮತಿಸಾಗರನು ಚಾರನೊಬ್ಬನ ನಿರ್ದೇಶನದಲ್ಲಿ ಭರತನ ಸನ್ನಿಧಿಗೆ ಹೋಗಿ ಕಾಣಿಕೆಗಳನ್ನು ಅರ್ಪಿಸಿ, ನಮಿರಾಜನು ವಿನಮಿಯನ್ನು ಕಳುಹಿಸಿರುವ ಸಂಗತಿಯನ್ನು ತಿಳಿಸಿದನು. ಭರತೇಶನಿಗೆ ವಿನಮಿಯು ಬಂದಸಂಗತಿಯನ್ನು ಕೇಳಿ ಸಂತೋಷಗೊಂಡನಾದರೂ ನಮಿರಾಜನೇ ಬಾರದಿದ್ದುದಕ್ಕೆ ಬೇಸರವಾಯಿತು. ಅದನ್ನು ಹೊರಕ್ಕೆ ತೋರಗೊಡದೆ ಆದರದಿಂದಲೇ ವಿನಮಿಯನ್ನು ಬರಮಾಡಿಕೊಂಡು ಸತ್ಕರಿಸಿದನು. ಭಾವಮೈದುನರಲ್ಲಿ ಹಾಸ್ಯದ ಮಾತುಗಳೂ ನಡೆದುವು. ತಾನು ಚಕ್ರವರ್ತಿಯೆಂಬ ದರ್ಪವನ್ನು ತೋರಿಸದೆ ಮೊದಲಿನ ಸಲಿಗೆಯಿಂದಲೇ ವರ್ತಿಸಿದನು. ಊಟೋಪಚಾರಗಳು ನಡೆದುವು. ವಿರಾಮವಾಗಿ ಮಾತನಾಡಲು ಕುಳಿತಾಗ ವಿನಮಿಯು ನಮಿರಾಜನ ಆಹ್ವಾನವನ್ನೂ ತಾಯಿಯು ಸುಭದ್ರೆಯನ್ನು ಕೈಹಿಡಿಯಬೇಕೆಂದು ಹೇಳಿ ಕಳುಹಿಸಿರುವುದನ್ನೂ ತಿಳಿಸಿದನು.

ವಿನಮಿಯ ಮಾತನ್ನು ಕೇಳಿದಕೊಡಲೇ ಭರತೇಶನು ಗಂಭೀರವದನನಾಗಿದ್ದನು. ಅವನೂ ಸುಭದ್ರೆಯೂ ಬಾಲ್ಯದಲ್ಲಿ ಸಂಗಡದಲ್ಲೇ ಓಡಾಡಿದ್ದರು. ಹಿರಿಯರು ಅವರೀರ್ವರನ್ನು ಗಂಡಹೆಂಡಿರೆಂದು ಹಾಸ್ಯಕ್ಕಾಗಿ ನುಡಿದಾಗ ಇಬ್ಬರೂ ಬೇರೆ ಬೇರೆ ಓಡಿ ಹೋಗುತ್ತಿದ್ದರು. ಒಮ್ಮೊಮ್ಮೆ "ನಾನು ನಿನ್ನನ್ನು ಮದುವೆಯಾಗುವುದಿಲ್ಲ" ಎಂದು ನುಡಿದಾಗ ಮುಗ್ಧ ಮನಸ್ಸಿನ ಸುಭದ್ರೆ ತಾವರೆಯಂತೆ ಅಗಲವಾಗಿದ್ದ ತನ್ನ ಕಣ್ಣುಗಳಲ್ಲಿ ನೀರನ್ನು ತುಂಬಿ ದೀನತೆಯಿಂದ ನಿಲ್ಲುತ್ತಿದ್ದಳು. ಆಗ ಭರತನೇ ಅವಳ ಬಳಿ ಹೋಗಿ ಅವಳ ಕಂಬನಿಯನ್ನು ತೊಡೆದು ತಾನು ಖಂಡಿತವಾಗಿ ಮದುವೆಯಾಗುವೆನೆಂದು ಹೇಳಿ ತಾನೂ ನಕ್ಕು ಅವಳನ್ನೂ ನಗಿಸುತ್ತಿದ್ದನು. ಈ ಘಟನೆಗಳೆಲ್ಲವೂ ಭರತೇಶನ ಮನಸ್ಸಿನಲ್ಲಿ ಮೂಡಿ ಬಂದು ಸುಭದ್ರೆಯನ್ನು ತನ್ನ ವಚನದಂತೆ

ಕೈಹಿಡಿಯುವುದು ಯೋಗ್ಯವೆಂದು ಬಯಸಿದ. ಆದರೆ ಅವಳ ಹಿರಿಯಣ್ಣ ನಮಿರಾಜ ಬಾರದಿದ್ದುದು ಅವನಿಗೆ ಸರಿ ಬೀಳಲಿಲ್ಲ. ತಾನು ಷಟ್ಖಂಡಾಧಿಪ ನಾಗಿರುವಾಗ ತನಗೆ ಕೊಡಬೇಕಾದ ಮಾನ್ಯತೆಯನ್ನು ನೀಡದೆ ಅವನು ತೋರಿರುವ ವರ್ತನೆಯು ಅವನನ್ನು ಕೆರಳಿಸಿತು. ತನ್ನ ಅಧಿಕಾರ ಸ್ಥಾನದ ಗೌರವವನ್ನು ರಕ್ಷಿಸಿಕೊಳ್ಳಬೇಕಾದುದು ತನ್ನ ಕರ್ತವ್ಯವೆಂದು ನಿರ್ಧರಿಸಿದನು. ಅನಂತರ ವಿನಮಿಗೆ ಹೇಳಿದನು :—

" ವಿನಮಿ ! ನೀನು ಹೇಳಿದುದೇನೋ ನಿಜ. ಆದರೆ ನಿಮ್ಮಣ್ಣ ನನ್ನನ್ನು ಚಕ್ರವರ್ತಿಯೆಂಬುದನ್ನು ಮರೆತಂತಿದೆ. ಅದು ನನ್ನ ಗೌರವಕ್ಕೆ ಕುಂದು ಬಂದಿದೆ. ಅತ್ತೆ ಯಶೋಭದ್ರಾದೇವಿಯ ಮಾತಿಗೆ ನಾನು ಎಂದಿಗೂ ತಪ್ಪುವನಲ್ಲ. ಆದರೆ ನಾನು ಈಗ ಬಂಧುತ್ವಕ್ಕಿಂತಲೂ ಸಾಮ್ರಾಜ್ಯ ಪದವಿಯ ಘನತೆ ಗೌರವಗಳನ್ನು ಕಾಯಬೇಕಾಗಿದೆ. ಆದುದರಿಂದ ನಿಮ್ಮಣ್ಣ ನಮಿರಾಜನೇ ಬಂದು ಈ ವಿಚಾರವನ್ನು ಕೇಳಿಕೊಳ್ಳಬೇಕಾಗಿದೆ. ಹೀಗೆಂದೆನೆಂದು ನೀನು ಮನಸ್ಸಿನಲ್ಲಿ ಏನೂ ತಿಳಿಯಬೇಡ. ಈ ಸಂಗತಿಯನ್ನು ನಿಮ್ಮಣ್ಣನಿಗೆ ತಿಳಿಸಿ, ಮುಂದಿನದನ್ನು ನನಗೆ ಸಮಾಚಾರ ಬರುವಂತೆ ಮಾಡು. ನಾನು ಮುಂದಿನ ಯೋಚನೆಯನ್ನು ಮಾಡಬೇಕು" ಎಂದನು.

ಮೊದಲೇ ಭರತೇಶನ ಮುಖವು ಗಂಭೀರವಾಗಿದ್ದುದನ್ನು ಗಮನಿಸಿದ್ದ ವಿನಮಿಗೆ ಅವನ ಮಾತುಗಳನ್ನು ಕೇಳಿದ ಮೇಲಂತೂ ಏನು ಹೇಳಬೇಕೆಂಬುದೇ ತಿಳಿಯಲಿಲ್ಲ. ಸ್ವಲ್ಪಹೊತ್ತು ಮೌನವಾಗಿಯೇ ಕುಳಿತನು. ಇದನ್ನು ಗಮನಿಸಿದ ಭರತೇಶನಿಗೂ ತಾನು ಮಾತನಾಡಿದುದು ಸ್ವಲ್ಪ ಹೆಚ್ಚೇ ಆಯಿತೇನೋ ಎನ್ನಿಸಿತು. ಇದರಿಂದ ಸುಭದ್ರೆಯ ಮನಸ್ಸಿಗೂ ನೋವಾಗುವುದೋ ಏನೋ ಎಂದು ಚಿಂತಿಸಿದನು. ಆದರೆ ತನ್ನ ಅಭಿಮಾನದ ಮುಂದೆ ಅದಾವುದನ್ನೂ ದೊಡ್ಡದೆಂದು ಬಗೆಯಲು ಅವನು ಇಚ್ಛಿಸಲಿಲ್ಲ. ಸ್ವಲ್ಪ ಹೊತ್ತು ಕುಳಿತಿದ್ದ ವಿನಮಿಯು ತಾನು ದುಡುಕಿದರೆ ಬಂಧುತ್ವವೇ ಅಂತ್ಯವಾಗಬಹುದೆಂದೂ ಅದುದರಿಂದ ತಾಳ್ಮೆಯಿಂದ ಇದ್ದು ಈ ಸಂಗತಿಯನ್ನು ಅಣ್ಣನಿಗೂ ತಾಯಿಗೂ ತಿಳಿಸಿಬಿಡೋಣವೆಂದು ನಿರ್ಧರಿಸಿಕೊಂಡನು.

ಕೊನೆಗೆ ಮಂತ್ರಿ ಸುಮತಿಸಾಗರನೊಂದಿಗೆ ಎದ್ದು ಯಾವ ಮಾತನ್ನೂ ಆಡದೆ ಹಿಂದಿನಂತೆಯೇ ಭರತೇಶನಿಗೆ ವಂದಿಸಿ ಹೊರಟುಹೋದನು. ಅವನ ಸಹನೆಯು ಭರತೇಶನಿಗೆ ಮೆಚ್ಚಿಗೆಯಾಯಿತು. ಆದುದರಿಂದ ಹೇಗೆ ಆದರದಿಂದ ಬರಮಾಡಿಕೊಂಡಿದ್ದನೋ ಅದರಂತೆಯೇ ಆತ್ಮಾದರ ದಿಂದ ಕಳುಹಿಸಿಕೊಟ್ಟನು. ಅವನು ಕೊನೆಯಲ್ಲಿ ತೋರಿಸಿದ ಪ್ರೀತಿ ತಾನು ಅಂದ ಕಟುವಚನದಿಂದ ಜೆಂದಿದ್ದ ವಿನಮಿಗೆ ಸ್ವಲ್ಪ ಸಮಾಧಾನ ಸಿಗ ಲೆಂಬುದೇ ಉದ್ದೇಶವಾಗಿತ್ತು.

ಭರತೇಶನಲ್ಲಿಂದ ಹೊರಬಿದ್ದ ವಿನಮಿಯು ಚಿಂತೆಯಿಂದಲೇ ಗಗ ನವಲ್ಲಭ ಪುರಕ್ಕೆ ಬಂದನು. ಅವನಿಗೆ ಎಲ್ಲಕ್ಕಿಂತ ತನ್ನ ತಂಗಿ ಸುಭದ್ರೆ ಯದೇ ಚಿಂತೆಯಾಗಿತ್ತು. ಅವಳಿಗಂತೂ ಅನ್ಯರನ್ನು ವರಿಸುವ ಸಂಭ ವವೇ ಇರಲಿಲ್ಲ. ಈ ಸಂಗತಿಯನ್ನು ತಿಳಿದರಂತೂ ಧೃಢಮನಸ್ಕನೂ, ಅಭಿಮಾನಿಯೂ ಆದ ನಮಿರಾಜನು ಸೋಲುವ ಸಂಭವವಿರಲಿಲ್ಲ. ಹೀಗಾಗಿ ವಿನಮಿಗೆ ಅದೊಂದು ಬಿಡಿಸಲಾಗದ ಸಮಸ್ಯೆಯಾಗಿತ್ತು. ಹೇಗೋ ಬಂದು ಅಣ್ಣನಿಗೆ ಎಲ್ಲವನ್ನೂ ವರದಿ ಮಾಡಿದನು. “ ನಾನು ಮೊದಲೇ ತಿಳಿಸಲಿಲ್ಲವೇ ? ಎಂದು ನಮಿರಾಜನೂ ರೇಗಾಡಿದನು. ತಾನು ಎಂದಿಗೂ ಆತನ ಬಳಿಗೆ ಹೋಗುವುದಿಲ್ಲ. ಆತನು ಬಂದರೆ ಬೇಕಾದರೆ ಆದರಿಸಿ ತಂಗಿಯನ್ನಿತ್ತು ವಿವಾಹವನ್ನು ಮಾಡಿಕೊಡುತ್ತೇನೆ. ಇಲ್ಲದಿದ್ದರೆ ತಂಗಿಗೆ ಬೇರೆ ಒಳ್ಳೆಯ ವರನನ್ನು ನೋಡುತ್ತೇನೆ” ಎಂದು ಖಡಾಖಂಡಿತವಾಗಿ ನುಡಿದುಬಿಟ್ಟನು.

ಯಶೋಭದ್ರೆಗೂ ಈ ಚಿಂತೆ ಬಲವಾಯಿತು. ಮಗನು ಖಂಡಿತ ವಾದಿ. ಭರತೇಶನಾದರೋ ಆತ್ಮಾಭಿಮಾನಿ. ಸಾಲದುದಕ್ಕೆ ಅಧಿಕಾರ ದರ್ಪ ಪ್ರಳ್ಳವನು. ಇನ್ನು ಮಗಳ ಭವಿತವ್ಯವೇನೆಂಬುದೇ ಅವಳ ಚಿಂತೆಯಾ ಯಿತು. ಸುಭದ್ರೆಗಂತೂ ಈ ಸಂಗತಿ ಸಿಡಿಲೆರಗಿದಂತಾಯಿತು. ಭರ ತೇಶನ ವರ್ತನೆಯಿಂದ ಇಡೀ ಪುರುಷವರ್ಗವನ್ನೇ ಅವಳು ನಂಬಲಾರ ದಾದಳು. ಒಂದೊಂದು ವೇಳೆ ಅಣ್ಣನಾದರೂ ಏಕೆ ಸೋಲಬಾರದೆಂದು ಆಲೋಚಿಸಿದಳು. ಆದರೆ ಅಣ್ಣನಿಗೆ ತಾನು ತಿಳಿಸುವಷ್ಟು ಧೈರ್ಯ

ಅವಳಲ್ಲಿರಲಿಲ್ಲ. ಈಗಂತೂ ಭರತೇಶನ ಸಂದೇಶದಿಂದ ಅಣ್ಣನು ಹುಚ್ಚು ಹುಚ್ಚಾಗಿ ಹೋಗಿದ್ದಾನೆ. ತಾಯಿಯೂ ಮಗನಿಗೆ ಹೇಳಲು ಅಶಕ್ತಳಾಗಿದ್ದಾಳೆ. ಒಂದು ವೇಳೆ ಯಶೋಭದ್ರೆಯೇ ಭರತೇಶನಲ್ಲಿಗೆ ನಡೆದರೆ ಕೆಲಸವು ಆಗಬಹುದು. ಆದರೆ ಅದರಿಂದ ವಂಶದ ಗೌರವಕ್ಕೆ ಕುಂದು ಬರುತ್ತದೆ. ಮಗನ ಅಭಿಮಾನಕ್ಕೂ ಮಸಿ ಬಳಿದಂತಾಗುತ್ತದೆ. ಅವಳೂ ವೀರಮಾತೆಯಾಗಿದ್ದುದರಿಂದ ಅಂತಹ ಕಾರ್ಯಕ್ಕೆ ಇಚ್ಛಿಸುವವಳಲ್ಲ. ಎಂಬುದಾಗಿ ಅನೇಕ ರೀತಿಯಲ್ಲಿ ಆಲೋಚಿಸಿ ಕೊನೆಗೆ ತನಗೆ ಮದುವೆಯೇ ಬೇಡವೆಂದೂ ತಾನೂ ದೀಕ್ಷೆಯನ್ನು ಗ್ರಹಿಸಿ, ಬ್ರಹ್ಮಚಾರಿಣಿಯಾಗಿಯೇ ಉಳಿಯುವೆನೆಂದೂ ನಿರ್ಧರಿಸಿದಳು.

ವಿನಮಿಯೂ ಸಹ ರಾಜ್ಯದ ಗರಿಷ್ಠರ ಮೂಲಕ ಅಣ್ಣನಿಗೆ ನಾನಾ ಪರಿಯಲ್ಲಿ ಹೇಳಿಸಿ ನೋಡಿದನು. ಸುಭದ್ರೆಯ ಭವಿಷ್ಯದಿಂದಲಾದರೂ ತಾವು ತಗ್ಗಬೇಕೆಂದು ಅವನ ಅಭಿಪ್ರಾಯವಾಗಿತ್ತು. ಆದರೆ ನಮಿಯು ಅದಾವುದಕ್ಕೂ ಬಗ್ಗದೆ ಭರತೇಶನ ಮೇಲೆ ಯುದ್ಧ ಮಾಡುವುದನ್ನೇ ನಿಶ್ಚಯಿಸಿದನು. ನಿಶ್ಚಯಿಸುವುದೇನು ಭರತೇಶನು ಯುದ್ಧಕ್ಕೆ ಸಿದ್ಧನಾಗಿರಬೇಕೆಂದು ಸಂದೇಶವನ್ನು ಕಳುಹಿಸಿ ತಾನು ಸೈನ್ಯದೊಡನೆ ಸಿದ್ಧನಾಗಿ ಪುರದ ಹೊರಗೆ ಸೈನ್ಯವನ್ನು ಸಜ್ಜುಗೊಳಿಸಿದನು.

ಅತ್ತ ನಮಿರಾಜನಿಂದ ಸಂದೇಶವು ಬಂದಕೂಡಲೇ ಭರತೇಶನು ಕಿಡಿಕಿಡಿಯಾದನು. ತನ್ನನ್ನು ಇಷ್ಟು ತಾತ್ಸಾರದಿಂದ ಕಂಡವರು ಇದುವರೆಗೆ ಯಾರೂ ಇರಲಿಲ್ಲವೆಂದು ಹಲ್ಲು ಕಡಿದನು. ಅವನ ದಂಡು ಸಿದ್ಧವಾಗಿಯೇ ಇತ್ತು. ಚಕ್ರರತ್ನಧಾರಿಯಾದ ಅವನು ಸೋಲುವುದಂತೂ ಇರಲಿಲ್ಲ. ಆದರೂ ನಮಿರಾಜನ ಆತ್ಮಸ್ಥೈರ್ಯವು ಅವನಿಗೆ ಮೆಚ್ಚಿಕೆಯಾಯಿತು. ಭರತೇಶನ ಆಜ್ಞೆಯಾದ ಕೂಡಲೇ ಸೈನ್ಯವು ಸಾಗರದಂತೆ ಘೋರ್ಗರೆಯುತ್ತ ದಿಕ್ತಟಗಳನ್ನು ಧೂಳಿನಿಂದ ತುಂಬುತ್ತ ಸಾಗಿ ಬಂದು ಗಗನವಲ್ಲಭ ಪುರದ ಬಹಿರ್ವಲಯದಲ್ಲಿ ನಮಿರಾಜನ ಪಾಳೆಯಕ್ಕೆ ಎದುರಾಗಿ ನಿಂತನು.

ಮರುದಿನ ಯುದ್ಧವು ಆರಂಭಿಸಬೇಕು. ರಾತ್ರಿಯೆಲ್ಲ ಸುಭದ್ರೆಗೆ

ನಿದ್ದೆಯೇ ಹತ್ತಲಿಲ್ಲ. ಇಬ್ಬರೂ ಬಂಧುಗಳು ಯುದ್ಧಮಾಡಿ ಅಸಂಖ್ಯಾತ ಜೀವಿಗಳನ್ನು ಹತಮಾಡುವುದು ನಿಜಕ್ಕೂ ಅಕ್ಷಮ್ಯವಾಗಿದ್ದಿತು. ಬಹು ವಾಗಿ ಚಿಂತಿಸಿದ ಅವಳು ಕೊನೆಗೆ ಅವರೀರ್ವರ ನಡುವೆ ಕಾಳಗ ಆರಂಭ ವಾಗುವುದಕ್ಕೆ ಮೊದಲೇ ದೂರವಾಗಬೇಕೆಂದು ನಿರ್ಧರಿಸಿದಳು. ಸ್ತ್ರೀಯರ ಮನಸ್ಸು ಎಷ್ಟು ಮೃದುವಾಗಿರುತ್ತದೆಯೋ ಅಂತೆಯೇ ಕಷ್ಟಕಾಲ ಬಂದಾಗ ಕಠಿಣವೂ ಆಗುತ್ತವೆ. ನಿಶ್ಶಬ್ದದಿಂದ ನೀರವವಾಗಿದ್ದ ಆ ರಾತ್ರಿ ಎದ್ದಳು. ಎದ್ದವಳೇ ತನ್ನ ಬೆಲೆ ಬಾಳುವ ವಸ್ತ್ರಾಭರಣಗಳನ್ನು ಕಿತ್ತು ಒಗೆದಳು. ಹಣೆಗೆ ತಿಲಕವನ್ನಿಡಲಿಲ್ಲ. ಶರೀರಕ್ಕೆ ಯಾವ ವಿಧವಾದ ಅಲಂಕಾರ ವನ್ನು ಮಾಡಿಕೊಳ್ಳಲಿಲ್ಲ. ಅಲ್ಲೇ ಮಲಗಿದ್ದ ತಾಯಿಯ ಪಾದಗಳಿಗೆ ನಮಸ್ಕಾರ ಮಾಡಿದಳು. ಅವಳ ಕಣ್ಣುಗಳಿಂದ ಉದುರಿದ ಹನಿಗಳು ಆ ವೃದ್ಧೆಯ ಪಾದಗಳ ಮೇಲೆ ಬಿದ್ದವು. ಆದರೆ ಅದುವರೆಗೂ ಚಿಂತೆ ಯಿಂದಿದ್ದು ಆಗ ತಾನೇ ನಿದ್ರೆಗೆ ಶರಣಾಗಿದ್ದ ಆಕೆಗೆ ಅದು ತಿಳಿಯ ಲಿಲ್ಲ. ಹೋಗುವಾಗ ಸುಭದ್ರೆಗೆ ದುಃಖ ಉಕ್ಕಿ ಬಂದಿತು. ಆದರೆ ಕಷ್ಟ ದಿಂದ ತಡೆದುಕೊಂಡಳು. ಹೊರಟವಳೇ ನೇರವಾಗಿ ಎಲ್ಲೂ ನಿಲ್ಲದೆ ನಮಿ ರಾಜನು ಮುಂದಿನ ಯುದ್ಧಕ್ಕೆ ಅಣಿಮಾಡಿ ತನಗಾಗಿ ಏರ್ಪಡಿಸಿದ್ದ ಪಾಳೆ ಯಕ್ಕೆ ಬಂದಳು. ಅಲ್ಲಿ ಗುಡಾರ ಒಂದರಲ್ಲಿ ವಿನಮಿಯು ಮುಂದಿನ ದಿನದ ಯುದ್ಧಕ್ಕಾಗಿ ಸೈನ್ಯಾಧಿಕಾರಿಗಳಿಗೆ ಸಲಹೆಗಳನ್ನಿತ್ತು ಆಗ ತಾನೆ ಕಣ್ಮುಚ್ಚಿ ಮಲಗಿದ್ದನು. ನಿದ್ದೆಯಂತೂ ಇನ್ನೂ ಹತ್ತಿರಲಿಲ್ಲ.

ಸುಭದ್ರೆಯು ಬಂದವಳೇ ಯಾವ ತಡೆಯೂ ಇಲ್ಲದೆ ಅಣ್ಣನ ಬಳಿಗೆ ಬಂದಳು. ಅಣ್ಣನ ಮಂಚದ ಬಳಿ ಬಂದು ನಡುಗುವ ಧ್ವನಿಯಲ್ಲಿ "ಅಣ್ಣಾ" ಎಂದು ಕೂಗಿದಳು. ಅರೆನಿದ್ದೆಯಲ್ಲಿದ್ದ ನಮಿರಾಜನಿಗೆ ತತ್ ಕ್ಷಣವೇ ಎಚ್ಚರವಾಯಿತು. ಕಣ್ಣುಬಿಟ್ಟ ಕೂಡಲೇ ಎದುರಿಗೆ ಶ್ವೇತ ವಸ್ತ್ರಧಾರಿಣಿಯಾಗಿ ಯಶೋಲಕ್ಷ್ಮಿಯ ಹಾಗೆ ನಿಂತಿದ್ದ ತಂಗಿಯನ್ನು ನೋಡಿ ದಿಗ್ಭ್ರಮೆಯಿಂದ ಎದ್ದು ಕುಳಿತನು. ತಂಗಿ ಸುಭದ್ರೆಯು ಆವನೊಂದಿಗೆ ಯಾವಾಗಲೂ ಸಲಿಗೆಯಿಂದ ಮಾತನಾಡಿದವಳಲ್ಲ. ಭಯ ಭಕ್ತಿಯಿಂದಲೇ ಮಾತನಾಡುತ್ತಿದ್ದಳು. ಯಾವಾಗಲೂ ಅಮೂಲ್ಯವಾದ

ವಸ್ತ್ರಾಭರಣಗಳನ್ನು ಧರಿಸುತ್ತಿದ್ದವಳು ಇಂದು ಸನ್ಯಾಸಿಯ ಹಾಗೆ ಬಂದು ನಿಂತಿದ್ದಾಳೆ. ಕಣ್ಣುಗಳಲ್ಲಿ ನೀರು ತುಂಬಿದೆ. ಮುಖದಲ್ಲಿ ದೈನ್ಯವಿದೆ ಅಂತಹ ತಂಗಿಯ ಮುಗ್ಧ ಭಾವದ ಮುಖವನ್ನು ನೋಡಿದ ಕೂಡಲೇ ನಮಿರಾಜನು ಧರೆಗೆ ಇಳಿದು ಹೋದನು. ಕೂಡಲೇ "ತಂಗೀಸುಭದ್ರಾ! ಇದೇನಮ್ಮಾ ನಿನ್ನ ಅವತಾರ. ಕಣ್ಣಳಲ್ಲಿ ನೀರೇಕೆ? ಬಾ ಕುಳಿತುಕೋ ಏನಾದರೂ ಬೇಕಾಗಿದ್ದರೆ ನೀನೇ ಬರಬೇಕಾಗಿತ್ತೇನಮ್ಮ?" ಎಂದನು.

ಸುಭದ್ರೆಗೆ ಏನು ಹೇಳಬೇಕೆಂಬುದೇ ಹೊಳೆಯಲಿಲ್ಲ ಆದರೂ ಕಷ್ಟ ದಿಂದ ತಲೆ ತಗ್ಗಿರಿಸಿಕೊಂಡೇ ಹೇಳಿದಳು.

"ಅಣ್ಣಾ! ನೀನು ನನಗಾಗಿ ಒಂದು ತ್ಯಾಗ ಮಾಡಬೇಕಾಗಿದೆ."

ನಮಿ–ನಿನಗೋಸ್ಕರ ತ್ಯಾಗವೆ? ಅದೇನು ಹೇಳು ತಂಗೀ ಏನನ್ನು ಬೇಕಾಗಿದ್ದರೂ ಮಾಡಬಲ್ಲೆ.

ಸುಭದ್ರೆ– ಅಣ್ಣಾ! ನನಗೆ ದೀಕ್ಷೆಯನ್ನು ಕೈಗೊಳ್ಳಲು ಆಜ್ಞೆಯನ್ನು ನೀಡಿರಿ.

ನಮಿ– (ಗಾಬರಿಯಿಂದ) ಏನು ದೀಕ್ಷೆಯೇ! ನಿನಗೆ! ಏಕಮ್ಮಾ? ಭರತೇಶನ ವರ್ತನೆಯಿಂದ ಮನನೊಂದು ಹೀಗೆ ನುಡಿಯುವೆಯಾ? ಅವನಲ್ಲದಿದ್ದರೆ ಅವನಿಗಿಂತ ಉತ್ತಮನಾದ ವರವನ್ನೇ ತರುವೆ.

ಸುಭದ್ರೆ–ತಾವು ದೊಡ್ಡವರಣ್ಣ! ತಮಗೆ ತಿಳಿಯದುವೇನಿದೆ? ಪತಿ ವ್ರತೆಯರಿಗೆ ಬಹು ಪತಿತ್ವ ಸಲ್ಲದಲ್ಲವೇ?

ನಮಿ–ತಂಗೀ! ನೀನು ಏನು ಹೇಳುತ್ತಿರುವೆ?

ಸುಭದ್ರೆ–ಓರ್ವ ಪತಿವ್ರತೆ ಹೇಳುತ್ತಿರುವುದನ್ನೇ ಹೇಳುತ್ತಿರುವೆ ನಣ್ಣ. ನಾನು ಭರತೇಶನನ್ನೇ ವಿವಾಹವಾಗುವುದಾಗಿ ನಿರ್ಧರಿಸಿದ್ದೆ. ಈಗ ಬೇರೆಯವರನ್ನು ವರಿಸಲು ಅಪೇಕ್ಷಿಸಿದರೆ ದೋಷ ಬರುವುದಣ್ಣ. ಆದುದ ರಿಂದ ನನ್ನ ಸನ್ಯಾಸ ಜೀವನವು ಉತ್ತಮವಾಗಿ ನಡೆಯುವಂತೆ ಹರಸಿ ಕಳುಹಿರಣ್ಣ.

ನಮಿ–(ತಲೆಯನ್ನು ಬಡಿದುಕೊಳ್ಳುತ್ತ) ನನ್ನನ್ನು ಎಂಥ ಧರ್ಮ ಸಂಕಟಕ್ಕೆ ಸಿಕ್ಕಿಸುವೆಯಮ್ಮಾ! ನಿನ್ನನ್ನು ದೀಕ್ಷೆಗೆ ಕಳುಹಿಸುವುದಾದರೆ ಭರತೇಶನೊಂದಿಗೆ ಇಷ್ಟು ಛಲವೇಕೆ ಬೇಕಾಗಿತ್ತಮ್ಮಾ! ಈ ದೊಡ್ಡ ಯುದ್ಧವೇಕೆ ಬೇಕಾಗಿತ್ತು? ತಾಯಿ ನನ್ನನ್ನು ಏನನ್ನುವಳು ? ಆಗದು. ಖಂಡಿತ ಆಗದು.

ಸ್ವಲ್ಪ ಹೊತ್ತು ಅವಳೂ ಮೌನವಾಗಿ ನಿಂತಳು ನಮಿರಾಜನೂ ಮುಖವನ್ನೆತ್ತಿ ತಂಗಿಯ ಮುಖವನ್ನು ನೋಡಿದನು. ತಲೆ ತಗ್ಗಿಸಿದ್ದ ಅವಳ ಕಣ್ಣುಗಳಿಂದ ಕಣ್ಣೀರು ಕೋಡಿಯಂತೆ ಹರಿಯುತ್ತಿತ್ತು. ಆ ದೃಶ್ಯವನ್ನು ನೋಡಿದವನೇ ನಮಿರಾಜನು ಭೂಮಿಗೆ ಕುಸಿದು ಹೋದನು. ಅವನ ಛಲವೆಲ್ಲ ಹಾರಿ ಹೋಯಿತು. ತಂಗಿಗಾಗಿ ತನ್ನ ಆತ್ಮಾಭಿಮಾನವನ್ನೂ ತ್ಯಾಗಮಾಡಲು ಸಿದ್ಧನಾದನು. ಬಂದವನೇ ಅವಳ ತಲೆಯನ್ನು ಸವರಿ, “ಅಳಬೇಡ ತಾಯಿ. ದೀಕ್ಷೆಯ ಪ್ರಯತ್ನವನ್ನು ಬಿಡು. ಇಮೋ ನಿನಗಾಗಿ ಸರ್ವತ್ಯಾಗವನ್ನು ಮಾಡುವೆನೆಂದು ಹೇಳಿರುವೆನಷ್ಟೇ! ಈಗ ಮಾಡುವೆನು. ನನ್ನ ಅಭಿಮಾನವನ್ನೇ ತ್ಯಾಗ ಮಾಡುತ್ತೇನೆ. ಈಗಲೇ ಹೋಗಿ ಚಿಕ್ಕವನಾದರೂ ಭರತೇಶನ ಪಾದಗಳ ಮೇಲೆ ಬಿದ್ದಾದರೂ ಕೇಳಿಕೊಳ್ಳುತ್ತೇನೆ. ಬಾ ತಂಗೀ. ಈಗಲೇ ಅವನ ಪಾಳೆಯಕ್ಕೆ ಹೋಗೋಣ” ಎಂದು ಸಂತಯಿಸಿ, ತಂಗಿಯನ್ನು ಒಂದು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ, ತಾನು ಪಾದಚಾರಿಯಾಗಿಯೇ ಮಿತ ಪರಿವಾರದೊಡನೆ ಭರತೇಶನ ಪಾಳೆಯದ ಬಳಿಗೆ ಬಂದನು.

ಮುಂಜಾನೆಯ ಸಮಯವಾಗಿದ್ದಿತು. ಆಗ ತಾನೇ ಭರತೇಶನು ಹಾಸಿಗೆಯ ಮೇಲೆ ಎದ್ದು ಕುಳಿತು ಜಿನ ಧ್ಯಾನವನ್ನು ಮಾಡುತ್ತಿದ್ದನು. ಆಗ ಇದ್ದಕ್ಕಿದ್ದಂತೆ ಸಮೀಪದ ಕಿಂಕರನೋರ್ವನು ಬಂದು ನಮಿರಾಜನು ಬಂದಿರುವ ಸಂಗತಿಯನ್ನು ಕಿವಿಯಲ್ಲಿ ಉಸುರಿಸಿದನು. ಕೂಡಲೇ ಭರತೇಶನು ಧಿಗ್ಗನೆದ್ದು ಬಾಗಿಲವರೆಗೂ ತಾನೇ ಬಂದನು. ಬಂದವನೇ ಸುಭದ್ರಾ ಸಹಿತನಾದ ನಮಿರಾಜನನ್ನು ಕಂಡು ತನ್ನ ಕಣ್ಣುಗಳನ್ನು ತಾನೇ ನಂಬಲಾರದಾದನು. ಎಷ್ಟಾದರೂ ಆವನು ಹಿರಿಯ ಬಂಧು.

ತಾನೇ ಮುಂದೆ ಬಂದು ತನ್ನ ಛಲವನ್ನು ಮರೆತು ನಮಿರಾಜನ ಪಾದಗಳಿಗೆರಗಿದನು. ನಮಿರಾಜನೂ ಅವನನ್ನು "ವಿಜಯೋತ್ಸವಮಸ್ತು" ಎಂದು ಹರಸಿ, "ಭರತೇಶಾ! ಇದೋ ನಾನು ತಂಗಿಗಾಗಿ ಸೋತಿದ್ದೇನೆ. ನಿನ್ನನ್ನಲ್ಲದೆ ಅನ್ಯರನ್ನು ವರಿಸೆನೆಂದು ದೀಕ್ಷೆಗಾಗಿ ಸುಭದ್ರೆ ಹೊರಟಿದ್ದಾಳೆ. ಅವಳ ಭವಿಷ್ಯವನ್ನು ನೀನೇ ನಿರ್ಧರಿಸಬೇಕಾಗಿದೆ. ಇನ್ನು ನಿನ್ನ ಆಜ್ಞೆಗಾಗಿ ನಾನು ಕಾದಿದ್ದೇನೆ" ಎಂದನು.

ಸುಭದ್ರೆಯನ್ನು ಕಂಡ ಕೊಡಲೇ ಭರತೇಶನು ತನ್ನ ಛಲವನ್ನು ಮರೆತಿದ್ದನು. ಇನ್ನು ಭಾವನ ಮಾತನ್ನು ಕೇಳಿದ ಮೇಲಂತೂ ಬಂಧುತ್ವದಲ್ಲಿ ತಾನು ಈ ಛಲವನ್ನು ಮಾಡಬಾರದಾಗಿತ್ತು ಎನ್ನಿಸಿತು ಅವನಿಗೆ. ಕೂಡಲೇ "ಭಾವನವರೇ! ನನ್ನನ್ನು ಕ್ಷಮಿಸಿರಿ. ತಾವು ಹೇಳಿದಂತೆ ಮಾಡಲು ಸಿದ್ಧನಿದ್ದೇನೆ." ಎಂದು ಹೇಳಿದನು. ಕೊಡಲೇ ಮುಚ್ಚಿದ ಪಲ್ಲಕ್ಕಿಯಲ್ಲಿ ನಮಿರಾಜನೂ, ಸುಭದ್ರೆಯೂ ಅರಮನೆಯನ್ನು ಹೊಕ್ಕರು. ಮರುದಿನ ಯುದ್ಧ ನಡೆಯುವುದೆಂದು ಹೆದರಿದ್ದ ಜನರಿಗೆ ದೊರೆತ ಸುದ್ದಿಯೆಂದರೆ ಭರತೇಶ ಸುಭದ್ರೆಯರ ವಿವಾಹದ ಸಂಭ್ರಮ. ಎಲ್ಲರಿಗೂ ಆಶ್ಚರ್ಯ! ಏನೋ ಯಕ್ಷಿಣಿ ನಡೆದು ಹೋಗಿದೆ ಎಂಬುದೇ ಎಲ್ಲೆಲ್ಲೂ ಕೇಳಿ ಬರುತ್ತಿದ್ದ ಮಾತಾಗಿದ್ದಿತು. ಯಶೋಭದ್ರಾದೇವಿಯು ಹಿಂದಿನ ದಿನ ಎಷ್ಟು ಸಂಕಟಪಟ್ಟಿದ್ದಳೋ ಇಂದು ಅಷ್ಟು ಸಂತಸಪಟ್ಟಳು.

ಮದುವೆಯು ಸಂಭ್ರಮದಿಂದಲೇ ಜರುಗಿತು. ಬಂಧುಗಳು ಮತ್ತೆ ಒಂದುಗೂಡಿದರು. ಗಂಡು ಹೆಣ್ಣಿನ ಕಡೆಯವರೂ ಪರಸ್ಪರ ಜರಿದು ಹಾಸ್ಯದ ಹಾಡನ್ನು ಹಾಡಿದರು. ಬಡಬಗ್ಗರಿಗೆ ಹೇರಳವಾಗಿ ದಾನಮಾಡಿದರು. ಮದುವೆಯಾದನಂತರ ಭರತೇಶನು ಕೆಲವು ತಿಂಗಳಿನವರೆಗೆ ಇದ್ದು ಪ್ರಯಾಣವನ್ನು ಮುಂದುವರಿಸುವುದಾಗಿ ನಿರ್ಧರಿಸಿದನು. ಸುಭದ್ರಾದೇವಿಯನ್ನೇ ತನ್ನ ಪಟ್ಟದ ರಾಣಿಯನ್ನಾಗಿ ಮಾಡಿದನು.

೨

ಹಗಲುಗಳ್ಳ



ರಾಜಗೃಹ ನಗರವು ವ್ಯಾಪಾರಿಗಳ ಕೇಂದ್ರವಾಗಿತ್ತು. ಅಲ್ಲಿ ಧನಿಕರಾದ ಅನೇಕ ವರ್ತಕರು ವಾಸಿಸುತ್ತಿದ್ದರು. ದೂರ ದೂರ ದೇಶಗಳೊಡನೆ

ತಮ್ಮ ವ್ಯಾಪಾರಗಳನ್ನು ನಡೆಸುತ್ತಿದ್ದರು. ಒಂದಕ್ಕೆ ಹತ್ತರಷ್ಟು ಲಾಭವನ್ನು ಗಳಿಸುವ ಹಂಚಿಕೆಯಲ್ಲಿ ಅವರೆಲ್ಲರೂ ನಿಸ್ಸೀಮರಾಗಿದ್ದರು. ಅವರಲ್ಲಿ ಧನ್ಯ ವಣಿಜನೂ ಒಬ್ಬ ಪ್ರಸಿದ್ಧನಾಗಿದ್ದನು. ವ್ಯಾಪಾರದ ವಿದ್ಯೆಯಲ್ಲಿ ಅವನು ಮಹಾ ತಂತ್ರಜ್ಞನಾಗಿದ್ದನು. ಅವನ ಸಂಗಡ ಸ್ಪರ್ಧಿಸಲು ಹೊರಟಂಥ ವ್ಯಾಪಾರಿಗಳು ಬಹಳ ನಷ್ಟವನ್ನೇ ಅನುಭವಿಸುತ್ತಿದ್ದರು. ಆದುದರಿಂದ ಅವನೊಂದಿಗೆ ಸ್ಪರ್ಧೆಗೆ ಯಾರೂ ಹೋಗುತ್ತಿರಲಿಲ್ಲ. ಹೀಗಾಗಿ ಅವನು ಬಹಳ ದೊಡ್ಡ ಮನುಷ್ಯನೆಂದು ಹೆಸರು ಗಳಿಸಿ ಪ್ರಸಿದ್ಧನಾಗಿದ್ದನು.

ಧನ್ಯ ವಣಿಜನಿಗೆ ಭದ್ರಾದೇವಿ ಎಂಬ ಸುಂದರಳಾದ ಹೆಂಡತಿಯಿದ್ದಳು. ಎಲ್ಲ ಸಂಪತ್ತುಗಳಿದ್ದರೂ ಅವನಿಗೆ ಮಕ್ಕಳಿರಲಿಲ್ಲ. ಇದರಿಂದ ಆ ದಂಪತಿಗಳು ಅತ್ಯಂತ ದುಃಖಿಗಳಾಗಿದ್ದರು. ಭದ್ರಾದೇವಿಯು ಸಂತಾನಕ್ಕೋಸ್ಕರ ಅನೇಕ ಬಗೆಯ ಪೂಜಾವ್ರತಗಳನ್ನು ಮಾಡಿದ್ದಳು. ದೇವತೆಗಳನ್ನು ಭಕ್ತಿಯಿಂದ ಪೂಜಿಸಿದ್ದಳು. ಅನೇಕ ಉಪವಾಸಗಳನ್ನು ಮಾಡಿದ್ದಳು. ಅನೇಕ ಮಂದಿರಗಳನ್ನು ಕಟ್ಟಿಸಿ, ದೇವತೆಗಳನ್ನು ಪ್ರತಿಷ್ಠೆ ಮಾಡಿಸಿದ್ದಳು. ಬ್ರಾಹ್ಮಣರಿಗೂ ದೀನರಿಗೂ ಯಥೇಷ್ಟ ದಾನ ಮಾಡಿದಳು. ಆದರೆ ಯಾವ ಫಲವೂ ಕಂಡುಬಂದಿರಲಿಲ್ಲ. ಇದೇ ಚಿಂತೆಯಲ್ಲೇ ಅವಳು ಸೊರಗಿ ಸೊಪ್ಪಾಗುತ್ತಿದ್ದಳು. ಅವಳ ಪತಿಯು ಮಾತ್ರ ಇದನ್ನು ಮನಸ್ಸಿಗೆ ಹಾಕಿಕೊಳ್ಳದೇ ತನ್ನ ವ್ಯಾಪಾರದ ಕೆಲಸದಲ್ಲೇ ಮಗ್ನನಾಗಿರುತ್ತಿದ್ದನು.

ಭದ್ರಾದೇವಿಯ ಕನಸು ನನಸಾಗುವ ದಿನ ಒಮ್ಮೆ ಒದಗಿ ಬಂದಿತು. ಅವಳು ಮಾಡಿದ್ದ ಪೂಜೆ, ವ್ರತಾದಿಗಳು ವ್ಯರ್ಥವಾಗಿರಲಿಲ್ಲ. ಅವುಗಳ ಫಲವು ಅನಿರೀಕ್ಷಿತವಾಗಿ ಬಂದೊದಗಿತು. ಗರ್ಭಿಣಿಯಾಗಿದ್ದ ಭದ್ರಾದೇವಿಯು ನವಮಾಸಾಂತ್ಯದಲ್ಲಿ ಗಂಡು ಮಗುವನ್ನು ಪಡೆದು, ಮನೆಯಲ್ಲಿ ಜ್ಯೋತಿಯನ್ನು ಬೆಳಗಿಸಿದಳು. ಆ ಮಗುವಿನ ಜಾತಕರ್ಮ, ನಾಮಕರ್ಮ ಸಮಾರಂಭಗಳು ಮಹಾ ವೈಭವದಿಂದಲೇ ಜರುಗಿದುವು. ದೇವತೆಗಳ ಅನುಗ್ರಹದಿಂದ ತಮಗೆ ಮಗುವು ಜನಿಸಿತೆಂಬ ಕಾರಣದಿಂದ ಅವರು ಅದಕ್ಕೆ "ದೇವದತ್ತ" ಎಂದೇ ಹೆಸರಿಟ್ಟರು. ದೀನ—ದಲಿತರಿಗೆ ತೃಪ್ತಿಯಾಗುವಂತೆ ದಾನಧರ್ಮಗಳನ್ನು ಮಾಡಿದರು.

ಧನ್ಯ ವಣಿಜನಲ್ಲಿ ಪಂಥಕನೆಂಬ ಒಬ್ಬ ಸೇವಕನಿದ್ದನು. ಅವನು ಸುಂದರನೂ ಮತ್ತು ಹೃಷ್ಟಪುಷ್ಟನೂ ಆಗಿ ಬೆಳೆದಿದ್ದನು. ಮಕ್ಕಳನ್ನು ನೋಡಿಕೊಳ್ಳುವುದರಲ್ಲೂ, ಆಟವಾಡಿಸುವುದರಲ್ಲೂ ಮಹಾ ಚತುರನಾಗಿದ್ದನು. ಭದ್ರಾದೇವಿಯು ತನ್ನ ಮಗುವಿಗೆ ಸ್ನಾನಮಾಡಿಸುತ್ತಿದ್ದಳು. ಅನಂತರ ಅದಕ್ಕೆ ದೃಷ್ಟಿಯಾಗದಿರಲೆಂದು ಮುಖಕ್ಕೆ ಮಸಿಯ ಕಪ್ಪು ಚುಕ್ಕೆಗಳನ್ನಿಡುತ್ತಿದ್ದಳು. ಹಣೆಗೆ ತಿಲಕವನ್ನು ತಿದ್ದುತ್ತಿದ್ದಳು. ವಸ್ತ್ರಾಭರಣಗಳಿಂದ ಅಲಂಕರಿಸುತ್ತಿದ್ದಳು. ಇವೆಲ್ಲವನ್ನೂ ಸಿದ್ಧ ಮಾಡಿ ಆಟವಾಡಿಸಲು ಪಂಥಕನ ಬಳಿ ಕೊಡುತ್ತಿದ್ದಳು. ಅವನು ಆ ಮಗುವನ್ನು ಎತ್ತಿಕೊಂಡು ನಗರದ ಆಕರ್ಷಕ ಕೇಂದ್ರಗಳಲ್ಲಿ ರಾಜೋದ್ಯಾನಗಳಲ್ಲಿ ಮೊದಲಾದ ಸ್ಥಾನಗಳಲ್ಲೆಲ್ಲ ಆಡಿಸಿಕೊಂಡು ಬರುತ್ತಿದ್ದನು. ಹೀಗೆ ಮೂರು ನಾಲ್ಕು ವರ್ಷಗಳು ಸಂದುವು. ಮೂರು ವರ್ಷದ ಬಾಲಕನಾದ ದೇವದತ್ತನು ತನ್ನ ಪುಟ್ಟ ಹೆಜ್ಜೆಗಳನ್ನಿಡುತ್ತ ಪಂಥಕನೊಡನೆ ಆಡುತ್ತಿದ್ದನು.

ಧನ್ಯ ವಣಿಜನು ವಿಜಯನೆಂಬ ಅದೇ ನಗರದವನಿಗೆ ವ್ಯಾಪಾರದಲ್ಲಿ ಮೋಸ ಮಾಡಿದ್ದನು. ಅವನ ವಂಚಕತನದಿಂದ ವಿಜಯನು ತನ್ನ ಸಂಪತ್ತನ್ನೆಲ್ಲ ಕಳೆದುಕೊಂಡು ದರಿದ್ರನಾಗಿದ್ದನು. ತನ್ನ ದರಿದ್ರಾವಸ್ಥೆಯನ್ನು ತಾಳಲಾರದೆ ಅವನು ಚೋರ ವೃತ್ತಿಯನ್ನು ಅವಲಂಬಿಸಿದ್ದನು. ಅಂದಿನಿಂದ ಅವನು "ವಿಜಯ ಚೋರ" ನೆಂಬ ಹೆಸರಿನಿಂದಲೇ ಪ್ರಸಿದ್ಧನಾಗಿದ್ದನು. ಅವನ ಹೆಸರನ್ನು ಕೇಳಿದರೆ ವರ್ತಕರು ಹೆದರುತ್ತಿದ್ದರು. ಧನ್ಯವಣಿಜನಂತೂ ಅವನ ನೆನಪು ಬಂದಾಗಲೆಲ್ಲ ತನ್ನಮೇಲೆ ಯಾವಾಗ ಸೇಡು ತೀರಿಸಿಕೊಳ್ಳುವನೋ ಎಂದು ಭಯಪಡುತ್ತಿದ್ದನು ವಿಜಯನೂ ಆ ಪ್ರಯತ್ನದಲ್ಲಿ ಹಿಂದಾಗಿರಲಿಲ್ಲ.

ಒಂದು ದಿನ ಪಂಥಕನು ಮುಖ್ಯವಾದ ಒಂದು ರಾಜಪಥದಲ್ಲಿ ದೇವದತ್ತನನ್ನು ಬೇರೆಯ ಬಾಲಕ ಬಾಲಿಕೆಯರ ಸಂಗಡ ಆಟವಾಡಿಸುತ್ತಿದ್ದನು. ಮಕ್ಕಳು ತಮ್ಮ ತಮ್ಮಲ್ಲೇ ಆಟವಾಡುತ್ತಿದ್ದುದನ್ನು ಮನಗಂಡ ಅವನುತಾನು ಯಾವುದೋ ಬೇರೆ ಕೆಲಸದಲ್ಲಿ ಮಗ್ನನಾಗಿ ಕುಳಿತಿದ್ದನು. ಆ ವೇಳೆಗೆ ವಿಜಯ ಚೋರನು ಅಲ್ಲಿಗೆ ಬಂದನು. ಪಂಥಕನು ಅನ್ಯಮನಸ್ಕನಾಗಿ ಕುಳಿ

ತಿದ್ದುದನ್ನೂ ನೋಡಿದನು. ಧನ್ಯವಣಿಜನ ಮೇಲಿನ ಸೇಡನ್ನು ತೀರಿಸಿ ಕೊಳ್ಳಲು ಇದೇ ಸಮಯವೆಂದು ತಿಳಿದನು. ತಡಮಾಡದೆ ತನ್ನ ಒಂದು ಬಟ್ಟೆಯನ್ನು ದೇವದತ್ತನ ಮೇಲೆ ಹಾಕಿ, ಆ ಮಗು ಕೂಗದಂತೆ ಮಾಡಿ, ಎತ್ತಿಕೊಂಡು ರಭಸದಿಂದ ಕಾಡಿಗೆ ಓಡಿಹೋದನು. ಬಹಳ ದೂರ ಕಾಡಿ ನೊಳಗೆ ನಡೆದು ಬಂದ ನಂತರ ಒಂದು ರಹಸ್ಯ ಪ್ರದೇಶಕ್ಕೆ ಬಂದು ಅಲ್ಲಿ ಮಗುವಿನ ಬಾಯಿಗೆ ತುರುಕಿದ್ದ ಬಟ್ಟೆಯನ್ನು ತೆಗೆದನು. ಅಲ್ಲಿ ನಿಂತು ಒಂದುಸಾರಿ ಗಟ್ಟಿಯಾಗಿ ಸಿಳ್ಳು ಹಾಕಿದನು. ಕೂಡಲೇ ಅನೇಕ ಚೋರರು ಘಾತಕ ಆಯುಧಗಳನ್ನು ಹಿಡಿದು ಅಲ್ಲಿಗೆ ಓಡಿ ಬಂದರು. ಅವರಿಗೆ ಈ ಮಗುವನ್ನು ಸುರಕ್ಷಿತವಾಗಿ ಸಲಹಬೇಕೆಂದು ಆಜ್ಞಾಪಿಸಿ ಅದರ ವಸ್ತ್ರಾ ಭರಣಗಳನ್ನು ತಾನು ತೆಗೆದುಕೊಂಡು ಹೊರಟನು.

ಇತ್ತ ದೇವದತ್ತನನ್ನು ವಿಜಯ ಚೋರನು ಎತ್ತಿಕೊಂಡು ಹೋದ ಕೂಡಲೇ ಅವನೊಂದಿಗೆ ಆಟವಾಡುತ್ತಿದ್ದ ಮಕ್ಕಳು ಗಾಬರಿಯಿಂದ ಅಳ ತೊಡಗಿದರು. ಅದನ್ನು ಕೇಳಿದ ಕೂಡಲೇ ಪಂಥಕನು ಓಡಿಬಂದು ನೋಡು ವಾಗ ದೇವದತ್ತನು ಅವನ ಕಣ್ಣಿಗೆ ಬೀಳಲಿಲ್ಲ. ಅವನು ಮತ್ತೂ ಗಾಬರಿ ಯಾಗಿ ಅಲ್ಲೆಲ್ಲ ಹುಡುಕಿದನು. ನಗರದ ಎಲ್ಲ ಉಪವನಗಳಲ್ಲೂ ಹುಡುಕಿ ದನು. ದೇವದತ್ತನು ಸಿಗಲಿಲ್ಲ. ಅಲ್ಲಿಂದ ನಿರುಪಾಯನಾಗಿ ರೋದಿಸುತ್ತ ಮನೆಗೆ ಬಂದು ಧನ್ಯ ವಣಿಜನ ಪಾದಗಳನ್ನು ಹಿಡುಕೊಂಡು ನಡೆದ ಸಂಗತಿ ಯನ್ನೆಲ್ಲ ಹೇಳಿದನು. ಈ ದಾರುಣ ಸಂಗತಿಯನ್ನು ಕೇಳಿದ ಅವನು ಸಹಿಸ ಲಾರದೇ ಮೂರ್ಛೆಹೋಗಿ ಬಿದ್ದುಬಿಟ್ಟನು. ಭದ್ರಾದೇವಿಗಂತೂ ಪ್ರಾಣ ಬಿಡುವುದೊಂದೇ ಉಳಿದಿದ್ದಿತು. ಅಪೂರ್ವವಾಗಿ ಜನಿಸಿದ ಮಗನೂ ಕೈಬಿಟ್ಟು ಹೊದನೆಂದರೆ ಯಾವ ತಾಯಿಯ ಹೃದಯವು ತಾನೇ ಒಡೆದು ಹೋಗದಿರುತ್ತದೆ? ಮೂರ್ಛೆ ತಿಳಿದನಂತರ ಎದ್ದ ಧನ್ಯನು ಇದು ವಿಜಯ ಚೋರನ ಕೆಲಸವೆಂದೇ ನಿರ್ಧರಿಸಿದನು. ಅವನನ್ನು ನೆನಸುತ್ತಿದ್ದಂತೆಯೇ ಭಯದಿಂದ ಕಂಪಿಸಿದನು. ಇನ್ನು ತನ್ನ ಮಗ ಸಿಗುವುದಿಲ್ಲವೆಂದು ನಂಬಿದ ಅವನು ತುಂಬಾ ನಿರಾಶನಾದನು. ಅನಂತರ ಅವನು ಅನೇಕ ಬಗೆಯ ಬೆಲೆಬಾಳುವ ವಸ್ತುಗಳನ್ನು ತೆಗೆದುಕೊಂಡು ಹೋಗಿ ನಗರ ರಕ್ಷಕನಿಗೆ

ಕಾಣಿಕೆಯನ್ನಾಗಿ ಸಮರ್ಪಿಸಿದನು. ಅನಂತರ ತನ್ನ ಮಗನು ಕಳೆದು ಹೋಗಿರುವುದನ್ನೂ ತನಗೆ ವಿಜಯಚೋರನ ಮೇಲೆ ಅಪನಂಬಿಗೆ ಇರುವುದನ್ನೂ ತಿಳಿಸಿದನು. ಕಾಣಿಕೆಯಿಂದ ಸಂತುಷ್ಟನಾದ ನಗರರಕ್ಷಕನು ತನ್ನ ಅನುಯಾಯಿಗಳೊಡನೆ ಧನಸ್ಸು, ಬಾಣ, ಖಡ್ಗಗಳನ್ನು ತೆಗೆದುಕೊಂಡು ಬಾಲಕನನ್ನು ಹುಡುಕಲು ಹೊರಟನು.

ವಿಜಯ ಚೋರನು ಆ ಬಾಲಕನ ಬಟ್ಟೆ—ಬರೆಗಳನ್ನೂ ಆಭರಣಗಳನ್ನೂ ನಗರದ ಸಮೀಪದ ಉಪವನದಲ್ಲೇ ತಂದು ಹಾಕಿದ್ದನು. ಅದು ಧನ್ಯ ವಣಿಜನಿಗೆ ತಲುಪಿ ತನ್ನ ಮಗ ಸತ್ತುಹೋದನೆಂದೆಣಿಸಿ ಅವನೂ ಸಾಯಲೆಂಬುದೇ ಅವನ ಹಂಚಿಕೆಯಾಗಿದ್ದಿತು. ನಗರ ರಕ್ಷಕರು ಬಂದು ಆ ಮಗುವಿನ ವಸ್ತ್ರಾಭರಣಗಳನ್ನು ತೆಗೆದುಕೊಂಡರು. ಅನಂತರ ಅಲ್ಲಿಂದ ಮುಂದೆ ವಿಜಯ ಚೋರನ ಪಾದಗಳ ಗುರುತು ನೆಲದ ಮೇಲೆ ಬಿದ್ದಿರುವುದನ್ನೇ ಅನುಸರಿಸಿಕೊಂಡು ಅವನು ತಂಗುತ್ತಿದ್ದ ಮಾಲುಕಾ ವನಕ್ಕೆ ಬಂದರು. ಮಾಲುಕಾ ವನವು ನಿರ್ಜನವಾದ ಪ್ರದೇಶವಾಗಿದ್ದಿತು. ಅಲ್ಲಿ ಚೋರರ ಪೀಡೆ ಬಹಳವಾಗಿದ್ದುದರಿಂದ ಯಾರೂ ಅಲ್ಲಿಗೆ ಕಾಲಿಡುತ್ತಿರಲಿಲ್ಲ ವಿಜಯ ಚೋರನು ನಗರ ರಕ್ಷಕರು ಬಂದಾಗ ಒಂದು ಮರದ ನೆರಳಲ್ಲಿ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತ ಮಲಗಿದ್ದನು. ನಗರ ರಕ್ಷಕರು ದೂರದಿಂದಲೇ ಅವನೇ ವಿಜಯ ಚೋರನೆಂಬುದನ್ನು ನಿರ್ಧರಿಸಿಕೊಂಡು ಅವನಿಗೆ ತಿಳಿಯದಂತೆ ನಿಶ್ಶಬ್ದವಾಗಿ ಹೆಜ್ಜೆಗಳನ್ನಿಡುತ್ತಾ, ಅವನನ್ನು ಸುತ್ತುಗಟ್ಟಿ ಹಿಡಿದು ಹಾಕಿದರು.

ವಿಜಯ ಚೋರನನ್ನು ಹಿಡಿದಿದ್ದುದು ನಗರ ರಕ್ಷಕರಿಗೆ ತುಂಬಾ ಹೆಮ್ಮೆಯ ಸಂಗತಿಯಾಗಿದ್ದಿತು. ಅವನಿಂದ ನಗರಕ್ಕೆ ನಗರವೇ ಉಪದ್ರವಕ್ಕೆ ಒಳಗಾಗಿದ್ದಿತು. ಆದುದರಿಂದ ಅವನ ದೇಹವನ್ನು ಸಂಕೋಲೆಗಳಿಂದ ಬಂಧಿಸಿ ನಗರದ ಬೀದಿಗಳಲ್ಲೆಲ್ಲ ಮೆರವಣಿಗೆ ಮಾಡಿಸಿದರು. ಬೀದಿಯಲ್ಲಿ ಜನರು ಅವನ ಮೇಲೆ ಬೂದಿ, ಧೂಳುಗಳನ್ನು ಎರಚಿ, ಮನಸ್ಸೀ ನಿಂದಿಸಿ ತಮಗಾದ ಅನ್ಯಾಯಕ್ಕಾಗಿ ಸೇಡನ್ನು ತೀರಿಸಿಕೊಂಡರು. ಧನ್ಯ ವಣಿಜನ ಮನೆಯ ಮುಂದೆ ಬಂದಾಗಲಂತೂ ಅವನಿಗಾದ ಉಪದ್ರವ ಅಷ್ಟಿಷ್ಟಲ್ಲ.

ಪಂಥಕನಂತೂ ತನ್ನ ಮನಸ್ಸು ತೃಪ್ತಿಯಾಗುವವರೆಗೆ ಅವನನ್ನು ನಿಂದಿಸಿದನು. ಭದ್ರಾದೇವಿ ಮತ್ತು ಅವಳ ಪತಿಯೂ ಸಹ ಈ ಕಾರ್ಯದಲ್ಲಿ ಕಡಿಮೆಯಾಗಿರಲಿಲ್ಲ. ರಾಜ, ಮಂತ್ರಿ, ಮೊದಲಾದವರೆಲ್ಲ ವಿಜಯ ಚೋರನನ್ನು ನೋಡಿದರು. ಅವನನ್ನು ಹಿಡಿದು ತಂದ ನಗರ ರಕ್ಷಕರಿಗೆ ಸೂಕ್ತ ಬಹುಮಾನಗಳೂ ದೊರೆತುವು.

ವಿಜಯ ಚೋರನನ್ನು ಒಂದು ಕತ್ತಲೆ ಕೋಣೆಯಲ್ಲಿ ಕೂಡಿಹಾಕಿದರು. ಅವನ ಮೇಲೆ ಭಾರವಾದ ಸರಪಣಿಗಳನ್ನು ತೊಡಿಸಿದರು. ಪ್ರತಿನಿತ್ಯವೂ ಮೂರುವೇಳೆ ಕಜೆಯಿಂದ ಪ್ರಹರಿಸುತ್ತಿದ್ದರು. ಬಹಳ ಸ್ವಲ್ಪ ಆಹಾರವನ್ನು ತಿನ್ನಲು ಕೊಡುತ್ತಿದ್ದರು. ದೃಢಾಂಗನೂ ಕಷ್ಟಸಹಿಷ್ಣುವೂ ಆದ ವಿಜಯನಿಗೆ ಇದಾವುದೂ ಲಕ್ಷ್ಯವಿರಲಿಲ್ಲ. ಕಷ್ಟಗಳನ್ನು ಸಹಿಸುವ ಅಭ್ಯಾಸವು ಅವನಲ್ಲಿ ವರ್ಷಾಂತರಗಳಿಂದಲೂ ಬಂದಿದ್ದಿತು.

ಮಗನು ಹುಟ್ಟಿದ ಮೇಲೆ ಧನ್ಯ ವಣಿಜನು ತಾನು ಮಾಡುತ್ತಿದ್ದ ಅನ್ಯಾಯಗಳನ್ನು ತುಸು ಕಡಿಮೆ ಮಾಡಿದ್ದನು. ಅನ್ಯಾಯದಿಂದ ಅರ್ಜಿಸಿದರೆ ಮಕ್ಕಳಿಗೆ ತೊಂದರೆ ಯಾಗುತ್ತದೆ ಎಂಬುದಾಗಿ ಗುರುಗಳು ಹೇಳುತ್ತಿದ್ದುದನ್ನು ಕೇಳಿದ್ದ ಅವನು ಆ ಭಯದಿಂದ ಕಡಿಮೆ ಮಾಡಿದ್ದನು. ದೇವದತ್ತನು ಹೋದ ಮೇಲಂತೂ ಅವನ ಧನಾರ್ಜನಾ ಮಾರ್ಗವು ಮತ್ತಷ್ಟು ಪಾಪ ಪಥವನ್ನು ಹಿಡಿದಿತ್ತು. ಹೊರಲಾರದ ಬಡ್ಡಿಯನ್ನು ಹಾಕಿ, ಬಡವರನ್ನೆಲ್ಲ ನಿರ್ಗತಿಕರನ್ನಾಗಿ ಮಾಡುತ್ತಿದ್ದನು. ಒಂದಕ್ಕೆ ಹತ್ತರಷ್ಟು ಲಾಭಕ್ಕೆ ಸಾಮಾನುಗಳನ್ನು ಮಾರುತ್ತಿದ್ದನು. ಅನೇಕ ವಿಧವೆಯರ ಆಸ್ತಿಪಾಸ್ತಿಗಳನ್ನು ಅಕ್ರಮವಾಗಿ ಸ್ವಾಧೀನಪಡಿಸಿಕೊಂಡನು. ಹೀಗೆ ಅನ್ಯಾಯಾರ್ಜನೆಯಲ್ಲಿ ತೊಡಗಿದ್ದ ಇವನು ಒಮ್ಮೆ ರಾಜದ್ರೋಹದ ಆಪಾದನೆ ಮೇಲೆ ರಾಜನ ಶಿಕ್ಷೆಗೆ ಗುರಿಯಾದನು. ಇವನನ್ನೂ ವಿಜಯ ಚೋರನಿದ್ದ ಕತ್ತಲೆಯ ಮನೆಗೇ ಕೂಡಿ ಅವನ ಸಂಗಡದಲ್ಲೇ ಬಂಧಿಸಿದರು. ಧನ್ಯ ವಣಿಜನ ಒಂದು ಕೈಯನ್ನು ವಿಜಯನ ಒಂದು ಕೈಯೊಂದಿಗೆ ಸಂಕಲೆಯಿಂದ ಬಿಗಿದಿದ್ದರು. ಇದು ವಿಜಯ ಚೋರನಿಗೆ ಒಂದು ರೀತಿಯಿಂದ ಸಂತೋಷವನ್ನೇ ಉಂಟುಮಾಡಿತ್ತು. ಧನ್ಯನಿಗೆ ಮಾತ್ರ ಬಹು ದುಃಖಕ್ಕೆ ಆಸ್ಪದವಾಗಿದ್ದಿತು.

ಪ್ರತಿನಿತ್ಯವೂ ಧನ್ಯ ವಣಿಜನಿಗೆ ಮನೆಯಿಂದಲೇ ಊಟವು ಬರುವ ವ್ಯವಸ್ಥೆಗೆ ರಾಜನು ಒಪ್ಪಿದ್ದನು. ನಿತ್ಯದಲ್ಲಿ ಭದ್ರಾದೇವಿ ಮೃಷ್ಟಾನ್ನ ಭೋಜನಗಳನ್ನು ಸಿದ್ಧಪಡಿಸಿ, ಸುಗಂಧಪೂರಿತವಾದ ನೀರಿನೊಂದಿಗೆ ಪಂಥಕನ ಮೂಲಕ ಸೆರೆಮನೆಗೆ ಕಳುಹಿಸಿಕೊಡುತ್ತಿದ್ದಳು. ಮೊದಲನೆಯ ದಿನ ಪಂಥಕನು ಬಂದು, ಯಜಮಾನನ ಕೈಕಾಲುಗಳನ್ನು ತೊಳೆಯಿಸಿ, ಭೋಜನ ಸಾಮಗ್ರಿಗಳನ್ನು ಅವನಮುಂದೆ ಬಡಿಸಿದನು. ಊಟ ಮಾಡುತ್ತಿದ್ದ ವೇಳೆಯಲ್ಲಿ ಅವನೊಂದಿಗೇ ಬಂಧಿತನಾಗಿದ್ದ ವಿಜಯ ಚೋರನಿಗೆ ಭೋಜ್ಯ ವಸ್ತುಗಳನ್ನು ನೋಡಿ ಬಾಯಲ್ಲಿ ನೀರು ಬಂದಿತು. ತಡೆಯಲಾರದೆ ಅವನು "ಎಲೈ ಧನ್ಯ! ನಿನ್ನ ಊಟದಲ್ಲಿ ನನಗೂ ಸ್ವಲ್ಪ ಕೊಡು. ನಾನೂ ಸಹ ತುಂಬಾ ಹಸಿದಿದ್ದೇನೆ." ಎಂದನು. ಅವನ ಮಾತನ್ನು ಕೇಳಿ ಧನ್ಯನು ರೇಗುತ್ತಾ "ಎಲಪೋ ಪಾಪಿ! ಕಾಗೆ, ನಾಯಿಗಳಿಗಾದರೂ ನನ್ನ ಊಟವನ್ನು ನೀಡುತ್ತೇನೆ. ನಿನಗೆ ಮಾತ್ರ ಕೊಡುವುದಿಲ್ಲ. ನಿನ್ನಂತಹ ಪುತ್ರ ಘಾತಕನಿಗೆ ಕೊಟ್ಟರೆ ನನಗೆ ರೌರವ ನರಕ ಬರುತ್ತದೆ." ಎಂದುಬಿಟ್ಟನು. ಒಂದು ಅಗಳನ್ನೂ ಕೊಡದೆ ತಾನೇ ತಿಂದು ಪಂಥಕವನ್ನು ಕಳುಹಿಸಿಬಿಟ್ಟನು. ವಿಜಯನೂ ಸಹ ಯಾವ ಉತ್ತರವನ್ನೂ ಕೊಡದೆ ಅವನು ಭಕ್ಷಿಸುವುದನ್ನೇ ನಿರುಪಾಯನಾಗಿ ನೋಡುತ್ತಾ ಕುಳಿತಿದ್ದನು.

ಭೋಜನವಾದ ನಂತರ ಧನ್ಯನಿಗೆ ಶೌಚಕ್ಕೆ ಹೋಗಬೇಕೆನ್ನಿಸಿತು. ದೇಹ ಬಾಧೆಯ ನಿವೃತ್ತಿಗಾಗಿ ವಿಜಯ ಚೋರನನ್ನೂ ಸಂಗಡಲೇ ಕರೆದೊಯ್ಯುವುದು ಅವನಿಗೆ ಅನಿವಾರ್ಯವಾಗಿದ್ದಿತು. ಆದುದರಿಂದ ಅವನನ್ನು ಕುರಿತು, "ವಿಜಯಾ! ನಾವಿಬ್ಬರೂ ಏಕಾಂತ ಸ್ಥಾನಕ್ಕೆ ಹೋಗೋಣ ನಡೆ. ನಾನು ದೇಹಬಾಧೆಯನ್ನು ತೀರಿಸಿಕೊಳ್ಳಬೇಕಾಗಿದೆ" ಎಂದನು. ವಿಜಯನು, "ನನ್ನಿಂದ ಸಾಧ್ಯವಿಲ್ಲ; ನಾನು ಬರುವುದಿಲ್ಲ" ಎಂದನು. ಅದನ್ನು ಕೇಳಿದ ಧನ್ಯನು "ನೀನು ಶೌಚಕ್ಕೆ ಹೋಗುವುದೇ ಇಲ್ಲವೇ?" ಎಂದನು.

"ಹೋಗುತ್ತೇನೆ. ಆದರೆ ನಿನ್ನ ಹಾಗೆ ನನಗೆ ಅವಸರದ ತೊಂದರೆ ಇರುವುದಿಲ್ಲ."

"ಮನುಷ್ಯರೆಂದ ಮೇಲೆ ಎಲ್ಲರಿಗೂ ಒಂದೇ ರೀತಿಯಲ್ಲವೇ? ನನಗೆ ಬೇರೆ, ನಿನಗೆ ಬೇರೆ ಎಂಬುದು ಸಾಧ್ಯವೇ ಇಲ್ಲ."

ಧನ್ಯನ ಮಾತನ್ನು ಕೇಳಿದ ವಿಜಯನು ವ್ಯಂಗ್ಯವಾಗಿ ನಕ್ಕನು. ಮತ್ತೆ ನುಡಿದನು.

"ನೀನಾದರೋ ರಸವಸ್ತುಗಳನ್ನು ಹೇರಳವಾಗಿ ತಿನ್ನುವೆ. ಆದ್ದರಿಂದ ನಿನಗೆ ಶೌಚದ ಬಾಧೆಯು ಹೆಚ್ಚಾಗಿರುತ್ತದೆ. ನಾನಾದರೋ ದಿನಕ್ಕೆ ಒಮ್ಮೆ ಸ್ವಲ್ಪ ರೊಟ್ಟಿ ತಿಂದು ನೀರು ಕುಡಿದರಾಯಿತು. ಇನ್ನು ನಾಳೆಯ ದಿನವೇ ನಾನು ಆಹಾರವನ್ನು ಕಾಣುವುದು. ಆದುದರಿಂದ ನನಗೆ ಶೌಚದ ಬಾಧೆ ಇರುವುದಿಲ್ಲ"

ಎಂದು ನುಡಿದು ವಿಜಯ ಚೋರನು ಶೌಚದ ಸ್ಥಾನಕ್ಕೆ ಹೋಗಲು ಅವನಿಗೆ ಸಹಕರಿಸುವುದಿಲ್ಲವೆಂದು ಖಂಡಿತವಾಗಿ ನುಡಿದು ಬಿಟ್ಟನು. ಆದರೆ ಧನ್ಯ ವಣಿಜನಿಗೆ ಬಾಧೆಯು ಕ್ಷಣಕ್ಷಣಕ್ಕೂ ಹೆಚ್ಚುತ್ತಿದ್ದಿತು. ಆದ್ದರಿಂದ ತಡೆಯಲಾರದೆ ಪದೇ ಪದೇ ಚೋರನನ್ನು ಪೀಡಿಸಲಾರಂಭಿಸಿದನು. ಅವನ ಸಂಕಟವನ್ನು ತಿಳಿದ ವಿಜಯ ಚೋರನು "ನಿನ್ನ ಭೋಜನದಲ್ಲಿ ನನಗೂ ಅರ್ಧ ಕೊಡುವುದಾದರೆ ಬರುವೆ" ಎಂದನು.

"ನನ್ನ ಮಗನನ್ನು ಕೊಂದ ಪಾಪಿಯಾದ ನಿನ್ನಂತಹ ಪಾಪಿಗೆ ನನ್ನ ಭೋಜನದಲ್ಲಿ ಅರ್ಧ ಕೊಡುವುದು ಯಾವ ನ್ಯಾಯ?"

"ನಿನ್ನ ಮಗನನ್ನು ನಾನು ಕೊಂದಿರಬಹುದು. ಆದರೆ ನೀನು ಅಂತಹ ಎಷ್ಟು ಪ್ರಾಣಿಗಳಿಗೆ ಹಂತಕನಾಗಿರುವೆ ಎಂಬುದನ್ನು ಬಲ್ಲೆಯಾ?"

"ನನ್ನಂತಹ ಧರ್ಮಮಾರ್ಗದಲ್ಲಿ ನಡೆಯುವ ಗೃಹಸ್ಥನು ಹಂತಕನಾಗುವುದೆಂದರೇನು? ಅನೇಕ ದಾನ ಧರ್ಮಗಳನ್ನು ಮಾಡಿದ್ದೇನೆ; ವ್ರತ ನೋಂಪಿಗಳನ್ನು ಆಚರಿಸಿದ್ದೇನೆ"

"ಅವೆಲ್ಲವನ್ನೂ ಆಡಂಬರಕ್ಕಾಗಿ ಮಾಡಿರುವೆ. ಹೆಚ್ಚು ಬಡ್ಡಿಯನ್ನು ಹೇರಿ, ಎಷ್ಟು ಬಡವರ ಮನೆಗಳನ್ನು ಮುರಿದಿಲ್ಲ? ಅನ್ಯಾ

ಯದ ವ್ಯಾಪಾರವನ್ನು ಮಾಡಿ ಎಷ್ಟು ಜನಗಳಿಗೆ ಮೋಸಮಾಡಿಲ್ಲ? ಎಷ್ಟು ಜನ ವಿಧವೆಯರನ್ನು ನಿರ್ಗತಿಕರನ್ನಾಗಿ ಮಾಡಿಲ್ಲ? ನಾನು ರಾತ್ರಿ ವೇಳೆ ಕಳ್ಳತನ ಮಾಡುತ್ತೇನೆ. ನೀನು ಹಗಲಿನಲ್ಲೇ ಲೂಟಿ ಮಾಡುತ್ತಿರುವೆ. ನಾನು ರಾತ್ರಿಯ ಕಳ್ಳನಾದರೆ, ನೀನು ಹಗಲುಗಳ್ಳ!


ವಿಜಯ ಚೋರನ ಮಾತನ್ನು ಕೇಳಿದ ಧನ್ಯನಿಗೆ ತನ್ನ ಜೀವನದ ಹಿಂದಿನ ಆಚರಣೆಯೆಲ್ಲ ನೆನಪಿಗೆ ಬಂದಿತು. ತಾನು ಮಾಡಿದ್ದ ಒಂದೊಂದು ಅನ್ಯಾಯಗಳನ್ನು ಚಿಂತಿಸುತ್ತಾ ಬಂದನು. ಅವನು ಹೇಳಿದುದರಲ್ಲಿ ಯಾವುದೂ ಸುಳ್ಳಾಗಿರಲಿಲ್ಲ. ಅವನು ಒಂದು ಬಗೆಯ ಕಳ್ಳನಾಗಿದ್ದರೆ ತಾನೂ ಮತ್ತೊಂದು ಬಗೆಯ ಕಳ್ಳನೆಂಬುದರಲ್ಲಿ ಸಂದೇಹವಿಲ್ಲವೆಂದುಕೊಂಡನು. ಅವನು ರಾತ್ರಿಯ ಕಳ್ಳನಾಗಿದ್ದರೆ ತಾನು ಹಗಲುಗಳ್ಳನೆಂಬುದು ಸಾಮ್ಯವೆಂಬುದು ದೃಢವಾಯಿತು.

ಅಂದಿನಿಂದ ತನ್ನ ಭೋಜನದಲ್ಲಿ ಅರ್ಧವನ್ನು ಅವನಿಗೂ ಕೊಡಲೊಪ್ಪಿದನು. ತಾನು ಮಾಡಿದ ಕಾರ್ಯಗಳಿಗಾಗಿ ಪಶ್ಚಾತ್ತಾಪವನ್ನು ಹೇಳಿ ಮರುಗಿದನು. ಶಿಕ್ಷೆಯ ಅವಧಿಯು ಮುಗಿದ ನಂತರ ವಿಜಯ ಚೋರನನ್ನೂ ಬಿಡಿಸಿದನು. ತಾನು ಅಕ್ರಮದಿಂದ ತೆಗೆದು ಕೊಂಡಿದ್ದ ಅವನ ಆಸ್ತಿ ಪಾಸ್ತಿಗಳನ್ನು ಹಿಂತಿರುಗಿಸಿದನು. ಧನ್ಯನ ಪರಿವರ್ತನೆಯನ್ನು ನೋಡಿ ಗಂಡ ವಿಜಯ ಚೋರನೂ ಸಹ ಸಂತುಷ್ಟನಾಗಿ ಅವನ ಮಗನನ್ನು ಹಿಂತಿರುಗಿಸಿದನು.

ಇದರಿಂದ ಹರ್ಷಿತನಾದ ಧನ್ಯ ವಣಿಜನು ಅವನನ್ನು ಮತ್ತಷ್ಟು ಸನ್ಮಾನಿಸಿದನು. ಆದರೆ ದ್ರೋಹಾತ್ಮಕವಾದ ವ್ಯಾಪಾರದ ವೃತ್ತಿಯಲ್ಲೇ ಅವನಿಗೆ ಜಿಹಾಸೆ ಹುಟ್ಟಿ ಎಲ್ಲವನ್ನು ಬಿಟ್ಟು ವೈರಾಗ್ಯ ಹೊಂದಿ, ಜೈನ ಮುನಿಗಳ ಬಳಿ ದೀಕ್ಷೆ ಪಡೆದನು. ಬಹುಕಾಲದ ತಪಸ್ಸಿನ ಫಲದಿಂದ ಸ್ವರ್ಗವನ್ನು ಪಡೆದನು.

೩

ಪೂರ್ವಭವ ಸ್ಮರಣೆ



ಭಗವಾನ್ ಮಹಾವೀರ ತೀರ್ಥಂಕರರ ವಿಹಾರ ಮಗಧ ದೇಶದಲ್ಲಿ ನಡೆಯುತ್ತಿತ್ತು. ಆಗ ಮಗಧದೇಶಕ್ಕೆ ರಾಜ ಗೃಹ ರಾಜಧಾನಿಯಾಗಿತ್ತು.

ಮಗಧ ದೇಶ ಸಕಲ ಸಂಪತ್ಸಮೃದ್ಧವಾಗಿದ್ದತೆಂಯೇ ಆಧ್ಯಾಪಕ ಸಂಪತ್ತಿನಿಂದಲೂ ಸಮೃದ್ಧವಾಗಿತ್ತು. ರಾಜಗೃಹ ನಗರ ಸಹ ಆಧ್ಯಾತ್ಮಿಕ ಸಂಪತ್ತಿನ ಕೇಂದ್ರವಾಗಿತ್ತು.

ರಾಜಗೃಹ ಶ್ರೇಣಿಕನೆಂಬುವನು ಮಹಾರಾಜನಾಗಿದ್ದ. ಅವನು ಧರ್ಮಾಭಿಮಾನಿಯಾಗಿದ್ದು ಧಾರ್ಮಿಕ ಕಾರ್ಯಗಳ ಪ್ರೋತ್ಸಾಹಕ ನಾಗಿದ್ದ. ಅದೇ ನಗರದಲ್ಲಿ ನಾಗದತ್ತನೆಂಬ ಮಹಾ ಧನಿಕನೊಬ್ಬನಿದ್ದ. ಆತನ ಹೆಂಡತಿ ಭರದತ್ತೆ. ಈ ದಂಪತಿಗಳು ಸಹ ದಾನ ಧರ್ಮಾಧಿಗಳಲ್ಲಿ ನಿರತರಾಗಿ ಸನ್ಮಾರ್ಗದಲ್ಲೇ ನಡೆಯುತ್ತಿದ್ದರು. ಅವರಲ್ಲಿ ಪರಸ್ಪರ ಪವಿತ್ರವಾದ ಪ್ರೇಮವೂ ನೆಲಸಿತ್ತು. ಇವರ ಸಂಸಾರ ಸುಖಮಯವಾಗಿದ್ದು ಆದರ್ಶವಾಗಿತ್ತು. ಆದರೆ ಕಾಲಗರ್ಭದಲ್ಲಿ ಅಡಗಿರುವುದನ್ನು ಕಾಣಬಲ್ಲವರಾರು? ಒಂದು ದಿನ ನಾಗದತ್ತನು ಆಕಸ್ಮಿಕವಾಗಿ ಮೃತ್ಯುವಶನಾದನು. ಆದರೆ ಅವನಿಗೆ ಸಾಯುವಾಗ ಅದರ್ಶಳಾದ ಪತ್ನಿ, ವೈಭವೋಪೇತವಾದ ಸಂಪತ್ತು—ಇವುಗಳನ್ನು ಬಿಟ್ಟು ಸಾಯಲಾರದೆ ವ್ಯಾಮೋಹದಿಂದ ಒದ್ದಾಡಿದನು. ಇದರಿಂದ ಅವನಿಗೆ ಅರ್ತ ಧ್ಯಾನವುಂಟಾಯಿತು. ಇದರ ಪರಿಣಾಮವಾಗಿ ಅವನಿಗೆ ಮಾನಸಿಕ ಸ್ಥಿತಿ ಕೆಟ್ಟಿತು. ಮನುಷ್ಯಾಭವವು ಅಳಿದು ತಿರ್ಯಂಚ ಜನ್ಮದಲ್ಲಿ ಜನಿಸಬೇಕಾಯಿತು.

ವ್ಯಾಮೋಹದಿಂದ ಆತನನಾಗಿ ಮೃತ್ಯುವಶನಾದ ನಾಗದತ್ತ ಮರು ಜನ್ಮದಲ್ಲಿ ಕಪ್ಪೆಯಾಗಿ ಜನಿಸಿದನು. ತನ್ನ ಮನೆಯ ಹಿತ್ತಲಲ್ಲಿದ್ದ ಭಾವಿಯೇ ಆ ಕಪ್ಪೆಗೆ ಆವಾಸಸ್ಥಾನವಾಗಿತ್ತು. ಆ ಭಾವಿಯಿಂದ ಹೊರ ಬಂದು ಮನೆಯಲ್ಲೆಲ್ಲಾ ಓಡಾಡಬೇಕು. ತನ್ನ ವೈಭವದ ಸ್ಥಿತಿ ಏನಾಗಿದೆ ಎಂಬುದನ್ನು ಮತ್ತೆ ಕಾಣಬೇಕು—ಇವೇ ಮೊದಲಾದ ಆಲೋಚನೆಗಳಿಂದ ಕಪ್ಪೆ ದಿನವೂ ಸೊರಗುತ್ತಿತ್ತು. ಆದರೆ ಬಾವಿಯಿಂದ ಹೊರ ಬರಲಾರದೆ ತಳಮಳಿಸುತ್ತಿತ್ತು.

ಒಂದು ದಿನ ಬಾವಿಯಿಂದ ನೀರನ್ನು ಸೇದಲು ಹಗ್ಗಕ್ಕೆ ಬಿಂದಿಗೆಯನ್ನು ಕಟ್ಟಿ ಬಾವಿಯೊಳಕ್ಕೆ ಬಿಟ್ಟಾಗ ಅದನ್ನು ಸೇರಿ ಆ ಕಪ್ಪೆ

ಹೊರಕ್ಕೆ ಬಂದುಬಿಟ್ಟಿತು. ಕುಪ್ಪಳಿಸುತ್ತಾ ಮನೆಯೊಳಕ್ಕೆ ಬಂದಿತು. ಅಲ್ಲಿ ಭವದತ್ತೆಯನ್ನು ಕಂಡು ಪೂರ್ವಭವ ಸ್ಮರಣೆಯಿಂದ ವ್ಯಾಮೋಹ ವನ್ನು ಹೊಂದಿ, ಅವಳನ್ನು ಆಗಲೂ ಪ್ರೀತಿಸಲು ಆತುರಗೊಂಡಿತು. ಈ ಕಪ್ಪೆ ಹಿಂದಿನ ಜನ್ಮದಲ್ಲಿ ತನ್ನ ಪತಿಯಾಗಿದ್ದನೆಂದು ಭವದತ್ತೆಗೆ ಹೇಗೆ ತಿಳಿಯಬೇಕು ? ತನ್ನ ಪತಿ ಕಪ್ಪೆಯಾಗಿ ಹುಟ್ಟಿಯಾನು ಎಂದು ಯಾವ ಸ್ತ್ರೀಯುತಾನೆ ಕಲ್ಪಿಸಿಯಾಳು ?

ಕಪ್ಪೆ ಭವದತ್ತೆಯ ಮೇಲೆ ಧಾವಿಸಿತು. ಅವಳ ಮೈಮೇಲೆ ಹತ್ತ ತೊಡ ಗಿತು. ಅವಳು ಕಪ್ಪೆಗೆ ಹೆದರಿ ಹಿಂದಕ್ಕೆ ಸರಿದಳು. ಅದನ್ನು ದೂರಕ್ಕೆ ನೂಕಿದಳು. ಅದು ಮತ್ತೆ ಮತ್ತೆ ತನ್ನ ಮೇಲೆ ಬೀಳುತ್ತಿರುವುದನ್ನು ಕಂಡು ಸೇವಕರಿಂದ ಹಿಡಿಸಿ ಮನೆಯಿಂದ ಹೊರಕ್ಕೆ ಹಾಕಿಸಿ ಬಾಗಿ ಲನ್ನು ಮುಚ್ಚಿದಳು. ಆದರೆ ಅದು ಬಾಗಿಲಲ್ಲೇ ಕಾಯುತ್ತಿದ್ದು ಬಾಗಿ ಲನ್ನು ತೆಗೆದ ಕೂಡಲೇ ಮತ್ತೆ ಅವಳ ಬಳಿಗೇ ಹಾರಿ ಹೋಗುತಿತ್ತು. ಹೀಗೆ ಎರಡು ಮೂರು ದಿನಗಳು ಕಳೆದನಂತರ ಭವದತ್ತೆಗೆ ಸಂಶಯ ಬಂತು. ಅದರ ವರ್ತನೆಯ ಬಗ್ಗೆ ಕುತೂಹಲವೂ ಕೆರಳಿತು. ತನ್ನನ್ನು ಕಂಡೊಡನೆ ಈ ಕಪ್ಪೆ ಹೀಗೇಕೆ ಮಾಡುತ್ತಿದೆ ಎಂಬ ಆಲೋಚನೆ ಅವಳ ಮನಸ್ಸಿನಲ್ಲಿ ಆಗಾಗ್ಗೆ ಬರತೊಡಗಿತು. ಅವಳಿಗೆ ನಿಜ ಸಂಗತಿಯ ಅರಿ ವಾಗಲಿಲ್ಲ.

ಒಮ್ಮೆ ಆ ನಗರಕ್ಕೆ ಸುವ್ರತರೆಂಬ ಮುನಿಗಳು ಆಗಮಿಸಿದರು. ಅವರಿಗೆ ಅವಧಿ ಜ್ಞಾನವಿತ್ತು. ಕುಳಿತೆಡೆಯಲ್ಲೇ ಎಲ್ಲವನ್ನೂ ತಿಳಿಯುವ ಶಕ್ತಿಯೇ ಅವಧಿಜ್ಞಾನದ ಸ್ವರೂಪ. ನಗರದ ಜನರು ಆ ಮುನಿಗಳ ದರ್ಶನವನ್ನು ಮಾಡಿ, ಅವರಿಂದ ಧರ್ಮೋಪದೇಶಗಳನ್ನು ಕೇಳಿ ಆನಂದ ತಲ್ಲೀನರಾದರು. ಭವದತ್ತೆಯು ಸಹ ಮುನಿಗಳ ದರ್ಶನ ಮಾಡಿದಳು. ವಂದನೆಯನ್ನು ಮಾಡಿ ಅವರಿಂದ ಆಶೀರ್ವಾದವನ್ನು ಪಡೆದ ನಂತರ ಕಪ್ಪೆಯ ವಿಚಾರವನ್ನು ಕೇಳಿದಳು.

ಅವಧಿಜ್ಞಾನ ಸಂಪನ್ನರಾದ ಮುನಿಗಳಿಗೆ ಕಪ್ಪೆಯ ಸಂಗತಿ ತಿಳಿಯು ವುದು ತಡವಾಗಲಿಲ್ಲ. ಆಗ ಅವರು ಹೇಳಿದರು

"ನಿನ್ನ ಪತಿಯ ಜೀವವೇ ಆ ಕಪ್ಪೆ. ಆರ್ತ ಧ್ಯಾನದಿಂದ, ವ್ಯಾಮೋಹದಿಂದ ನಿನ್ನನ್ನು ಬಿಡಲಾರದೆ ಸತ್ತ ನಿನ್ನ ಪತಿ ಈ ಭವದಲ್ಲಿ ಕಪ್ಪೆಯಾಗಿದ್ದಾನೆ. ನಿನ್ನ ಮೇಲಿನ ವ್ಯಾಮೋಹದಿಂದ, ಪೂರ್ವ ಭವಸ್ಮರಣೆಯಿಂದ ಪೀಡಿತನಾಗಿ ನಿನ್ನ ಹತ್ತಿರಕ್ಕೇ ಬರುತ್ತಿದ್ದಾನೆ" ಎಂದು ನುಡಿದರು.

ಮುನಿಗಳ ಮಾತನ್ನು ಕೇಳಿದ ಭವದತ್ತೆಯ ಮನಸ್ಸಿನಲ್ಲಿ ಬಹುದುಃಖವಾಯಿತು. ತನ್ನ ಪತಿಯ ಸ್ಥಿತಿಗಾಗಿ ತುಂಬ ಕನಿಕರವಾಯಿತು ಬಹುವಾಗಿ ಮರುಗಿದಳು. ಕಪ್ಪೆಯ ವಿಚಾರದಲ್ಲಿ ಆದರವೂ ಹುಟ್ಟಿತು. ಅಂದಿನಿಂದ ಅವನ್ನು ಮನೆಯಲ್ಲೇ ಇಟ್ಟು ಭಯಭಕ್ತಿಯಿಂದ ಸೇವೆ ಮಾಡತೊಡಗಿದಳು. ಕಪ್ಪೆಯೂ ಸಹ ಸಮಾಧಾನಗೊಂಡು ಹೊಂದಿಕೊಂಡು ಇರತೊಡಗಿತು.

ಹೀಗಿರುವಾಗ ಭಗವಾನ್ ಮಹಾವೀರರು ವಿಹಾರಮಾಡುತ್ತ ರಾಜಗೃಹದ ಸಮೀಪದಲ್ಲಿರುವ ವೈಭಾರಗಿರಿಗೆ ಆಗಮಿಸಿದರು. ಅಲ್ಲಿ ಸಮವಸರಣದ ರಚನೆಯಾಯಿತು. ಧರ್ಮೋಪದೇಶವು ದಿವ್ಯಧ್ವನಿಯ ಮೂಲಕ ಮೊಳಗತೊಡಗಿತು. ಸಕಲ ಜನರೂ, ಶ್ರಾವಕಶ್ರಾವಿಕೆಯರೂ ನೆರೆದು ಅವರ ಉಪದೇಶಾಮೃತವನ್ನು ಸವಿದರು. ಅಲ್ಲಿ ಪ್ರತಿ ನಿತ್ಯ ಅಧ್ಯಾತ್ಮ ರಸದ ಪ್ರವಾಹವೇ ಹರಿಯತೊಡಗಿತು. ಅಸಂಖ್ಯಾತ ಭಕ್ತರು ತಂಡ ತಂಡವಾಗಿ ಬಂದು ಭಗವಾನರನ್ನು ಸಂದರ್ಶಿಸಿ ಆನಂದವನ್ನು ಪಡೆಯುತ್ತಿದ್ದರು.

ಹಲವರು ತೀರ್ಥಂಕರ ಪೂಜೆಗೆಂದು ಅನೇಕ ಬಗೆಯ ಮಂಗಳದ್ರವ್ಯವನ್ನು ತೆಗೆದುಕೊಂಡು ಬರುತ್ತಿದ್ದರು. ವಸ್ತ್ರಾಲಂಕಾರಗಳಿಂದ ಭೂಷಿತರಾದ ಅನೇಕರು ಸಭೆಯಲ್ಲಿ ಭಕ್ತಿಯಿಂದ ನೆರೆಯುತ್ತಿದ್ದರು. ನಗರಕ್ಕೆ ನಗರವೇ ಆನಂದದಲ್ಲಿ ಮುಳುಗಿದ್ದಿತು. ಎಲ್ಲಿ ಹೋದರೂ ಭಗವಂತನ ದರ್ಶನ, ಪೂಜೆಗಳ ಮಾತೇ ಕೇಳಿಬರುತ್ತಿತ್ತು. ಎಲ್ಲರಲ್ಲೂ ಸಮವಸರಣದತ್ತ ಸಾಗುವ ಆತುರವೇ ತುಂಬಿತ್ತು. ಶ್ರದ್ಧಾಳುಗಳಾದ ಭಕ್ತರ ಜಯಜಯಕಾರದಿಂದ ಆಗಸವೆಲ್ಲ ಬಿರಿಯುವಂತಾಗಿತ್ತು.

ಜನಗಳ ಸಡಗರ, ಜಯಜಯಕಾರದ ಧ್ವನಿಯನ್ನು ಕಪ್ಪೆಯ
ಕೇಳಿತು. ಮಹಾವೀರರ ಆಗಮನವನ್ನು ತಿಳಿದು ಅದಕ್ಕೂ ಹರ್ಷ
ಯಿತು. ಅದಕ್ಕೂ ಮಹಾವೀರರ ದರ್ಶನಕ್ಕೆ ಹೋಗಬೇಕೆಂಬ ಆಸೆಯ
ಯಿತು. ಎಲ್ಲರೂ ಮಂಗಳ ದ್ರವ್ಯಗಳನ್ನು ಕೊಂಡು ಹೋಗುತ್ತಿರುವ
ತಾನು ಏನನ್ನು ಕೊಂಡೊಯ್ಯುವುದು? ಕೊನೆಗೆ ತನಗೆ ದೊರೆತ ಒಂ
ಹೂವನ್ನೇ ಬಾಯಲ್ಲಿ ಕಚ್ಚಿಕೊಂಡು ರಾಜಮಾರ್ಗದಲ್ಲಿ ಕುಪ್ಪಳಿಸುತ
ವೈಭಾರ ಗಿರಿಯತ್ತ ಸಾಗತೊಡಗಿತು.

ರಾಜಗೃಹದ ರಾಜನಾದ ಶ್ರೇಣಿಕನೂ ಭಗವಾನರ ದರ್ಶನಕ್ಕೆ ಹೊ
ಟಿದ್ದನು. ಆನೆಯ ಅಂಬಾರಿಯಮೇಲೆ ಕುಳಿತ ಅವನು ರಾಜ ವೈಭವದಿ
ಸಾಗುತ್ತಿದ್ದ. ಅವೇ ಮಾರ್ಗದಲ್ಲಿ ಕಪ್ಪೆ ಸಹ ತೀರ್ಥಂಕರರ ದರ್ಶ
ಉತ್ಸಾಹವಲ್ಲಿ ಮುಂದೆಮುಂದೆ ಸಾಗುತ್ತಿತ್ತು. ಕಪ್ಪೆಯಂತಹ ಸಣ್ಣ ಜಂ
ವನ್ನು ಆನೆಯಂತಹ ದೊಡ್ಡ ಪ್ರಾಣಿ ಹೇಗೆ ಕಾಣಬಲ್ಲದು? ಭಗವಂ
ದರ್ಶನದಲ್ಲಿ ಮಗ್ನವಾಗಿದ್ದ ಕಪ್ಪೆಗೂ ಆನೆಯನ್ನು ನೋಡುವ ಅವಕಾಶ
ಇರಲಿಲ್ಲ. ಹೀಗಾಗಿ ಆನೆಯ ಬೃಹತ್‌ಸ್ತಂಭವಂತಿದ್ದ ಕಾಲು ಕಪ್ಪೆಯ
ತುಳಿದುಬಿಟ್ಟಿತು! ಇನ್ನು ಬಡಜಂತು ಉಳಿಯುವುದೆಂತು? ನುಚ್ಚು ನೂ
ಯಿತು!! ಆದರೂ ಅದು ಭಕ್ತಿಭಾವದಿಂದ ಕಚ್ಚಿದ್ದ ಹೂವು ಬಾಯ
ಇತ್ತು !!!

ಆದರೆ ಅದು ಮೃತ್ಯುವನ್ನಪ್ಪುವಾಗ ಅವರ ಮನಸ್ಸಿನಲ್ಲಿ ಮಹಾ
ತೀರ್ಥಂಕರ ಧ್ಯಾನವೇ ತುಂಬಿಹೋಗಿದ್ದರಿಂದ, ಆ ಸದ್ಭಾವನೆ
ಪರಿಣಾಮದಿಂದ ಸದ್ಗತಿಯೇ ಪ್ರಾಪ್ತಿಯಾಯಿತು. ದೇವಗತಿ ದೊರಕಿತು

ಆದುದರಿಂದ ಸಾಯುವಾಗ ಮನಸ್ಸಿನಲ್ಲಿ ಶುಭಪರಿಣಾಮವಿರಬೇ
ಅಶುಭ ಭಾವನೆ ಇರಬಾರದು. ಯಾವಬಗೆಯ ಆರ್ತನ ರೌದ್ರಭಾವಗ
ಇರಬಾರದು. ಇದ್ದರೆ ದುರ್ಗತಿಯೇ ಗತಿ—ಎಂಬುದೇ ಈ ಕಥೆಯ ಸಂದೆ

೪

ಉಷ್ಟ್ರಗ್ರೀವ

ಮೃಣಾಲಪುರವೆಂಬ ಒಂದು ನಗರ ಪ್ರಸಿದ್ಧವಾಗಿತ್ತು. ಅದು ಂಪತ್ಸಮೃದ್ಧಿಯಿಂದ ಕೂಡಿತ್ತು. ಅಲ್ಲಿನ ಜನರಿಗೆ ದಾರಿದ್ರ್ಯವೆಂಬ ೀಡೆಯು ಸೋಂಕಿರಲಿಲ್ಲ. ಬ್ರಾಹ್ಮಣರು ತಮ್ಮ ನಿತ್ಯ ಕರ್ಮಗಳನ್ನು ಬಿಡದೆ ನುಸರಿಸುತ್ತ, ಚಾರಿತ್ರವಂತರಾಗಿ ಇತರ ವರ್ಣದವರಿಗೆ ಮಾರ್ಗದರ್ಶಕ ಾಗಿದ್ದರು. ಕ್ಷತ್ರಿಯರು ಸ್ವಜನ ರಕ್ಷಣೆ, ಶತ್ರುನಿಗ್ರಹ ಮೊದಲಾದುವನ್ನು ರಿಪಾಲಿಸುವುದರಲ್ಲಿ ಹೆಸರಾಗಿದ್ದರು. ವೈಶ್ಯರು ದೊಡ್ಡ ದೊಡ್ಡ ಉಪ್ಪರಿಗೆ ಳನ್ನು ನಿರ್ಮಿಸಿಕೊಂಡು ಹೇರಳವಾದ ಧನವನ್ನು ಧರ್ಮ ಮಾರ್ಗದಿಂದ ಂಪಾದಿಸುತ್ತಿದ್ದರು. ಅಲ್ಲದೆ ದಾನ ಧರ್ಮಗಳನ್ನು ಮಾಡುತ್ತ ಜಿನಧರ್ಮ ಾಲಿತರಾಗಿದ್ದರು. ಶೂದ್ರರು ಕೃಷಿಯನ್ನು ಮಾಡಿ ಸಮೃದ್ಧ ಬೆಳಸನ್ನು ಳೆಸಿ ನಾಡಿಗೆ ಒದಗಿಸುತ್ತಿದ್ದರು. ಹೀಗೆ ಮೃಣಾಲಪುರವು ನೆಮ್ಮದಿ ಮತ್ತು ುಖಗಳಿಂದ ತುಂಬಿ ಕಂಗೊಳಿಸುತ್ತಿತ್ತು.

ಈ ಮೃಣಾಲಪುರದಲ್ಲಿ ಶ್ರೀದತ್ತನೆಂಬ ದೊಡ್ಡ ವರ್ತಕನಿದ್ದನು. ವನು ಮಹಾಧನಿಕನಾಗಿದ್ದನು. ಜಿನ ಧರ್ಮೋಕ್ತವಾದ ವ್ರತಗಳನ್ನು ಚರಿಸುತ್ತಿದ್ದನು. ಗೃಹಸ್ಥರಿಗೆ ಆಗತ್ಯವಾದ ದೇವಪೂಜೆ, ಗುರುಸೇವೆ, ಾಸ್ತ್ರ ಪಠನೆ, ವ್ರತಾಚರಣೆ, ತಪಸ್ಸು ಮತ್ತು ದಾನಗಳೆಂಬ ಷಟ್ಕರ್ಮಗಳನ್ನು ಚರಿಸುತ್ತಿದ್ದನು. ಅವನಿಗೆ ರತಿಕಾಂತೆ ಎಂಬ ಅತ್ಯಂತ ಚೆಲುವೆಯಾದ ಬ್ಬಳು ಮಗಳಿದ್ದಳು. ಅವಳ ಸೌಂದರ್ಯ ಅನುಪಮವಾಗಿತ್ತು. ಅನೇಕ ನಿಕರು ಅವಳನ್ನು ತಮ್ಮ ಮನೆಯ ಸೊಸೆಯನ್ನಾಗಿ ಮಾಡಿಕೊಳ್ಳಬೇಕೆಂದು ಯತ್ನಿಸಿದರೂ ಶ್ರೀದತ್ತನು ಅವಳನ್ನು ತನ್ನ ತಂಗಿಯ ಮಗನಾದ

ಉಷ್ಟ್ರಗ್ರೀವನೆಂಬ ತರುಣನಿಗೆ ಕೊಟ್ಟು ಮದುವೆ ಮಾಡುವ ಇಚ್ಛೆಯುಳ್ಳವ ನಾಗಿದ್ದನು.

ಇದಕ್ಕೆ ಕಾರಣವೂ ಇತ್ತು. ಉಷ್ಟ್ರಗ್ರೀವ ಮತ್ತು ರತಿಕಾಂತೆಯರು ಬಾಲ್ಯದಿಂದಲೂ ಒಡನಾಡಿದವರಾಗಿದ್ದರು. ಒಡಗೂಡಿ ಬೆಳೆದವರಾಗಿದ್ದರು. ಬಾಲ್ಯದಲ್ಲಿ ಹುಡುಗತನದ ಬುದ್ಧಿಯಿಂದ ಆಟಪಾಠಗಳಲ್ಲಿ ಮಗ್ನರಾಗಿರುತ್ತಿದ್ದ ಅವರಲ್ಲಿ ಯೌವನವು ಅಂಕುರವಾದಂತೆ ಪರಸ್ಪರ ಪ್ರೇಮವು ಬೆಳೆಯ ತೊಡಗಿತು. ಇದನ್ನು ಶ್ರೀದತ್ತನು ಗಮನಿಸಿದ್ದನು. ಆದುದರಿಂದ ಮಗಳನ್ನು ತನ್ನ ಸೋದರಳಿಯನಿಗೇ ಕೊಟ್ಟು ವಿವಾಹಮಾಡಬೇಕೆಂದು ನಿರ್ಧರಿಸಿ ಕೊಂಡಿದ್ದನು.

ಆದರೆ ಮನುಷ್ಯ ಆಲೋಚಿಸಿದಂತೆಯೇ ಎಲ್ಲಿ ನಡೆಯುತ್ತದೆ? "ಅನ್ಯಥಾ ಚಿಂತಿತಂ ಕಾರ್ಯಂ ದೈವೇನಕೃತಮನ್ಯಥಾ" ಎಂಬಂತೆ ಮನುಷ್ಯ ಒಂದನ್ನು ಆಲೋಚಿಸಿದರೆ, ದೈವವೇ ಬೇರೆ ಮಾಡುತ್ತವೆ. ಶ್ರೀದತ್ತನ ಆಲೋಚನೆಯೂ ಹೀಗೆಯೇ ಆಯಿತು.

ಇದ್ದಕ್ಕಿದ್ದಂತೆ ಉಷ್ಟ್ರಗ್ರೀವ ವ್ಯಾಪಾರಕ್ಕಾಗಿ ವಿದೇಶಕ್ಕೆ ಹೋಗ ಬೇಕಾಯಿತು. ಮದುವೆಯನ್ನು ಮುಗಿಸಿಯೇ ಕಳುಹಿಸಲು ಶ್ರೀದತ್ತ ನಿಶ್ಚಯಿಸಿದ. ಆದರೆ ಉಷ್ಟ್ರಗ್ರೀವ ಇದಕ್ಕೆ ಸಿದ್ಧನಾಗಲಿಲ್ಲ. ವ್ಯಾಪಾರವನ್ನು ಮುಗಿಸಿಕೊಂಡು ವಿದೇಶದಿಂದ ಬಂದ ನಂತರವೇ ತಾನು ಮದುವೆಯಾಗು ವುದಾಗಿ ಹೇಳಿದನು. ಉಷ್ಟ್ರಗ್ರೀವನನ್ನು ಅಗಲಿರಲು ರತಿಕಾಂತೆಗೂ ದುಃಖ ವಾಯಿತು. ಅವನನ್ನು ಮದುವೆಗಾಗಿ ಮನವೊಲಿಸಲು ಅವಳು ಮಾಡಿದ ಪ್ರಯತ್ನವೂ ನಿಷ್ಫಲವಾಯಿತು. ಕೊನೆಗೆ ಶ್ರೀದತ್ತನು ಉಷ್ಟ್ರಗ್ರೀವನನ್ನು ಕುರಿತು "ನಿನಗೆ ಹನ್ನೆರಡುವರ್ಷ ಅವಧಿಯನ್ನು ಕೊಡುತ್ತೇನೆ. ಅಷ್ಟರೊಳಗೆ ನೀನು ಹಿಂತಿರುಗಿ ಬಾರದಿದ್ದರೆ ನಾನು ರತಿಕಾಂತೆಯನ್ನು ಬೇರೆಯವನಿಗೆ ಕೊಟ್ಟು ವಿವಾಹ ಮಾಡುತ್ತೇನೆ" ಎಂದು ಹೇಳಿದನು. ಈ ನಿಯಮಕ್ಕೆ ಉಷ್ಟ್ರಗ್ರೀವನು ಒಪ್ಪಿದನು. ರತಿಕಾಂತೆಗಂತೂ ಒಪ್ಪಿಕೊಳ್ಳುವುದು ಅನಿವಾರ್ಯವಾಗಿತ್ತು.

ಹನ್ನೆರಡು ವರ್ಷಗಳು ಉರುಳಿದುವು. ವ್ಯಾಪಾರದ ವಿಶೇಷ ಕಾರ್ಯಗಳಿಂದ ಉಷ್ಟ್ರಗ್ರೀವ ಸಕಾಲಕ್ಕೆ ಹಿಂತಿರುಗಿ ಬರಲಾಗಲಿಲ್ಲ. ಇತ್ತ ಶ್ರೀದತ್ತನು ಮತ್ತೆ ಉಷ್ಟ್ರಗ್ರೀವನ ಆಗಮನವನ್ನು ನಿರೀಕ್ಷಿಸುತ್ತಾ ಕುಳಿತಿರಲು ಇಚ್ಛೆಪಡಲಿಲ್ಲ. ಮತ್ತೊಬ್ಬ ವರ್ತಕಪುತ್ರ ಸುಕಾಂತನೆಂಬ ತರುಣನಿಗೆ ಕೊಟ್ಟು ವಿವಾಹ ಮಾಡಲು ನಿಶ್ಚಯಿಸಿದನು. ರತಿಕಾಂತೆಯು ಮೊದ ಮೊದಲು ತನ್ನ ಒಪ್ಪಿಗೆಯನ್ನು ನೀಡಲಿಲ್ಲ. ಆದರೆ ತಂದೆಯ ಛಲದ ಮುಂದೆ ಅವಳು ಒಪ್ಪಿಕೊಳ್ಳಲೇಬೇಕಾಯಿತು. ಒಂದು ದಿನ ವೈಭವದಿಂದ ರತಿಕಾಂತೆ ಮತ್ತು ಸುಕಾಂತರ ವಿವಾಹವು ನಡೆದುಹೋಯಿತು.

ರತಿಕಾಂತೆ ಮತ್ತು ಸುಕಾಂತರ ಮದುವೆಯು ನಡೆದ ಸ್ವಲ್ಪ ದಿನಗಳಲ್ಲೇ ಉಷ್ಟ್ರಗ್ರೀವನು ಹಿಂತಿರುಗಿ ಬಂದನು. ಬಂದಕೂಡಲೇ ಅವನಿಗೆ ರತಿಕಾಂತೆಯ ಮದುವೆಯಾಗಿ ಹೋಗಿರುವುದು ತಿಳಿಯಿತು. ಅವಳನ್ನು ಮದುವೆಯಾಗಿ ಸುಖವಾಗಿರುವೆನೆಂದು ಮನಸ್ಸಿನಲ್ಲಿ ಮಂಡಿಗೆ ತಿನ್ನುತ್ತಾ, ಅದಕ್ಕಾಗಿ ಹೇರಳವಾಗಿ ಐಶ್ವರ್ಯವನ್ನು ಸಂಪಾದಿಸಿಕೊಂಡು ಬಂದಿದ್ದ. ಉಷ್ಟ್ರಗ್ರೀವನ ಮನಸ್ಸಿನಲ್ಲಿ ಇದು ಆಘಾತವಾಯಿತು. ಮದುವೆಯಾಗಿದ್ದರೂ ರತಿಕಾಂತೆಯನ್ನು ತಾನು ಬಿಡಲಾರೆನೆಂದು ಛಲತೊಟ್ಟನು. ರತಿಕಾಂತೆಯನ್ನು ಕಂಡು ಕೂಡಲೇ ತನ್ನೊಡನೆ ಹೊರಟು ಬರಬೇಕೆಂದೂ, ನಿನ್ನನ್ನು ಬಿಟ್ಟು ತಾನು ಬದುಕಲಾರೆನೆಂದೂ ತಿಳಿಸಿದನು. ಆದರೆ ಅವಳು ತಾನು ಈಗ ಪರಸ್ತ್ರೀಯೆಂದೂ, ಕುಲಸ್ತ್ರೀಯರು ಕೈಹಿಡಿದ ಗಂಡನಲ್ಲದೆ ಅನ್ಯರನ್ನು ಬಯಸಿದರೆ ಪಾಪ ಸಂಘಟನೆಯಾಗುವುದೆಂದೂ ತಿಳಿಸಿದಳು. ಧರ್ಮಕ್ಕೆ ವಿರುದ್ಧವಾದರೂ ತಾನು ಬಿಡೆನೆಂದು ಹೇಳಿ ಅವನು ಕಾಡತೊಡಗಿದನು. ಇದನ್ನು ತಿಳಿದ ಅವಳ ಗಂಡ ತನ್ನ ಸೇವಕರಿಂದ ಅವನನ್ನು ತನ್ನ ಮನೆಯಿಂದ ಹೊರಕ್ಕೆ ನೂಕಿಸಿಬಿಟ್ಟನು.

ಇದರಿಂದ ಉಷ್ಟ್ರಗ್ರೀವನ ಮನಸ್ಸಿನಲ್ಲಿ ದ್ವೇಷದ ಕಿಡಿ ಪ್ರಜ್ವಲಿಸಿತೇ ಹೊರತು, ಶಾಂತವಾಗಲಿಲ್ಲ. ರತಿಕಾಂತೆ ಸುಕಾಂತರಿಗೆ ಬಗೆಬಗೆಯ ಕಿರುಕುಳವನ್ನು ಕೊಡಲಾರಂಭಿಸಿದನು. ಹೀಗೆಲ್ಲಾ ಮಾಡಬಾರದೆಂದು

ರತಿಕಾಂತೆ ಬೇಡಿಕೊಂಡರೂ ಉಷ್ಟ್ರಗ್ರೀವನ ಮನಸ್ಸು ಕರಗಲಿ
ಬರಬರುತ್ತಾ ಉಷ್ಟ್ರಗ್ರೀವನ ವರ್ತನೆ ಊರಿನವರಿಗೆಲ್ಲಾ ಬೇಸರ ತಂದಿತು.

ಒಂದು ದಿನ ಸಮಯ ನೋಡಿ ಉಷ್ಟ್ರಗ್ರೀವನು ರತಿಕಾಂತೆಯ ಮನೆ
ಬೆಂಕಿ ಹಚ್ಚಿದನು. ಒಳಗಿದ್ದ ರತಿಕಾಂತೆ ಮತ್ತು ಸುಕಾಂತರು ಬೆಂಕಿ
ಜ್ವಾಲೆಗೆ ಸಿಕ್ಕಿ ಸುಟ್ಟು ಬೂದಿಯಾಗಿಹೋದರು. ಉಷ್ಟ್ರಗ್ರೀವನ ಹೇ
ವರ್ತನೆಯನ್ನು ಕಂಡ ಊರ ಜನರು ಅವನನ್ನು ಹಿಡಿದು ಉರಿಯುತ್ತಿ
ಮನೆಯ ಒಳಕ್ಕೆ ಎಸೆದುಬಿಟ್ಟರು. ಅವನು ಸಹ ಅದೇ ಬೆಂಕಿಯ ಜ್ವಾ
ಯಲ್ಲಿ ಸಿಕ್ಕಿ ಭಸ್ಮೀಭೂತನಾದನು.

ಬೆಂಕಿಯಲ್ಲಿ ಸಿಕ್ಕಿ ಸುಟ್ಟುಹೋದ ಸುಕಾಂತ, ರತಿಕಾಂತೆಯರು ಸ
ಮುಂದಿನ ಭವದಲ್ಲಿ ಎರಡು ಪಾರಿವಾಳಗಳಾಗಿ ಹುಟ್ಟಿದರು. ಉಷ್ಟ್ರಗ್ರೀವ
ರೌದ್ರ ಧ್ಯಾನದಿಂದ ಸತ್ತು ಬೆಕ್ಕಾಗಿ ಹುಟ್ಟಿದನು. ಒಮ್ಮೆ ಈ ಬೆ
ಆ ಪಾರಿವಾಳದ ಜೊತೆಯನ್ನು ನೋಡಿತು. ಪೂರ್ವಜನ್ಮ ವೈರಸ್ಮ
ಯಿಂದ ಕೋಪವು ಜಾಗೃತವಾಯಿತು. ಅವುಗಳನ್ನು ಕೊಲ್ಲಲು ಬೆ
ಹೊಂಚು ಹಾಕ ತೊಡಗಿತು. ಹಲವಾರು ಸಲ ಆ ಪಾರಿವಾಳಗಳಮೇ
ಆಕ್ರಮಣಮಾಡಿತು. ಆ ಪಾರಿವಾಳಗಳು ಸಹ ತಮ್ಮ ಬುದ್ಧಿ ಚಾತುರ್ಯದಿ
ಬೆಕ್ಕಿನ ಆಕ್ರಮಣದಿಂದ ತಪ್ಪಿಸಿಕೊಂಡವು. ಆದರೆ ಬೆಕ್ಕು ಒಂದು ದಿನ
ಎರಡು ಪಾರಿವಾಳಗಳನ್ನು ಬಲಿ ತೆಗೆದುಕೊಂಡಿತು. ಮತ್ತೊಂದು ದಿ
ಬೆಕ್ಕು ಆಯುಷ್ಯಾವಸಾನದಿಂದ ಸತ್ತುಹೋಯಿತು.

ಸತ್ತ ಪಾರಿವಾಳಗಳು ಮುಂದಿನ ಜನ್ಮದಲ್ಲಿ ಮತ್ತೆ ಹಿರಣ್ಯಗ
ಮತ್ತು ಪ್ರಭಾವತಿ ಎಂಬ ದಂಪತಿಗಳಾಗಿ ಜನಿಸಿದರು. ಆ ಜನ್ಮ
ಅವರು ಬಾಲ್ಯದಿಂದಲೇ ಧಾರ್ಮಿಕ ಬುದ್ಧಿಯುಳ್ಳವರಾಗಿ ಧರ್ಮಕಾ
ಗಳ ಪ್ರವೃತ್ತರಾಗಿ ಪುಣ್ಯವನ್ನು ಸಂಪಾದಿಸುತ್ತಿದ್ದರು.

ಬೆಕ್ಕು ಸತ್ತು ತನ್ನ ಪಾಪಕವಪದಪರಂತರೆಯಿಂದ ಪುರುಷಜ
ವನ್ನು ನೀಗಿಕೊಂಡು ಸ್ತ್ರೀಜನ್ಮವನ್ನು ಪಡೆದು ನಿರುದ್ವೇಗನೆಂಬ ಪ್ರ
ನಿಗೆ ವಿದ್ಯುಲ್ಲತೆ ಎಂಬ ಪತ್ನಿಯಾಗಬೇಕಾಯಿತು. ಒಮ್ಮೆ ಹಿರಣ್ಯ ಗ

ಮತ್ತು ಪ್ರಭಾವತೀ ದಂಪತಿಗಳು ಮುನಿಗಳದರ್ಶನಾರ್ಥವಾಗಿ ಜಿನಮಂದಿರಕ್ಕೆ ಬಂದಿದ್ದರು. ಅಲ್ಲಿಗೆ ವಿದ್ಯುದ್ವೇಗ ಮತ್ತು ವಿದ್ಯುಲ್ಲತೆಯರೂ ಬಂದಿದ್ದರು ಪ್ರಭಾವತಿಯನ್ನು ಕಂಡಕೂಡಲೇ ವಿದ್ಯುಲ್ಲತೆಗೆ ಹಿಂದಿನ ಜನ್ಮದ ವೈರಭಾವವು ಜಾಗೃತವಾಯಿತು. ಕೂಡಲೇ ತನ್ನ ಗಂಡನಿಗೆ ಆ ದಂಪತಿಗಳು ತನ್ನ ಶತ್ರುಗಳೆಂದೂ ಅವರನ್ನು ಕೊಲ್ಲಬೇಕೆಂದೂ ತಿಳಿಸಿದಳು. ಆದರೆ ಅವಧಿ ಜ್ಞಾನಸಂಪನ್ನರಾಗಿದ್ದ ಮುನಿಗಳಿಗೆ ಈ ವಿಚಾರವು ತಿಳಿಯಿತು. ಕೂಡಲೇ ಅವರು ಆ ನಾಲ್ಕರಿಗೂ ಸಂಸಾರದಲ್ಲಿ ಅನಿತ್ಯತೆಯನ್ನೂ ಆತ್ಮನ ನಿತ್ಯತೆಯನ್ನು ಬೋಧಿಸಿದರು. ಒಮ್ಮೆ ದ್ವೇಷ ಆರಂಭಿಸಿದರೆ ಹೇಗೆ ಅದು ಜನ್ಮ ಜನ್ಮಕ್ಕೂ ವ್ಯಾಪಿಸುತ್ತದೆ ಎಂಬುದನ್ನು ಉಷ್ಟ್ರಗ್ರೀವನ ವೃತ್ತಾಂತದಿಂದ ತಿಳಿಸಿದರು. ಆಗ ಆ ನಾಲ್ಕರೂ ವೈರಾಗ್ಯವನ್ನು ಹೊಂದಿ ದೀಕ್ಷಾಗ್ರಾಹಿಗಳಾದರು. ರಾಗದ್ವೇಷಗಳಿಂದ ಮುಕ್ತರಾದರು.

೫

ಚೋರರತ್ನ ಧೃಢಸೂರ್ಯ



ಉಜ್ಜಯಿನಿ ನಗರದಲ್ಲಿ ದೊಡ್ಡದೊಡ್ಡ ವಿದ್ವಾಂಸರೂ, ದೊಡ್ಡದೊಡ್ಡ ವರ್ತಕರೂ, ಇದ್ದಂತೆ ದೊಡ್ಡ ದೊಡ್ಡ ಕಳ್ಳರೂ ಇರುತ್ತಿದ್ದರು. ಕೆಲ

ಕಳ್ಳರಂತೂ ಲಕ್ಷಾಧಿಪತಿಗಳ ಮನೆಗಳನ್ನು ಮಾತ್ರವೇ ತಮ್ಮ ಕಳ್ಳತನಕ್ಕೆ ಆಯ್ದುಕೊಳ್ಳುತ್ತಿದ್ದರು. ಇದರಿಂದ ಅವರು ತಮ್ಮ ಜೀವನವನ್ನು ವೈಭವ ದಿಂದ ನಡೆಸುತ್ತಿದ್ದುದಲ್ಲದೆ, ತುಂಬಾ ಚಾತುರ್ಯದಿಂದಲೂ ವರ್ತಿಸು ತ್ತಿದ್ದರು. ರಾಜಕರ್ಮಿಗಳು ಕೂಡ ಅವರಿಗೆ ಗೌರವ ತೋರಿಸುವಷ್ಟು ಢಾಂಬಿಕತನವನ್ನು ಪ್ರದರ್ಶಿಸುತ್ತಿದ್ದರು. ಇಂತಹ ಕಳ್ಳರಲ್ಲಿ ಧೃಢಸೂರ್ಯ ನೆಂಬುವನು ವಿಖ್ಯಾತನಾಗಿದ್ದ.

ಧೃಢಸೂರ್ಯ ಮಹಾ ಧನಿಕನಂತೆ ಜೀವಿಸುತ್ತಿದ್ದ. ರಾಜ ಮಹಾ ರಾಜರು, ಧನಿಕ ವರ್ತಕರು, ಹಣವಂತರು–ಇಂತಹವರ ಮನೆಗಳೇ ಅವನ ಚೋರಪ್ರಯೋಗಕ್ಕೆ ಗುರಿಯಾಗುತ್ತಿದ್ದುವು. ಇಷ್ಟಾದರೂ ಅವನನ್ನು ಕಳ್ಳ ನೆಂದು ಹಿಡಿಯಲು ಯಾರಿಗೂ ಸಾಧ್ಯವಾಗಿರಲಿಲ್ಲ.

ವಸಂತಸೇನೆ ಉಜ್ಜಯಿನಿ ನಗರದ ಪ್ರಸಿದ್ಧ ವೇಶ್ಯೆ. ರೂಪಿನಲ್ಲಿ ರತೀದೇವಿಯನ್ನು ತಿರಸ್ಕರಿಸುತ್ತಿದ್ದಳು. ಅವಳ ಮೋಹಕವಾದ ಸೌಂದರ್ಯ ಕ್ಕಾಗಿ ವರ್ತಕಪುತ್ರರೂ, ರಾಜಮಹಾರಾಜರುಗಳೂ ಬಾಯಿಬಾಯಿ ಬಿಡು ತ್ತಿದ್ದರು. ಅವಳ ಸಹವಾಸ ಮಾಡುವುದೇ ತಮಗೆ ಹೆಚ್ಚುಗಾರಿಕೆಯೆಂದು ಹೇಳಿಕೊಳ್ಳುತ್ತಿದ್ದರು. ಒಂದುದಿನ ದೃಢಸೂರ್ಯ ವಸಂತಸೇನೆಯ ಮನೆಗೆ ಕಳ್ಳತನಕ್ಕಾಗಿ ಬಂದನು. ಭವ್ಯವಾಗಿದ್ದ ಆಕೆಯ ಭವನವು ಅತನನ್ನು ಬೆರಗುಮಾಡಿತು. ನೂರಾರುಜನ ಕಾವಲುಗಾರರಿದ್ದರೂ, ತನ್ನ ಚೋರ ಬುದ್ಧಿಯ ಚಾತುರ್ಯದಿಂದ ವಸಂತಸೇನೆ ಮಲಗಿದ್ದ ಮನೆಯನ್ನು ಸೇರಿ ಕೊಂಡನು. ಅಲ್ಲಿ ವಸಂತಸೇನೆ ನಿಶ್ಚಿಂತೆಯಿಂದ ಹಂಸತೂಲಿಕಾತಲ್ಪದಮೇಲೆ ಮಲಗಿ ನಿದ್ರಿಸುತ್ತಿದ್ದಳು. ಕಳ್ಳತನಕ್ಕಾಗಿ ಬಂದ ದೃಢಸೂರ್ಯ, ತಾನು ಬಂದ ಉದ್ದೇಶವನ್ನೇ ಮರೆತು ಆಕೆಯ ಸೌಂದರ್ಯವನ್ನು ನೋಡುತ್ತಾ ನಿಂತ. ಇದೇ ವೇಳೆಗೆ ಅವಳಿಗೂ ಅಕಸ್ಮಾತ್ ಎಚ್ಚರವಾಗಿಹೋಯಿತು. ತನ್ನ ಮಂಚದ ಬಳಿ ಬಲಿಷ್ಠನೂ, ದೃಢಾಂಗನೂ, ಸುಂದರನೂ ಆದ ತರುಣ ನೊಬ್ಬನು ನಿಂತಿರುವುದನ್ನು ಕಂಡು ವಸಂತಸೇನೆ ಅವಾಕ್ಕಾದಳು. “ಯಾರು ನೀನು?” ಎಂದು ಕೇಳಿದಳು.

“ನಾನು ದೃಢಸೂರ್ಯ–ಪ್ರಸಿದ್ಧ ಚೋರ ಶಿಖಾಮಣಿ. ನಾನು

ಕೇಳುವುದನ್ನು ಮಾಡದಿದ್ದರೆ ಈ ಕ್ಷಣವೇ ನೀನು ಯಮಪುರಿಗೆ ಹೋಗುವೆ" ಎಂದು ದೃಢವಾಗಿ ಹೇಳಿದನು.

"ನಿನಗೇನು ಬೇಕು?" ವಸಂತಸೇನೆ ಶಾಂತವಾಗಿಯೇ ಕೇಳಿದಳು.

ನೀನು ನನ್ನ ಪ್ರಿಯೆಯಾಗಬೇಕು ? ಎಂದು ಹೇಳಿದನು.

ವಸಂತಸೇನೆಗೂ ದೃಢಸೂರ್ಯನ ಮೇಲೆ ಮನಸ್ಸಾಗಿತ್ತು. ತಾನು ಬಯಸಿದುದನ್ನೆಲ್ಲಾ ತಂದುಕೊಡುವುದಾದರೆ ನಿನ್ನ ಅಪೇಕ್ಷೆಯನ್ನು ಈಡೇರಿಸುತ್ತೇನೆ. ಅವಳ ಕರಾರಿಗೆ ಒಪ್ಪಿ ಧೃಢಸೂರ್ಯ ಅಂದಿನಿಂದ ಅವಳ ಪ್ರಿಯಕರನಾದನು. ಸ್ತ್ರೀಯರಿಗೆ ಅಪೇಕ್ಷಿತವಾದ ಅನರ್ಘ್ಯವಾದ ವಸ್ತುಗಳನ್ನೆಲ್ಲಾ ಕಳ್ಳತನದಿಂದಲೇ ತಂದು ತನ್ನ ಪ್ರಿಯತಮೆಗೆ ಒದಗಿಸುತ್ತಿದ್ದನು. ಲೋಕದಲ್ಲೇ ಶ್ರೇಷ್ಠವಾಗಿದ್ದ ಒಂದು ಕಂಠಹಾರವನ್ನು ತಂದುಕೊಟ್ಟಿದ್ದನು. ಅದನ್ನು ತನ್ನ ಕೊರಳಿಗೆ ಧರಿಸಿಕೊಂಡಾಗಲೆಲ್ಲಾ ವಸಂತಸೇನೆಗೆ ಅತ್ಯಂತ ಹೆಮ್ಮೆಯಾಗುತ್ತಿತ್ತು.

ಒಮ್ಮೆ ವಸಂತಸೇನೆ ತನ್ನ ಪ್ರಿಯಕರ ತಂದುಕೊಟ್ಟಿದ್ದ ಆಭರಣಗಳನ್ನೆಲ್ಲಾ ಧರಿಸಿ ಶೃಂಗರಿಸಿಕೊಂಡಳು. ನಾನಾಬಗೆಯ ಸುಗಂಧ ಪುಷ್ಪಗಳನ್ನು ತಲೆಯಲ್ಲಿ ಮುಡಿದಳು. ಅತ್ಯಮೂಲ್ಯ ವಸ್ತ್ರಗಳನ್ನುಟ್ಟಳು. ತನ್ನ ಪ್ರಿಯತಮನ ಆಗಮನದ ಉತ್ಸಾಹದಿಂದ ತನ್ನ ಭವನದ ಉಪ್ಪರಿಗೆಯ ಮೇಲೆ ಬಂದು ನಿಂತಳು. ಆಗ ಸೂರ್ಯನು ಮುಳುಗುವ ಸಮಯ. ಪಶ್ಚಿಮದಿಕ್ಕಿನ ಆಕಾಶವು ಹೊಂಬಣ್ಣದ ಸೂರ್ಯಬಿಂಬದಿಂದ, ಚಿನ್ನದ ಬಣ್ಣದಿಂದ ತುಂಬಿತ್ತು. ಆ ಹೊಂಬಣ್ಣದ ಕಿರಣಗಳು ವಸಂತಸೇನೆಯ ಮುಖದಮೇಲೆ ಬಿದ್ದಾಗ ಅವಳ ಸೌಂದರ್ಯ ಮತ್ತಷ್ಟು ರಂಜಿಸಿತು. ಕೊರಳಿನ ಹಾರ ಮತ್ತಷ್ಟು ಕಾಂತಿಯಿಂದ ಬೆಳಗಿತು.

ಅವಳ ಮನೆಯ ಮುಂಭಾಗದ ರಾಜಮಾರ್ಗದಲ್ಲಿ ಉಜ್ಜಯಿನಿಯ ಮಹಾರಾಜ ತನ್ನ ರಾಣಿಯೊಡನೆ ಅರಮನೆಯತ್ತ ನಡೆದಿದ್ದನು. ಅವನ ಸುತ್ತಲೂ ರಾಜ ಪರಿವಾರದವರೂ, ಪರಿಚಾರಿಕರೂ, ಸೈನಿಕರೂ ಬರುತ್ತಿದ್ದರು. ಅವರೆಲ್ಲರನಡುವೆ ರಾಜ ದಂಪತಿಗಳು ಠೀವಿಯಿಂದ ಸಾಗಿಬರುತ್ತಿ

ದ್ದರು. ರಾಜ ಮಾರ್ಗದ ಇಕ್ಕೆಲಗಳಲ್ಲಿಯೂ ಪ್ರಜೆಗಳು ಸೇರಿ ರಾಜ ಮತ್ತು ರಾಣಿಗೆ ವಂದಿಸುತ್ತ ಜಯಘೋಷಣೆಗಳನ್ನು ಕೂಗುತ್ತಿದ್ದರು.

ವಸಂತಸೇನೆ ತನ್ನ ಭವನದ ಉಪ್ಪರಿಗಯಮೇಲೆ ನಿಂತೇ ಇದನ್ನು ನೋಡಿದಳು. ಮಹಾರಾಣಿಯೂ ಚೆಲುವೆಯಾಗಿದ್ದಳು. ಅಲ್ಲದೆ ಅವಳೂ ತನ್ನ ಕೊರಳಲ್ಲಿ ಒಹು ಬೆಲೆಬಾಳುವ ರತ್ನದ ಹಾರವನ್ನು ಧರಿಸಿದ್ದಳು. ಅದರ ಧಾರಣೆಯಿಂದ ರಾಣಿಯ ಮುಖದ ಚೆಲುವು ಮತ್ತಷ್ಟು ಶೋಭಾಯಮಾನವಾಗಿದ್ದಿತು. ಮಹಾರಾಣಿ ಧರಿಸಿದ್ದ ರತ್ನದ ಹಾರವು ವಸಂತಸೇನೆಯ ದೃಷ್ಟಿಗೆ ಬಿತ್ತು. ತಾನು ಧರಿಸಿರುವ ಹಾರ ಅದರ ಮುಂದೆ ಏನೇನೂ ಅಲ್ಲವೆಂಬ ಭಾವನೆ ಅವಳಲ್ಲಿ ಮೂಡಿತು. ಮಹಾರಾಣಿಯ ರತ್ನಹಾರದ ಮುಂದೆ ತನ್ನ ರತ್ನ ಹಾರವು ಸಾಮಾನ್ಯವಾದ ಗಾಜು ಇದ್ದಂತೆ ಎಂದುಕೊಂಡಳು. ಮಹಾರಾಣಿಯ ವೈಭವದಮುಂದೆ ತನ್ನ ವೈಭವ ತೃಣಕ್ಕೆ ಸಮಾನವೆಂದೆನಿಸಿತು. ಇದರಿಂದ ಅವಳಲ್ಲಿ ಮಾತ್ಸರ್ಯ ಹುಟ್ಟಿತು. ಹೇಗಾದರೂ ಮಾಡಿ ಮಹಾರಾಣಿಯ ಕಂಠಹಾರವನ್ನು ತಾನು ಪಡೆಯಲೇಬೇಕೆಂದು ನಿರ್ಧರಿಸಿದಳು. ಈ ಕೆಲಸ ಧೃಢಸೂರ್ಯನಿಂದಲ್ಲದೆ ಬೇರೆಯವರಿಂದಾಗ ದೆಂಬುದು ಅವಳಿಗೆ ಖಚಿತವಾಗಿತ್ತು.

ಆದಿನಸಂಜೆ ಎಂದಿನಂತೆ ದೃಢಸೂರ್ಯಬಂದಾಗ ಅವನಿಗೆ ಆಶ್ಚರ್ಯವಾಗಿತ್ತು. ಹಿಂದಿನದಿನಗಳಂತೆ ವಸಂತಸೇನೆ ಆನಂದದಿಂದ ಅವನನ್ನು ಸ್ವಾಗತಿಸಲಿಲ್ಲ. ಅಲಂಕಾರ ಮಾಡಿಕೊಂಡಿರಲಿಲ್ಲ. ಅವಳ ಅವಸ್ಥೆಯನ್ನು ಕಂಡು ವಿಸ್ಮಿತನಾದ ಧೃಢಸೂರ್ಯ ಕಾರಣವೇನೆಂದು ಅವಳನ್ನು ಕೇಳಿದನು.

ವಸಂತಸೇನೆ ವ್ಯಗ್ರದಿಂದ ನುಡಿದಳು.

"ನಿಮ್ಮಂತಹ ಅಸಮಾನ ಸಾಹಸಿಗಳು ಇಲ್ಲವೆಂದು ತಿಳಿದಿದ್ದೆ. ಎಂತಹ ಅಮೂಲ್ಯವಾದ ವಸ್ತುಗಳನ್ನಾದರೂ, ರಹಸ್ಯಸ್ಥಾನದಲ್ಲಿದ್ದರೂ ತೆಗೆದುಕೊಂಡು ಬರುವ ಸಾಮರ್ಥ್ಯವಿದೆಯೆಂದು ಹೇಳಿಕೊಳ್ಳುತ್ತಿದ್ದಿರಿ. ಆದರೆ ಈ ನಗರದ ಮಹಾರಾಣಿಯ ಕೊರಳಿನಲ್ಲಿ ಕೋಟ್ಯಂತರರೂಪಾಯಿ ಬೆಲೆಬಾಳುವ, ಅತ್ಯಂತ ಪ್ರಕಾಶಮಾನವಾಗಿರುವ ರತ್ನದಹಾರವನ್ನು ನೋಡಿರು

ವಿರಾ? ಅಥವಾ ನೀವು ನೋಡಿದ್ದರೂ ಕದ್ದುತರಲಾಗದುದಕ್ಕೆ ನೋಡ ದಂತೆ ನಟಿಸುತ್ತಿದ್ದೀರಾ ? ಏನೇ ಆಗಲಿ ಆ ರತ್ನಹಾರ ನನಗೆ ಬೇಕೇ ಬೇಕು. ಅದನ್ನು ನಾನು ಧರಿಸುವವರೆಗೂ ನನಗೆ ಸಮಾಧಾನವಿಲ್ಲ."

ವಸಂತಸೇನೆಯ ಮಾತು ದೃಢಸೂರ್ಯನಿಗೆ ಚುಚ್ಚಿತು. ತಾನು ವಸಂತಸೇನೆಯ ಅಭಿಲಾಷೆಯನ್ನು ಈಡೇರಿಸದೇ ಹೋದರೆ ಅವಳ ದೃಷ್ಟಿ ಯನ್ನು ಹೇಡಿಯಾಗಬೇಕಾಗುತ್ತದೆಯೆಂದು ಆಲೋಚಿಸಿದನು. ಮಹಾ ರಾಣಿಯ ಕಂಠದ ರತ್ನಹಾರವನ್ನು ತಾನು ತಂದೇ ಕೊಡುವೆನೆಂದು ಪಣ ತೊಟ್ಟನು. ಅದೇದಿನದ ರಾತ್ರಿ ಆ ಹಾರವನ್ನು ಕದ್ದು ತರಲು ಅರಮನೆ ಯತ್ತ ನಡೆದನು.

ನಡುರಾತ್ರಿ ಬಂದಂತೆಲ್ಲಾ ನಗರವು ನಿದ್ರೆಯಲ್ಲಿ ಮುಳುಗತೊಡಗಿತು. ಶಬ್ದವು ಅಡಗಿಹೋಯಿತು. ಗೂಬೆಗಳ ವಿಕಾರ ಧ್ವನಿಯೊಂದನ್ನುಬಿಟ್ಟರೆ ಮತ್ತಾವ ಗಲಭೆಯೂ ಇರಲಿಲ್ಲ. ಅರಮನೆಯಲ್ಲಿಯೂ ಎಲ್ಲರೂ ನಿದ್ದೆಗೆ ತೊಡಗಿದರು. ಕಾವಲುಗಾರರು ಮಾತ್ರ ತಮ್ಮ ಕರ್ತವ್ಯದಲ್ಲಿ ನಿಮಗ್ನರಾಗಿ ದ್ದುದರಿಂದ ನಿದ್ದೆ ಮಾಡಿರಲಿಲ್ಲ. ಆದರೆ ದೃಢಸೂರ್ಯ ಮಹಾ ಚತುರನಾ ಗಿದ್ದುದರಿಂದ, ಕಾವಲುಗಾರರು ಎಚ್ಚರವಾಗಿದ್ದರೂ, ಅವರ ಕಣ್ಣಿಗೆ ಮಣ್ಣೆ ರಚಿ, ಅರಮನೆಯೊಳಕ್ಕೆ ನಡೆದುಬಂದೇ ಮಹಾರಾಣಿ ಮಲಗಿದ್ದ ಶಯನ ಗೃಹವನ್ನು ಹೊಕ್ಕನು.

ಮಹಾರಾಣಿಯ ಶಯನಗೃಹವನ್ನು ನೋಡಿ ಅವನಿಗೆ ಆಶ್ಚರ್ಯ ವಾಯಿತು. ಅಲ್ಲಿನ ಐಶ್ವರ್ಯ ಮತ್ತು ವೈಭವಗಳು ಅವನ ತಲೆಯನ್ನು ತೂಗಿಸಿದುವು. ಅಲ್ಲಿದ್ದ ಸಮಸ್ತ ವಸ್ತುಗಳೂ ಮುತ್ತು ರತ್ನಗಳಿಂದ ಅಲಂ ಕೃತವಾಗಿದ್ದುವು. ಮಣಿರತ್ನ ಖಚಿತವಾಗಿದ್ದ ಮಂಚದಮೇಲೆ, ಹಂಸ ತೂಲಿಕಾ ತಲ್ಪದಲ್ಲಿ ಮಹಾರಾಣಿ ಸುಖನಿದ್ರೆಯಲ್ಲಿದ್ದಳು. ಅವಳು ತನ್ನ ಆಭರಣಗಳನ್ನು ತೆಗೆದು ಅಲ್ಲೇ ಒಂದೆಡೆ ಇಟ್ಟಿದ್ದಳು. ಅವಳ ಕೊರಳ ಕಂಠ ಹಾರ ಕಣ್ಣುಕೋರೈಸುವಂತೆ ಹೊಳೆಯುತ್ತಿದ್ದಿತು. ಅದನ್ನು ನೋಡಿದ ಅವನು ತನ್ನ ಪ್ರಿಯತಮೆ ವಸಂತಸೇನೆ ಹೇಳಿದುದು ನಿಜಕ್ಕೂ ಸತ್ಯವಾದ ಮಾತೆಂದು ಅಂದುಕೊಂಡನು, ಆ ರತ್ನಹಾರದ ಕಾಂತಿಯಿಂದ ಆ ಶಯನ

ಗೃಹವೆಲ್ಲಾ ಬೆಳಕಿನಿಂದ ತುಂಬಿತ್ತು. ಇನ್ನು ತಡಮಾಡಿದರೆ ಕೆಲಸವು ಕೆಡುವುದೆಂದು ಹೇಳಿ, ಆ ಹಾರವನ್ನು ತೆಗೆದುಕೊಂಡು ವಸಂತಸೇನೆಯ ಕೊರಳಿಗೆ ಅಲಂಕರಿಸಿ ಅವಳ ಮನಸ್ಸನ್ನು ಪ್ರಸನ್ನಗೊಳಿಸಬೇಕೆಂಬ ಆತುರ ದಿಂದ ಓಡಿಬರುತ್ತಿದ್ದನು. ಆದರೆ ಆ ರತ್ನಹಾರದ ಪ್ರಕಾಶವು ಅವನು ಹೋದೆಡೆಯಲ್ಲೆಲ್ಲಾ ಹೊಳೆಯತೊಡಗಿತು. ಇದರಿಂದ ಕತ್ತಲಲ್ಲಿ ಬೆಳಕು ಕಾಣ ತೊಡಗಿತು. ಅರಮನೆಯ ಕಾವಲುಗಾರರಿಗೆ ಸಂಶಯಬಂದು, ಎಲ್ಲರೂ ಸುತ್ತುವರಿದು, ಧೃಢಸೂರ್ಯನು ಎಷ್ಟೇ ಚಾತುರ್ಯದಿಂದ ತಪ್ಪಿಸಿ ಕೊಳ್ಳಲು ಪ್ರಯತ್ನಿಸಿದರೂ ಹಿಡಿದುಬಿಟ್ಟರು. ಅವನು ಕದ್ದಿದ್ದ ರತ್ನಹಾರ ವನ್ನು ಕಸಿದುಕೊಂಡು ಅದನ್ನು ಮಹಾರಾಣಿಯ ವಶಕ್ಕೆ ಕಳುಹಿಸಿ ಕೊಟ್ಟರು. ಧೃಢಸೂರ್ಯನನ್ನು ಕಾರಾಗೃಹಕ್ಕೆ ನೂಕಿದರು.

ಮರುದಿನ ಧೃಢಸೂರ್ಯನ ವಿಚಾರಣೆ ಮಹಾರಾಜನ ಎದುರಿನಲ್ಲಿ ಆರಂಭವಾಯಿತು. ಇಂತಹ ಮಹಾ ಚತುರನಾದ ಕಳ್ಳನನ್ನು ನೋಡಲು ಅಸಂಖ್ಯಾತ ಜನರು ನೆರೆದಿದ್ದರು. ದೃಢಸೂರ್ಯನು ಸ್ವಲ್ಪವಾದರೂ ಅಳುಕದೆ ತಾನು ಹಾರವನ್ನು ಕದ್ದದ್ದು ನಿಜವೆಂದೂ, ತನ್ನ ಪ್ರಿಯತಮೆ ವಸಂತಸೇನೆಗಾಗಿ ಮಾಡಬೇಕಾಯಿತೆಂದೂ ತಿಳಿಸಿದನು. ಇದಕ್ಕಾಗಿ ಮಹಾರಾಜನು ಅವನಿಗೆ ಮರಣದಂಡನೆಯನ್ನು ವಿಧಿಸಿದನು. ವಸಂತ ಸೇನೆಗೂ ಯೋಗ್ಯ ಶಿಕ್ಷೆಯನ್ನು ಕೊಟ್ಟನು.

ದೃಢಸೂರ್ಯನನ್ನು ವಧಸ್ತಂಭದೆಡೆಗೆ ಕರೆತಂದರು. ಅವನನ್ನು ಶೂಲಕ್ಕೇರಿಸಲು ಸಮಯವನ್ನು ಕಾಯುತ್ತಿದ್ದರು. ಅಷ್ಟರಲ್ಲಿ ಅವನಿಗೆ ದಾಹವು ಹೆಚ್ಚಿತು. 'ನೀರು ನೀರು' ಎಂದು ಅವನು ಕೂಗಿಕೊಳ್ಳುತ್ತಿ ದ್ದರೂ ಅಲ್ಲಿದ್ದವರು ಯಾರೂ ಅವನ ಕೂಗಿಗೆ ಲಕ್ಷ್ಯ ಕೊಡಲಿಲ್ಲ. ಆಗ ಅದೇ ಮಾರ್ಗದಲ್ಲಿ ಧನದತ್ತನೆಂಬ ವರ್ತಕ ಜಿನಬಸದಿಗೆ ಹೋಗುತ್ತಿದ್ದನು. ಅವನಿಗೆ ದೃಢಸೂರ್ಯನ ಆರ್ತನಾದವನ್ನು ಕೇಳಿ ಕನಿಕರ ಉಂಟಾಯಿತು. ಆಗ ಅವನು ದೃಢಸೂರ್ಯನ ಹತ್ತಿರ ಬಂದು ಶ್ರೇಷ್ಠವಾದ ಶ್ರವಣಾಮೃತ ಪಾನವನ್ನು ಮಾಡಿಸುವೆನೆಂದು ಹೇಳಿ ಅವನ ಕಿವಿಯಲ್ಲಿ "ಪಂಚನಮಸ್ಕಾರ ಮಂತ್ರ" ವನ್ನು ಉಪದೇಶಿಸಿದನು. ಅನಂತರ "ನಾನು ನೀರು ತೆಗೆದು

ಕೊಂಡು ಬರುವವರೆಗೆ ಈ ಮಂತ್ರವನ್ನು ಜಪಿಸುತ್ತಿರು. ಬೇರೆ ಯೋಚನೆ
ಗಳನ್ನು ಮಾಡಬೇಡ " ಎಂದು ಹೇಳಿ ಜಿನದರ್ಶನಕ್ಕೆ ಹೋದನು. ಇನ್ನು
ದೃಢಸೂರ್ಯನಿಗೆ ಪಂಚ ನಮಸ್ಕಾರ ಮಂತ್ರಗಳನ್ನು ಕೇಳಿದಕೊಡಲೇ
ಪುಣ್ಯಕರ್ಮ ಬಂಧದಿಂದ ನೀರಡಿಕೆ ಅಡಗಿಹೋಯಿತು. ಇಹಲೋಕದ
ಸಾಂಸಾರಿಕ ಪ್ಯಾಮೋಹಗಳನ್ನು ತೊರೆದನು. ಸಧ್ಯಾನಮಗ್ನನಾದನು.
ಇದರಿಂದ ಅವನು ಶಾಂತ ಮನಸ್ಸಿನಿಂದ ಪ್ರಾಣವನ್ನು ತೊರೆದು ಸದ್ಗತಿ
ಯಿಂದ ಸೌಧರ್ಮ ಸ್ವರ್ಗದಲ್ಲಿ ದೇವನಾಗಿ ಹುಟ್ಟಿದನು.

ರಾಜದೂತರುಬಂದು ದೃಢಸೂರ್ಯನನ್ನು ಶೂಲಕ್ಕೇರಿಸಲು ನೋಡಿ
ದರು. ಆದರೇನಾಗಿದೆ? ಆವೇಳೆಗಾಗಲೇ ಅವನ ಪ್ರಾಣಪಕ್ಷಿ ಹಾರಿ
ಹೋಗಿತ್ತು? ಧನದತ್ತನು ಅವನ ಕಿವಿಯಲ್ಲಿ ಏನನ್ನೋ ಹೇಳಿದನೆಂಬ
ವಿಚಾರ ಅವರಿಗೆ ತಿಳಿಯಿತು. ಈ ವಿಚಾರವನ್ನು ಅವರು ಮಹಾರಾಜನಿಗೆ
ವರದಿಮಾಡಿದರು. ಶೂಲಕ್ಕೆ ಹಾಕುವಮೊದಲೇ ದೃಢಸೂರ್ಯನು ಸಾಯು
ವಂತೆ ಮಾಡಿದನೆಂಬ ಸಿಟ್ಟಿಂದ ರಾಜನು ಧನದತ್ತನಮನೆಗೆಹೋಗಿ ಅಲ್ಲಿರುವ
ಸಮಸ್ತ ಐಶ್ವರ್ಯವನ್ನು ರಾಜ ಭಂಡಾರಕ್ಕೆ ಸೇರಿಸಬೇಕೆಂದು
ಆಜ್ಞಾಪಿಸಿದನು.


ರಾಜನ ಆಜ್ಞೆಯಾದಮೇಲೆ ಕೇಳುವುದೇನು? ರಾಜಭಟರು ಕೊಡಲೆ
ಧನಪಾಲನ ಮನೆಗೆ ಮುತ್ತಿಗೆ ಹಾಕಿದರು. ಆದರೆ ಅವನ ಮನೆಯ ಮಹಾ
ದ್ವಾರದಲ್ಲಿ ಒಬ್ಬ ದ್ವಾರಪಾಲಕನು ನಿಂತು ಅವರನ್ನು ಬಿಡಲಿಲ್ಲ. ರಾಜಭಟರು
ಬಲವಂತದಿಂದ ನುಗ್ಗಲು ಯತ್ನಿಸಿದಾಗ ಅವನೊಬ್ಬನೇ ಅವರೆಲ್ಲರನ್ನು
ಓಡಿಸಿಬಿಟ್ಟನು. ಈ ವಿಚಾರ ರಾಜನಿಗೆ ತಿಳಿದಾಗ ಅವನು ಒಂದು ದೊಡ್ಡ
ಸೈನ್ಯವನ್ನೇ ಕಳುಹಿಸಿದನು. ಆ ದ್ವಾರಪಾಲಕನು ಆ ಸೈನಿಕರನ್ನೂ ಹೊ
ಡೋಡಿಸಿದನು. ಈ ವಿಚಾರವನ್ನು ರಾಜನಿಗೆ ಮುಟ್ಟಿಸಿದರು. ಒಬ್ಬನೇ ಒಬ್ಬ
ಸಮಸ್ತ ಸೈನ್ಯವನ್ನೂ ಓಡಿಸಿದ ಸಂಗತಿ ರಾಜನಿಗೆ ತಿಳಿದಾಗ ಅವನು ಹೆದರಿ
ನಡುಗಿಹೋದನು. ಧನಪಾಲನಲ್ಲಿ ಕ್ಷಮೆ ಕೇಳಲು ಬಸದಿಗೆ ಹೋದಾಗ,
ಧನಪಾಲನೂ ಆಶ್ಚರ್ಯಪಟ್ಟನು. ಕೊನೆಗೆ ಇಬ್ಬರೂ ಮನೆಗೆ ಬಂದು ನೇರ
ವಾಗಿ, ವಿಚಾರಿಸಿದರು. ಆ ದ್ವಾರಪಾಲಕನು ಬೇರೆಯಾರೂ ಅಲ್ಲವೆಂದು

ಒಳ್ಳೆಯ ಧ್ಯಾನದಿಂದ ಸತ್ತ ದೃಢಸೂರ್ಯನೇ ಸೌಧರ್ಮಸ್ವರ್ಗದಲ್ಲಿ ದೇವನಾಗಿ ಹುಟ್ಟಿ ತನಗೆ ಸದ್ಗತಿಗೆ ದಾರಿ ತೋರಿಸಿದ ಧನಪಾಲನಿಗೆ ಸಹಾಯ ಮಾಡಲು ದ್ವಾರಪಾಲಕ ರೂಪದಲ್ಲಿ ಬಂದವನೆಂದೂ ತಿಳಿಯಿತು. ಆಗ ರಾಜನು ತನ್ನ ತಪ್ಪನ್ನು ಕ್ಷಮಿಸಬೇಕೆಂದು ಧನಪಾಲನನ್ನು ಕೇಳಿಕೊಂಡನು. ಧನಪಾಲನು ರಾಜನಿಗೆ ಅಭಯವನ್ನು ನೀಡಿದನು. ಸಂಸಾರದ ಈ ವಿಚಿತ್ರ ಪರಿಸ್ಥಿತಿಯನ್ನು ತಿಳಿದ ಅವರಿಬ್ಬರಲ್ಲೂ ವೈರಾಗ್ಯಮೂಡಿತು. ಜಿನಸೇನರೆಂಬ ಮುನಿಗಳಬಳಿ ಧರ್ಮೋಪದೇಶವನ್ನು ಕೇಳಿ ದೀಕ್ಷೆಯನ್ನು ಕೈಗೊಂಡರು. ಇದರಿಂದ ಅವರು ಕ್ರಮೇಣ ಸದ್ಗತಿಯನ್ನು ಹೊಂದಿದರು.

ಅರಹಂತರಿಗೆ, ಸಿದ್ಧರಿಗೆ, ಆಚಾರ್ಯರಿಗೆ, ಉಪಾಧ್ಯಾಯರಿಗೆ, ಸರ್ವ ಸಾಧುಗಳಿಗೆ ನಮಸ್ಕಾರ ಎನ್ನುವ ಜೈನರು ನಾಸ್ತಿಕರಲ್ಲ.

೬

ವಾರಾಂಗನಾ ರತ್ನ



ಅಂಗದೇಶಕ್ಕೆ ರಾಜಧಾನಿಯಾದ ಚಂಪಾಪುರಿಯ ಹೊರವ
ಉದ್ಯಾನವನಲ್ಲಿಲ್ಲಿ ಆಚಾರ್ಯ ಅಜಿತಸೇನಸಾಗರ ಮುನಿಗಳು ಧರ್ಮೋ

ನನ್ನು ಮಾಡುತ್ತಿದ್ದರು. ನಗರದ ಪ್ರಮುಖ ಶ್ರಾವಕ ಶ್ರಾವಿಕೆಯರು ಪದೇಶವನ್ನು ಆಲಿಸುತ್ತಿದ್ದರು. ಮಧ್ಯೆಮಧ್ಯೆ ಜಿನಭಜನೆಗಳಾಗುತ್ತಿದ್ದುವು. ದ್ದಕ್ಕಿದ್ದಂತೆಯೇ ದೂರದಿಂದ ಹೆಂಗಸೊಬ್ಬಳ ಕಂಠದ ಆರ್ತನಾದ ಅಸ್ಪಷ್ಟ ಾಗಿ ಕೇಳಿಬಂದಿತು. ಆಚಾರ್ಯರಾದಿಯಾಗಿ ಸರ್ವರ ದೃಷ್ಟಿಗಳೂ ಅತ್ತ ೂರಳಿದವು. ಅಚ್ಚ ಬಿಳೀಸೀರೆಯನ್ನುಟ್ಟು, ಸರ್ವಾಲಂಕಾರಭೂಷಿತ ಾಗಿ, ಗೌರವಕಾಂತಿಯ ತೇಜಸ್ವಿನೀ ಸ್ತ್ರೀಯೊಬ್ಬಳು ದುಗುಡದಿಂದ ಂದು ಆಚಾರ್ಯರ ಪಾದಗಳಲ್ಲಿ ಬಿದ್ದು ಬೇಡಿದಳು:

“ಗುರುದೇವಾ! ನನಗೆ ದಾರಿ ತೋರಿಸು. ದೀಕ್ಷೆಯನ್ನು ಅನುಗ್ರ ಸು” ಅವಳ ಧ್ವನಿಯು ಕಂಪಿಸುತ್ತಿತ್ತು. ಕಣ್ಣಳಿಂದ ಕಂಬನಿಗಳು ುದುರಿದುವು.

ಶಾಂತಳಾಗು ಮಗಳೇ! ನಿನ್ನ ಆಂತರಿಕ ಚಿಂತೆ ನನಗೆ ಅರ್ಥವಾಗಿದೆ. ನ್ನ ಇಷ್ಟದಂತೆಯೇ ಆಗುತ್ತದೆ” ಎಂದರು ಆಚಾರ್ಯರು.

ಆಚಾರ್ಯರ ಅಭಯದಲ್ಲಿ ತುಂಬು ಗಾಂಭೀರ್ಯವಿತ್ತು. ಅವರ ಅಭಯ ವಚನವನ್ನು ಕೇಳಿದನಂತರ ಆ ಯುವತಿ ಶಾಂತಳಾದಳು. ಅಲ್ಲೇ ಕುಳಿತಳು. ಕೂಡಲೇ ಸಭೆಯಲ್ಲಿದ್ದ ಹಿರಿಯ ಶ್ರಾವಕರೊಬ್ಬರು “ಗುರು ವರ್ಯ! ಈಕೆ ಇನ್ನೂ ಯುವತಿಯಾಗಿದ್ದಾಳೆ, ಸೌಂದರ್ಯವತಿಯಾಗಿ ದ್ದಾಳೆ. ಈ ಚಿಕ್ಕ ವಯಸ್ಸಿನಲ್ಲೇ ವೈರಾಗ್ಯವು ಬಂದು ದೀಕ್ಷೆಯನ್ನೇಕೆ ಕೇಳುತ್ತಿದ್ದಾಳೆ? ದಯವಿಟ್ಟು ಅಪ್ಪಣೆ ಕೊಡಿಸಬೇಕು” ಎಂದು ಕೇಳಿ ಕೊಂಡರು.

ಆಚಾರ್ಯರಿಗೂ ಆ ಸಂಗತಿಯನ್ನು ಸಭೆಗೆ ತಿಳಿಸಬೇಕೆಂದಿತ್ತು. ಅದನ್ನು ಯಥಾವತ್ತಾಗಿ ತಮ್ಮ ಅವಧಿಜ್ಞಾನದ ಮಹಿಮೆಯಿಂದ ತಿಳಿಸಿದರು.

ಚಂಪಾಪುರದಲ್ಲಿ ಹಿಂದೆ ಭಾನುದತ್ತನೆಂಬ ಕೋಟ್ಯಾಧೀಶನಾದ ವರ್ತಕನಿದ್ದನು. ಆತನ ಹೆಂಡತಿ ದೇವಿಲೆ. ಪಾತಿವ್ರತ್ಯಕ್ಕೆ ಹೆಸರಾಗಿದ್ದ ವಳು. ಆ ಶ್ರೀಮಂತದಂಪತಿಗಳಿಗೆ ಯಾವುದಕ್ಕೂ ಕೊರತೆಯಿರಲಿಲ್ಲ.

ವಾಸಿಸಲು ಅರಮನೆಯಂತಹ ಮಹೋನ್ನತವಾದ ಉಪ್ಪರಿಗೆಯ ಮನೆ
ಯಿದ್ದಿತು. ಕೆಲಸಮಾಡಲು ಅಸಂಖ್ಯಾತ ದಾಸದಾಸಿಯರಿದ್ದರು. ಸಮು
ದ್ರದ ಮೇಲೆ ಹೋಗಿ ವ್ಯಾಪಾರಮಾಡತಕ್ಕ ಅನೇಕ ಹಡಗುಗಳು ಅವನಲ್ಲಿ
ದ್ದುವು. ಆದರೆ ಒಂದೇ ಒಂದು ಕೊರತೆ ಅವರಲ್ಲಿ ತುಂಬಿತ್ತು. ಮಕ್ಕ
ಲಿಲ್ಲದುವೇ ಅದಾಗಿತ್ತು. ಅದಕ್ಕಾಗಿ ಎಷ್ಟೋ ಹರಕೆಗಳನ್ನು ಹೊತ್ತರು.
ನಾಗರಪ್ರತಿಷ್ಠೆ ಮಾಡಿಸಿದರು. ಕೊನೆಗೊಮ್ಮೆ ಬೆಳಗಿನ ಜಾವದಲ್ಲಿ ಚಾರಣ
ಮುನಿಗಳ ತನ್ನ ಕೈಗೆ ಮಾಣಿಕ್ಯವನ್ನೂ ನೀಡಿದ ಕನಸನ್ನು ದೇವಿಲೆ
ಕಂಡಳು. ಆ ಕನಸು ನನಸಾಯಿತು. ಆ ದಿನದಿಂದಲೇ ಗರ್ಭಿಣಿಯಾದ
ಅವಳು ನವಮಾಸಾನಂತರ ಒಂದು ಗಂಡು ಶಿಶುವನ್ನು ಹಡೆದಳು. ಬಹು
ವೈಭವದಿಂದ ನಾಮಕರಣ ಮಹೋತ್ಸವನ್ನು ಜರುಗಿಸಿ ಆ ಮಗವಿಗೆ ಚಾರು
ದತ್ತನೆಂದು ಹೆಸರನ್ನು ಕರೆದರು.

ಚಾರುದತ್ತನು ಪರಮ ಸುಂದರನಾಗಿದ್ದನು. ದೃಢಕಾಯನಾಗಿದ್ದು
ಬಲಿಷ್ಠವಾದ ಶರೀರವನ್ನು ಹೊಂದಿದ್ದನು. ಬಾಲ್ಯದಲ್ಲಿ ಅವನಿಗೆ ಉತ್ತಮ
ರಾದ ಗುರುಗಳ ಬಳಿ ವಿದ್ಯಾಭ್ಯಾಸವು ನಡೆಯಿತು. ತೀಕ್ಷ್ಣಮತಿಯಾಗಿ
ದ್ದುದರಿಂದ ಬೇಗನೇ ವಿದ್ಯಾವಂತನಾದನು. ನವಯೌವನಕ್ಕೆ ಕಾಲಿಟ್ಟಾಗ
ಚಾರುದತ್ತನ ಭವ್ಯ ಆಕೃತಿ ಎಲ್ಲವನ್ನೂ ಆಕರ್ಷಿಸುತ್ತಿದ್ದಿತು. ಯೌವನದ
ಪರಾಕಾಷ್ಠತೆಯಿಂದ ಶರೀರದ ಕಾಂತಿ ಪ್ರಜ್ವಲಿಸಿತು. ಮಗನಲ್ಲಿ ಪ್ರಾಯದ
ಪೆಂಪು ಸೊಬಗು ಪಡೆದುದನ್ನು ಕಂಡ ತಂದೆ ತಾಯಿಯರು ಅವನಿಗೆ ಮದುವೆ
ಮಾಡ ಬಯಸಿದರು. ಆದರೆ ವೈರಾಗ್ಯ ಪ್ರಧಾನವಾದ ಅನೇಕ ಉತ್ತಮ
ಕೃತಿಗಳನ್ನು ಅಧ್ಯಯನ ಮಾಡಿದ್ದ ಅವನಿಗೆ ಶೃಂಗಾರದತ್ತ ಒಲವು ನಿವೃತ್ತಿ
ಯಾಗಿತ್ತು. ಶೃಂಗಾರ ವಿರೋಧಕ ಕೃತಿಗಳನ್ನೇ ಅವನು ಮೆಚ್ಚುತ್ತಿದ್ದನು
ಆದುದರಿಂದ ಸ್ತ್ರೀಯರು ವಂಚಕರು. ಪತಿವ್ರತೆಯರ ನೆಪಹಾಕಿ ದುರ್ಮಾ
ಗಕ್ಕೆ ಇಳಿಯುವರೆಂದೇ ಅವನ ನಂಬಿಕೆಯಾಗಿತ್ತು. ಆ ನಂಬಿಕೆ ಅವನಲ್ಲಿ
ದೃಢವಾಗಿದ್ದುದರಿಂದ ತನಗೆ ಸ್ತ್ರೀಜಾತಿಯಲ್ಲೇ ಭರವಸೆಯಿಲ್ಲವೆಂದೂ
ತಾನು ಮದುವೆಯನ್ನೇ ಆಗುವುದಿಲ್ಲವೆಂದು ಖಂಡಿತವಾಗಿ ನುಡಿದುಬಿಟ್ಟನು
ಮಕ್ಕಳಿಲ್ಲದಿದ್ದಾಗ ಮಕ್ಕಳಿಲ್ಲವೆಂದು ಕೊರಗುತ್ತಿದ್ದ ಮಾತಾಪಿತೃಗಳಿಗೆ
ಈಗ ಮಗನು ಮದುವೆಯಾಗಲಿಲ್ಲವೆಂಬ ಕೊರತೆ ಬಂದಿತು.

ದೇಯಿಲೆಯು ಮಗನನ್ನು ಮದುವೆಗೆ ಒಡಂಬಡಿಸಲು ಬಹು ಶ್ರಮ ಪಡಬೇಕಾಯಿತು. ಮಗನ ಮುಂದೆ ಅತ್ತಳು. ತಾನೂ ಸಹ ಸಂಸಾರದಲ್ಲೀ ಇರುವುದಿಲ್ಲವೆಂದೂ, ದೀಕ್ಷೆಯನ್ನು ತೆಗೆದುಕೊಂಡು ಹೊರಟುಹೋಗುವು ದಾಗಿಯೂ ಹೇಳಿದಳು. ಕೊನೆಗೆ ತಾಯಿಯ ಬಲವಂತಕ್ಕೆ ಕಟ್ಟುಬಿದ್ದು ಚಾರುದತ್ತನು ವಿವಾಹವಾಗಲು ಒಪ್ಪಿದನು. ಅವನು ಸಮ್ಮತಿದುದೇ ತಡ ಸ್ವಲ್ಪವೂ ತಡಮಾಡದೆ ತನ್ನ ಅಣ್ಣ ಸಿದ್ಧಾರ್ಥನ ಮಗಳು ಮಿತ್ರಾವತಿಯನ್ನು ತಂದು ಮದುವೆಮಾಡಿದರು. ಮದುವೆಯಾದರೂ ಚಾರುದತ್ತನು ಮಿತ್ರಾ ವತಿಯನ್ನು ಕಣ್ಣೆತ್ತಿಯೂ ಸಹ ನೋಡಲಿಲ್ಲ. ತನ್ನ ವಿದ್ಯಾಧ್ಯಯನದಲ್ಲೀ ತಲ್ಲೀನನಾಗಿದ್ದನು. ಒಂದು ದಿನ ಮಿತ್ರಾವತಿಯ ತಾಯಿಯು ಬಂದು ಬೆಳಗಿನಲ್ಲಿ ತನ್ನ ಮಗಳ ಮುಖವನ್ನು ದೃಷ್ಟಿಸಿ ನೋಡಿದಳು.

ಮಗಳ ತುಟಿಗಳು ಬಣ್ಣಗೆಟ್ಟಿರಲಿಲ್ಲ. ನೇತ್ರಾಂಜನವು ಮಾಸಿರ ಲಿಲ್ಲ. ಅಂಗರಾಗವು ಸಡಿಲಿರಲಿಲ್ಲ. ಮುಡಿದಹೂವು ಹಾಗೇ ಇತ್ತು. ಹಣೆಯ ತಿಲಕವೂ ಎಂದಿನಂತೆಯೇ ಇತ್ತು. ಇದರಿಂದ ತನ್ನ ಮಗಳಿಗೆ ರತಿಸುಖ ವಿಲ್ಲವೆಂಬುದನ್ನು ನಿರ್ಧರಿಸಿಕೊಂಡು ಅವಳು ತನ್ನ ನಾದಿನಿಯನ್ನು ಕುರಿತು "ದೇಯಿಲೇ! ನಿನ್ನ ಮಗನಿಗೆ ನಾನು ಹೆಣ್ಣುಕೊಡಲು ಹಿಂದಿನ ಜನ್ಮದಲ್ಲಿ ಯಾವ ಪಾಪ ಮಾಡಿದ್ದೆನೋ!" ಎಂದು ಆಕ್ರೋಶದಿಂದಲೇ ನುಡಿದಳು.

"ಏಕೆ ಅತ್ತಿಗೆ? ನನ್ನ ಮಗನಲ್ಲಿ ಯಾವ ಕಳಂಕವಿದೆ?"

"ಕಳಂಕವೇ? ತಿಳಿಯದವಳಂತೆ ನಟಿಸುತ್ತಿರುವೆ? ನಪುಂಸಕತ್ವ ಕ್ಕಿಂತ ಕಳಂಕ ಬೇಕೆ?"

"ಏನತ್ತಿಗೇ ವೀರ್ಯವಂತನಾದ ನನ್ನ ಮಗನನ್ನು ನಪುಂಸಕನೆನ್ನ ಬಹುದೇ?"

"ಹೇಳವೇ ಮತ್ತೇನು? ಮನೋಮೋಹಕಳಾದ ಯುವತಿ ಸಮೀಪ ದಲ್ಲಿದ್ದರೂ ಭೋಗಿಸುವುದಿಲ್ಲವೆಂದರೆ ನಪುಂಸಕನೆನ್ನದೆ ಮತ್ತೇನು ಹೇಳ ಬೇಕು? ನನ್ನನ್ನು ಈ ರೀತಿ ವಂಚಿಸಬೇಕೆಂದು ಎಷ್ಟು ದಿನದಿಂದ ಹೊಂಚು ಹಾಕುತ್ತಿದ್ದೆ ಪಾಪಿ!"

"ನನ್ನನ್ನು ನಿಂದಿಸಬೇಡಿರಿ ಅತ್ತಿಗೆ. ನನ್ನ ಮಗ ಖಂಡಿತ ನಪುಂಸಕ ನಲ್ಲ. ವಿದ್ಯಾಧ್ಯಯನದಮೇಲೆ ಗಮನವಿತ್ತಿರುವುದರಿಂದ ಹೆಂಡತಿಯ ವಿಚಾರದಲ್ಲಿ ಉದಾಸೀನವಾಗಿದ್ದಾನೆ. ಅದನ್ನು ನಾನು ಸರಿಪಡಿಸುತ್ತೇನೆ"

ಹೀಗೆ ನಾನಾ ಬಗೆಯಲ್ಲಿ ತನ್ನ ಅತ್ತಿಗೆಯನ್ನು ಸಮಾಧಾನಗೊಳಿಸುವ ಹೊತ್ತಿಗೆ ದೇಯಿಲೆಗೆ ಸಾಕುಬೇಕಾಗಿಹೋಯಿತು. ಈಗ ಅವಳಿಗೆ ಮೂರ ನೆಯ ಕೊರತೆ ಕಾಣಿಸಿತು. ಮಗನನ್ನು ಸೊಸೆಯಲ್ಲಿ ಅನುರಕ್ತನಾಗುವಂತೆ ಹೇಗೆ ಮಾಡುವುದೆಂಬುದೇ ಆ ಕೊರತೆಯಾಗಿತ್ತು. ಸೊಸೆಯು ಅನುಪಮ ಸುಂದರಿಯಾಗಿದ್ದರೂ ತನ್ನ ಪತಿಯನ್ನು ಆಕರ್ಷಿಸುವ ಮೋಹನ ಶಕ್ತಿ ಅವಳಲ್ಲಿರಲಿಲ್ಲ. ಆದುದರಿಂದ ದೇಯಿಲೆ ತನ್ನ ಮಗನನ್ನು ಸ್ತ್ರೀಯರ ಅನುರಾಗಿಯಾಗುವಂತೆ ಮಾಡಲು ತನ್ನ ಗಂಡನ ತಮ್ಮನಾದ ರುದ್ರದತ್ತನೇ ಸರಿಯೆಂದು ನಿರ್ಧರಿಸಿ ಅವನಿಗೆ ಹೇಳಿ ಕಳುಹಿಸಿದಳು.

ರುದ್ರದತ್ತನಾದರೋ ವಿಷಯಲಂಪಟ. ಚಂದಾಪುರದ ಸೂಳಗೇರಿಯೆಲ್ಲಾ ಅವನಿಗೆ ಚನ್ನಾಗಿ ಪರಿಚಯವಿದ್ದಿತು. ಕಾಮಶಾಸ್ತ್ರದಲ್ಲಿ ಅವನು ಮಹಾ ನಿಪುಣನೆನಿಸಿದ್ದನು. ಅವನು ತನಗೆ ಸಿಕ್ಕಿದ ಧನವನ್ನು ಆ ಕಾರ್ಯಕ್ಕೇ ವಿನಿಯೋಗಿಸುತ್ತಿದ್ದನು. ಅತ್ತಿಗೆಯಿಂದ ಚಾರುದತ್ತನ ಸಂಗತಿಯನ್ನು ಕೇಳಿ, ಈ ನೆಪದಿಂದ ತಾನೂ ಧನವನ್ನು ಲೂಟಿ ಮಾಡಬಹುದೆಂದು ಎಣಿಸಿ ಸಂತೋಷದಿಂದ ಚಾರುದತ್ತನನ್ನು ಸ್ತ್ರೀಸಂಗದಲ್ಲಿ ಕೆಡಹುವ ಜವಾಬ್ದಾರಿಯನ್ನು ಹೊತ್ತನು. ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಗಿತ್ತು ಅವನ ಸ್ಥಿತಿ. ಜೊತೆಯಲ್ಲೇ ಅದಕ್ಕೆ ಹೇರಳವಾದ ಹಣ ಬೇಕೆಂದು ಕೇಳುವುದನ್ನು ಅವನು ಮರೆಯಲಿಲ್ಲ. ದೇಯಿಲೆಯೂ ಒಪ್ಪಿದಳು. ಎಷ್ಟು ಹಣ ವೆಚ್ಚವಾದರೂ ಸರಿ, ಮಗ ಅವನ ಹೆಂಡತಿಯಲ್ಲಿ ಅನುರಕ್ತನಾಗಬೇಕೆಂಬುವೇ ಅವಳ ಚಿಂತೆಯಾಗಿತ್ತು.

ರುದ್ರದತ್ತನು ವೇಶ್ಯೆಯರಿಗೆ ಹಣಕೊಡಲು ಇಲ್ಲದೆ ಕಷ್ಟಪಡುತ್ತಿದ್ದನು. ಈಗ ಅವನಿಗೆ ಒಂದು ಉತ್ತಮವಾದ ಅವಕಾಶ ದೊರೆತಂತಾಗಿತ್ತು ಅತ್ತಿಗೆಯು ಹೇಳಿದ ದಿನಗಳಿಂದಲೇ ಅವನ ಚಟುವಟಿಕೆಗಳನ್ನು ಆರಂಭಿಸಿದನು. ವೇಶ್ಯಾವಾಟಿಕೆಯಲ್ಲಿ ಮತ್ತೆ ಠೀವಿಯಿಂದ ವಿಹರಿಸಲಾರಂಭಿಸಿದ.

ಚಾರುದತ್ತನ ಮನವನ್ನು ಅಪಹರಿಸಲು ವಸಂತತಿಲಕೆಯೆಂಬ ತ್ರಿಭುವನ ಸುಂದರಿಯಾದ ವಾರಾಂಗನೆಯನ್ನು ಆರಿಸಿದನು. ವಸಂತತಿಲಕೆ ವೇಶ್ಯೆಯ ಗರ್ಭದಲ್ಲಿ ಜನಿಸಿದ್ದರೂ ತಾನುಮಾತ್ರ ಯಾವ ವಿಟನೊಡನೆಯೂ ಸೇರದೆ ಶೀಲವನ್ನು ರಕ್ಷಿಸಿಕೊಂಡೇ ಬಂದಿದ್ದಳು. ಎಷ್ಟೋಸಾರಿ ಅವಳ ತಾಯಿ "ಸೂಳೆಗೆ ಶೀಲವೇ?" ಎಂದು ತಿರಸ್ಕರಿಸಿ ನುಡಿದು ಅವಳನ್ನು ವೇಶ್ಯಾ ವೃತ್ತಿಗೆ ಎಳೆಯಲು ಪ್ರಯತ್ನಿಸಿ ವಿಫಲಳಾಗಿದ್ದಳು. ಬೆದರಿಸಿದ್ದಳು, ಗದರಿಸಿದ್ದಳು. ತಾಯಿ ಮಕ್ಕಳಲ್ಲಿ ಕಲಹವೂ ಜರುಗಿತ್ತು. ಆದರೂ ವಸಂತತಿಲಕೆ ಜಗ್ಗಲಿಲ್ಲ. ಹೇಸಿಗೆಯ ಆ ಕೆಲಸಕ್ಕೆ ಧಿಕ್ಕಾರ ಮಾಡಿಬಿಟ್ಟಿದ್ದಳು. ಎಂದಾದರೂ ಒಂದುದಿನ ದಾರಿಗೆ ಬಂದೇ ಬರುವಳೆಂದು ತಾಯಿ ಕುಂಟಣಿ ತೆಪ್ಪಗಾಗಿದ್ದಳು. ರುದ್ರದತ್ತನಿಗೂ ಸಹ ಈ ಸಂಗತಿ ತಿಳಿದಿತ್ತು. ಒಂದುದಿನ ರುದ್ರದತ್ತ ಮತ್ತು ಕುಂಟಣಿಯರಿಬ್ಬರು ಸೇರಿ ಚಾರುದತ್ತನ ಗುಣವರ್ಣನೆಯನ್ನು ವಸಂತತಿಲಕೆಯ ಎದುರಿನಲ್ಲಿ ಮಾಡಿದರು. ಅವಳಿಗೆ ಸದ್ವಂಶೀಯನಾದ ಆತನ ವಿದ್ಯಾಚಾತುರ್ಯವೂ, ರೂಪುಯೌವನ ಸಂಪನ್ನತೆಯೂ ಮೊದಲೇ ತಿಳಿದಿತ್ತು. ಅಂತಹ ಶ್ರೇಷ್ಠ ಸತ್ಕುಲಜನ ಸಂಬಂಧ ತನಗೆ ದೊರಕುವುದಾದರೆ ಜೀವಮಾನ ಪರ್ಯಂತ ತಾನು ಆತನೊಂದಿಗೇ ಬಾಳುವುದಾಗಿ ನಿರ್ಧರಿಸಿಕೊಂಡಳು. ಅದಕ್ಕಾಗಿ ಸಮ್ಮತಿಯಿತ್ತಳು.

ವಸಂತತಿಲಕೆ ಸಮ್ಮತಿಸಿದುದು ರುದ್ರದತ್ತನಿಗೂ, ಆಕೆಯ ತಾಯಿಗೂ ಮಹದಾನಂದವನ್ನುಂಟುಮಾಡಿತ್ತು. ಮಗಳು ಒಪ್ಪಿದಮೇಲೆ ತಾನು ಶ್ರೀಮಂತ ಯುವಕರನ್ನು ಆಕರ್ಷಿಸಿ ಬಹು ಧನಾಢ್ಯಳಾಗಬಹುದೆಂದು ಆ ಮುದುಕಿ ಹಿಗ್ಗಿ ಹೀರೇಕಾಯಿಯಾದಳು. ಚಾರುದತ್ತನನ್ನು ವಸಂತತಿಲಕೆಯ ಬಲೆಯಲ್ಲಿ ಕೆಡವ ಬೇಕಾದರೆ ರುದ್ರದತ್ತನೂ, ಕುಂಟಣಿಯೂ ಸೇರಿ ಒಂದು ಹಂಚಿಕೆಯನ್ನು ಹೂಡಿದರು.

ಒಂದು ದಿನ ರುದ್ರದತ್ತನು ವಿರಾಮವಾಗಿ ಚಾರುದತ್ತನಲ್ಲಿಗೆ ಹೋದನು. ಆಗ ಚಾರುದತ್ತನು ವ್ಯಾಸಂಗದಲ್ಲಿ ಮಗ್ನನಾಗಿ ಕುಳಿತಿದ್ದನು. ಚಿಕ್ಕಪ್ಪನನ್ನು ಕಂಡು ಆತನು ಥಿಗ್ಗನೆದ್ದು ನಮಸ್ಕರಿಸಿ ಒಂದು ಪೀಠದಲ್ಲಿ ಕುಳ್ಳಿರಿಸಿದನು. ವ್ಯವಹಾರದ ಮಾತುಗಳು ಮುಗಿದ ನಂತರ "ಬಾರಯ್ಯಾ

ಚಾರುದತ್ತ ನಗರದಲ್ಲಿ ತಿರುಗಾಡಿ ಬರೋಣ" ಎಂದು ರುದ್ರದತ್ತ ಹೇಳಿದನು. ಎಂದೂ ಕರೆಯದ ಚಿಕ್ಕಪ್ಪ ಇಂದು ಕರೆಯುತ್ತಿರುವ ಒಲ್ಲೆನೆನ್ನಲು ಚಾರುದತ್ತನಿಗೆ ಮನಸ್ಸು ಬರಲಿಲ್ಲ. ವಸ್ತ್ರಾಭರಣಗಳ ಧರಿಸಿ ಹೊರಟನು. ನಗರದ ನಾನಾ ವೀಥಿಗಳನ್ನೂ, ಸಂಪತ್ತನ್ನೂ ತೊ ಸುತ್ತಾ ರುದ್ರದತ್ತನು ಅವನನ್ನು ವೇಶ್ಯಾವಾಟಿಕೆಗೆ ಕರೆತಂದನು. ಬೀದಿಯ ಎರಡುಕಡೆಗಳಲ್ಲಿದ್ದ ಉಪ್ಪರಿಗೆಯ ಮನೆಗಳೆಲ್ಲಾ ವೇಶ್ಯೆಯರ ಆಗಿದ್ದುವು. ಆ ಮನೆಗಳಲ್ಲಿ ಸುರಸುಂದರಿಯರಾದ ವೇಶ್ಯಾ ರಮಣಿಯ ನಾನಾಬಗೆಯಲ್ಲಿ ಅಲಂಕರಿಸಿಕೊಂಡು ಪುರುಷರನ್ನು ಆಕರ್ಷಿಸುವುದ ಮಗ್ನರಾಗಿದ್ದರು. ಅವರ ಹಾವಭಾವವಿಲಾಸ ವಿಭ್ರಮಗಳಿಗೆ ಜಿತೇಂದ್ರಿಯ ಮನಸೋಲುತ್ತಿದ್ದರು. ಚಾರುದತ್ತನು ರುದ್ರದತ್ತನ ಸಂಗಡ ವಾರಾಂಗ ವೀಥಿಗೆ ಅಡಿಯಿಡುತ್ತಿದ್ದಂತೆಯೇ ಎರಡು ಕಡೆಯ ಉಪ್ಪರಿಗೆ ಮನೆಗಳ ಲಲನೆಯರು ಗವಾಕ್ಷಿಗಳಲ್ಲೂ, ಬಾಗಿಲುಗಳಲ್ಲೂ ಬಂದು ನೆರೆದರು. ಚಾ ದತ್ತನು ಬರುತ್ತಿದ್ದುದನ್ನು ನೋಡಿ ನಿಜವಾದ ಮನ್ಮಥನೇ ಬರುತ್ತಿದ್ದಾನೇ ಬಗೆದರು. ಆತನ ಮುಖದ ತೇಜಸ್ಸು ವೇಶಭೂಷಣಗಳನ್ನೂ ನೋ ಅತನು ದೊಡ್ಡ ಧನಿಕನೆಂದು ಭಾವಿಸಿದರು. ಅವನನ್ನು ಒಲಿಸಿಕೊಳ್ಳ ಅನೇಕ ಬಗೆಯ ಶೃಂಗಾರ ಚೇಷ್ಟೆಗಳನ್ನು ಮಾಡಿದರು. ಅದನ್ನ ಗಮನಿಸಿದ ಚಾರುದತ್ತನು "ಚಿಕ್ಕಪ್ಪನವರೇ! ದಾರಿ ತಪ್ಪಿದಂತಿದೆ. ಇ ವೇಶ್ಯಾವಾಟಿಕೆಯಿರಬಹುದು" ಎಂದನು.

"ವೇಶ್ಯಾವಾಟಿಕೆಯಾದರೇನಾಯ್ತು ? ಮನ್ಮಥನ ಅಂತಃಪ ದಂತಿರುವ ಇಲ್ಲಿನ ವಾರಸ್ತ್ರೀಯರ ಸೌಂದರ್ಯಾವಲೋಕನವೂ ಫ ವಿಶೇಷವೇ ತಾನೇ" ಎಂದು ಅನುಭವಿಯಾದ ರುದ್ರದತ್ತನು ನುಡಿದ.

ಅವರು ಹೀಗೆ ಮಾತನಾಡುತ್ತಿರುವಷ್ಟರಲ್ಲೇ ಎದುರುಗಡೆಯ ಮದಿಸಿದ ಆನೆಯೊಂದು ಘೀಂಕಾರ ಮಾಡುತ್ತ ಸೊಂಡಿಲನ್ನು ಮೇಲಕ್ಕೆ ಹುಚ್ಚು ಹಿಡಿದಂತೆ ಓಡಿಬರುತ್ತಿತ್ತು. "ಇನ್ನೇನು ಗತಿ ?" ಎ ಅವರಿರ್ವರೂ ಹಿಂದಕ್ಕೆ ಓಡಿಹೋಗಲು ತಿರುಗಿದರೆ, ಹಿಂದಿನಿಂದ ಮತ್ತೊಂದು ಮದಗಜವು ಓಡಿ ಬರುತ್ತಿದ್ದಿತು. ಇಕ್ಕಟ್ಟಿನಲ್ಲಿ ಸಿ

ಚಾರುದತ್ತ "ಏನು ಗತಿ ಚಿಕ್ಕಪ್ಪ" ಎಂದು ಗಾಬರಿಯಿಂದಲೇ ಕೇಳಿದನು. ರುದ್ರದತ್ತನು ಅವನ ಕೈ ಹಿಡಿದೆಳೆಯುತ್ತ "ಈ ಭವ್ಯ ಭವನದ ಹೊರಾಂಗಣ ದಲ್ಲಿ ರಕ್ಷಣೆ ಪಡೆಯೋಣ ಎಂದು ಹೇಳಿ ವಸಂತ ತಿಲಕೆಯ ಮನೆಯ ಪಡಶಾಲೆಗೆ ಎಳೆದುಕೊಂಡು ಹೋಗಿ ನಿಂತನು. ಈ ವೇಳೆಗೆ ಆ ಮನೆಯ ಮುಂದೆಯೇ ಬೀದಿಯಲ್ಲಿ ಆ ಮದಗಜಗಳೆರಡೂ ಅರ್ಭಟಿಸಿ ಹೊಡೆದಾಡುತ್ತ ನಿಂತವು. ಈ ವೇಳೆಗೆ ಮನೆಯೊಳಗಿನಿಂದ ಸುಶ್ರಾವ್ಯವಾದ ಮಧುರ ಗೀತವೊಂದು ಕೇಳಿಬಂದಿತು. ಸಂಗೀತವನ್ನಾಲಿಸಿದ ಚಾರುದತ್ತನು "ಚಿಕ್ಕಪ್ಪ! ಸತ್ಕುಲಜರು ವೇಶ್ಯಾಸ್ತ್ರೀಯರ ಮನೆಯಲ್ಲಿ ಆಶ್ರಯ ಪಡೆಯ ಬಾರದು. ತೊಂದರೆಯಾದರೂ ಚಿಂತೆಯಿಲ್ಲ. ಹೊರಟು ಹೋಗೋಣ" ಎಂದನು. ಆದರೆ ರುದ್ರದತ್ತನು ಆತನನ್ನು ಹೋಗಗೊಡಲಿಲ್ಲ. ಭಯಂಕರ ಅಪಾಯವಿರುವುದರಿಂದ ಇದ್ದೇ ತೀರಬೇಕೆಂದೂ ಪ್ರಾಣಕ್ಕೆ ಅಪಾಯ ವೊದಗುವ ಸಂದರ್ಭದಲ್ಲಿ ಎಲ್ಲಿ ಬೇಕಾದರೂ ಆಶ್ರಯವನ್ನುಹೊಂದ ಬಹುದೆಂದು ಧರ್ಮಶಾಸ್ತ್ರದಲ್ಲಿರುವುದೆಂದೂ ಹೇಳಿ ಅಲ್ಲೇ ನಿಲ್ಲಿಸಿ ಕೊಂಡುಬಿಟ್ಟನು.

ಒಳಗಿನಿಂದ ಅಲಂಕೃತಳಾದ ವೃದ್ಧೆ ಕುಂಟಿಣಿ ಬಂದಳು. ಈಗ ರುದ್ರದತ್ತನು ಏರ್ಪಡಿಸಿದ್ದ ಥಾಟಕವನ್ನು ಎಲ್ಲರೂ ಆಡತೊಡಗಿದರು.

"ಇಲ್ಲಿ ಬಹಳ ಅಪಾಯವಿದೆ. ಎರಡು ಆನೆಗಳು ಕಾಳಗವಾಡು ತ್ತಿವೆ. ಕೋಪದಿಂದ ಹೋರಾಡುತ್ತಿರುವ ಅವು ನೀವು ನಿಂತಿರುವಲ್ಲಿಗೂ ಬಂದು ನುಗ್ಗಬಹುದು. ಆದುದರಿಂದ ಒಳಕ್ಕೆ ಬನ್ನಿರಿ. ನಿಮ್ಮಂತ ಶ್ರೇಷ್ಟ ಕುಲೋತ್ಪನ್ನರು ಬಂದರೆ ನಮ್ಮ ಮನೆ ಪುನೀತವಾಗುತ್ತದೆ" ಎಂದು ದೈನ್ಯದಿಂದ ಬೇಡಿದಳು. ಚಾರುದತ್ತನು ಆ ಮಾತನ್ನು ಕಿವಿಗೆ ಹಾಕಿ ಕೊಳ್ಳದೆ ನಿಂತುಬಿಟ್ಟನು. ರುದ್ರದತ್ತನು ಮಾತ್ರ ಮೊದಮೊದಲು ಆಗು ವುದಿಲ್ಲವೆಂದು ನುಡಿದನು. ಕುಂಟಿಣಿಯ ಪ್ರಾರ್ಥನೆ ಮಿತಿಮೀರಲು ರುದ್ರದತ್ತನು ಚಾರು ದತ್ತನಿಗೆ ಸಮಯೋಚಿತವಾದ ಅನೇಕ ಮಾತು ಗಳನ್ನಾಡಿ ಬಲವಂತದಿಂದ ಒಳಕ್ಕೆ ಕರೆದೊಯ್ದನು.

ಆ ಗೃಹದ ಭವ್ಯತೆಯನ್ನು ಕಂಡ ಚಾರುದತ್ತನು ಅಚ್ಚರಿಗೊಂಡನು.

ಎತ್ತ ನೋಡಿದರತ್ತ ಮನೋಜ್ಞವಾಗಿ ಚಿತ್ರಿಸಲ್ಪಟ್ಟಿದ್ದ ಶೃಂಗಾರದ ಚ
ಗಳು ಕೈಬೀಸಿ ಕರೆಯುವಂತೆ ತೋರುತ್ತಿದ್ದಿತು. ಕಾಮವಾಸನೆಯ
ಕೆರಳಿಸತಕ್ಕ ಸುಗಂಧ ದ್ರವ್ಯಗಳ ಪರಿಮಳವು ಮನೆತುಂಬಾ ವ್ಯಾ
ದ್ದಿತು. ನೆಲಕ್ಕೆ ರತ್ನಗಂಬಳಿ ಹಾಸಿದೆ. ಕುಂಟಿಣಿಯ ನಿರ್ದೇಶನ
ಇಬ್ಬರೂ ಬರುತ್ತಾ ಶಯನ ಗೃಹವನ್ನು ಹೊಕ್ಕರು. ಅಲ್ಲಿನ ರಮ
ಯತೆಯನ್ನು ನೋಡಿದ ಚಾರುದತ್ತನು ಮುಗ್ಧನಾದನು. ಅವನು
ಗೃಹವನ್ನು ಹೊಕ್ಕುತ್ತಿದ್ದಂತೆ ಎದುರಿನಲ್ಲಿ ಒಂದು ಕಲಾತ್ಮಕವಾದ ಮ
ದ ಮೇಲೆ ಹಾಕಿದ್ದ ಮೃದುವಾದ ಹಾಸಿಗೆಯ ಮೇಲೆ ದಿಂಬ
ಒರಗಿ ಮೋಹನಾಂಗಿಯೊಬ್ಬಳು ಕುಳಿತಿದ್ದುದು ಕಂಡು ಬಂದಿತು. ಅ
ಇವರನ್ನು ಕಂಡ ಕೂಡಲೆ ರಭಸದಿಂದ ಎದ್ದು ನಿಂತಳು. ಅ
ಎದ್ದು ನಿಂತ ರಭಸಕ್ಕೆ ಮೇಖಲೆಯ ಕಿರು ಗೆಜ್ಜೆಗಳು ಶಬ್ದಾಯಮ
ವಾದವು. ಚಾರುದತ್ತನು ಅವಳ ನವೋಜ್ವಲಕಾಂತಿಯ ಮುಖಾರವಿ
ವನ್ನು ನೋಡಿ ತನ್ನ ಕಣ್ಣುಗಳನ್ನು ಬೇರತ್ತ ತಿರುಗಿಸಲು ಅಸಮರ್ಥ
ದನು. ಅಂತಹ ಸೌಂದರ್ಯ ರಾಶಿಯನ್ನು ಅವನು ಹಿಂದೆಂದೂ ನೋ
ಯೇ ಇರಲಿಲ್ಲ. ಜಗತ್ತಿನಲ್ಲಿ ಇಂತಹ ರತ್ನಗಳು ಸಹ ಇರುವ
ಎಂದು ಅವನು ಬೆಕ್ಕಸಬೆರಗಾದನು. ಈ ಮಧ್ಯೆ ರುದ್ರದತ್ತನೂ ಕ
ಣಿಯೂ ಮೆಲ್ಲಗೆ ಜಾರಿಕೊಂಡು ಹೋದುದು ಅವನಿಗರಿವಾಗಲೇ

ಬಹಳ ಸಮಯದ ವರೆಗೆ ಯೌವನ ಮತ್ತರಾಗಿದ್ದ ಅವರೀರ್ವ
ಮುಖಾವಲೋಕನ ಮಾಡುತ್ತ ನಿಂತರು. ಏನು ಮಾಡಬೇಕೆಂ
ಇಬ್ಬರಿಗೂ ಹೊಳೆಯಲೇ ಇಲ್ಲ. ವಸಂತತಿಲಕೆಯೇ ಮೆಲ್ಲಮೆಲ್ಲನೆ
ಗಳನ್ನಿಡುತ್ತಾ ಬಂದಳು. ಧೈರ್ಯ ಮಾಡಿ ಚಾರುದತ್ತನ ಕೈಗ
ಹಿಡಿದಳು. ಎಂದೂ ಸ್ತ್ರೀಯರನ್ನೆ ಸ್ಪರ್ಶಿಸದ ಚಾರುದತ್ತನಿಗೆ
ಸುಖವನ್ನುಂಟುಮಾಡಿ ಶರೀರದಲ್ಲೆಲ್ಲಾ ರೋಮಾಂಚನವಾಯಿತು.
ಕೈಗಳಿಂದ ತನ್ನ ಕೈಗಳನ್ನು ಬಿಡಿಸಿಕೊಳ್ಳಬೇಕೆಂದು ಪ್ರಯತ್ನಿಸಿ
ಆಗಲಿಲ್ಲ. ಅವಳು ಮೆಲ್ಲಮೆಲ್ಲನೆ ಅವನನ್ನು ಕರೆದೊಯ್ದು ಮ
ಮೇಲೆ ಕುಳ್ಳಿರಿಸಿ ಅವನ ಪಾದಗಳ ಮೇಲೆ ಬಿದ್ದು ನಮಸ್ಕರಿಸಿ,

ಅಲ್ಲೇ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. ಈಗ ಚಾರುದತ್ತನಿಗೆ ಮಾತ ಾಡದೆ ಇರಲಾಗಲಿಲ್ಲ. ಅವನಿಗೆ ತಿಳಿಯದಂತೆಯೇ "ಏಕಳುವೆ ಕೋಮ ಾಂಗಿ?" ಎಂಬ ಶಬ್ದಗಳು ಅವನ ಬಾಯಿಂದ ಹೊರಬಿದ್ದವು. ತಮ್ಮಂತಹ ಸಜ್ಜನರನ್ನು ಕೈಹಿಡಿಯಬೇಕೆಂದು ಬಹುದಿನಗಳಿಂದ ತಪ ಸ್ಸು ಮಾಡುತ್ತಿದ್ದೆ. ಭಗವಜ್ಜಿನೇಂದ್ರನ ದಯೆಯಿಂದ ಇಂದು ಆ ತಪ ಸ್ಸಿನ ಫಲವು ಲಭಿಸಿದೆ. ನನ್ನನ್ನು ವೇಶ್ಯೆಯೆಂದು ತಿಳಿಯಬೇಡಿರಿ. ನನ್ನ ನ್ನು ಕೈ ಬಿಡಬೇಡಿರಿ. ನಾನು ವೇಶ್ಯಾಕುಲದಲ್ಲಿ ಹುಟ್ಟಿದರೂ ಪತಿವ್ರತೆಯೇ ಾಗಿದ್ದೇನೆ" ಎಂದು ಹೇಳಿ ಅವನ ಪಾದಗಳನ್ನು ಮತ್ತೆ ಅಪ್ಪಿದಳು. ವೇಶ್ಯೆಯರಲ್ಲೂ ಪತಿವ್ರತೆಯರಿರುವುದು ಅದೇ ಅವನು ಮೊದಲು ಕೇಳಿದ್ದ ಂದ ವಿಸ್ಮಿತನಾದನು. ಅವಳವಿನಯಾದಿ ಸದ್ಗುಣಗಳಿಂದಾಕರ್ಷಿತನಾಗಿ ಅಲ್ಲೇ ಉಳಿದನು.

ಅಂದಿನಿಂದ ಆ ಇಬ್ಬರು ಪ್ರೇಮಿಗಳಿಗೂ ಸ್ನೇಹವು ಬಲಿಯಿತು. ಚಾರುದತ್ತನ ಮನಸ್ಸಿನಿಂದ ಮಿತ್ರಾವತಿಯ ನೆನಪು ಾರಿಹೋಯಿತು. ವಸಂತತಿಲಕೆಯ ಸಂಗಡ ಅಮಿತ ಭೋಗೋಪಭೋಗಗಳನ್ನು ಪಡೆದು ಆನಂದದಿಂದ ಇದ್ದುಬಿಟ್ಟನು. ಇತ್ತ ಅವಳ ತಾಯಿ ಚಾರುದತ್ತನ ತಾಯಿಗೆ ಹೇಳಿ ಕಳುಹಿಸಿ ಪ್ರತಿನಿತ್ಯವೂ ವೆಚ್ಚ ವೆಂದು ಸಹಸ್ರ ಹೊನ್ನುಗಳನ್ನು ತರಿಸುತ್ತಿದ್ದಳು. ಇದು ವಸಂತತಿಲಕೆ ಯಾಗಲೀ ಚಾರುದತ್ತನಿಗಾಗಲೀ ತಿಳಿಯಲಿಲ್ಲ. ತನ್ನ ಮಗ ಸ್ತ್ರೀ ಸಂಬಂಧ ದಲ್ಲಿ ಅನುರಕ್ತನಾದ ದೇಯಿಲೆಗೂ ತೃಪ್ತಿಯಾಯಿತು. ಆದರಿಂದ ಹಣ ವನ್ನು ಎಷ್ಟಾದರೂ ಕಳುಹಿಸಲು ಅವಳು ಹಿಂತೆಗೆಯಲಿಲ್ಲ. ಆದರೆ ಕೂಡಿಟ್ಟ ಹಣ ಎಷ್ಟುದಿನ ಬಂದೀತು! ಭಾನುದತ್ತನಿಗೆ ವಯಸ್ಸಾಗಿದ್ದುದರಿಂದ ಬರ ಬರುತ್ತಾ ಸಂಪಾದನೆಯೂ ಕಡಿಮೆಯಾಗತೊಡಗಿತು. ಮಗ ವೇಶ್ಯಾ ಲೋಲುಪನಾಗಿ ವಂಶಕ್ಕೆ ಕಳಂಕತಂದನೆಂಬ ಚಿಂತೆಯೂ ಅವನನ್ನು ಆವರಿ ಸಿತು. ಇದೇ ಸಮಯವೆಂದು ರುದ್ರದತ್ತನು ಅತ್ತಿಗೆಯಿಂದ ಏನೇನೋ ನೆಪಗಳನ್ನು ಹೇಳಿ ಹಣವನ್ನು ಸೆಳೆಯಲಾರಂಭಿಸಿ ಜ್ಞಾತಿದ್ವೇಷವನ್ನು ತೀರಿಸಿಕೊಂಡನು. ಇಕ್ಕಟ್ಟಿನಲ್ಲಿ ಸಿಕ್ಕಿದ್ದ ದೇಯಿಲೆ ಸದ್ದಿಲ್ಲದೆ ಹಣವನ್ನು

ತೆಗೆದುಕೊಡುತ್ತಿದ್ದಳು. ಈ ಎಲ್ಲಾ ಚಿಂತೆಗಳಿಂದ ಭಾನುದತ್ತನು ಒಂದು ದಿನ ಕಣ್ಮುಚ್ಚಿದನು. ಎಲ್ಲಾ ನಿರ್ವಹಣೆಯೂ ದೇಯಿಲೆಯುವೇಲೆ ಬಿದ್ದಿತು.

ಮಗನನ್ನು ಮನೆಗೆ ಕರೆಸಿಕೊಳ್ಳಬೇಕೆಂದು ದೇಯಿಲೆಯು ಮಾಡಿದ ಪ್ರಯತ್ನಗಳೆಲ್ಲ ನಿಷ್ಫಲವಾದುವು. ಈಗ ತಾನು ಮಾಡಿದ ತಪ್ಪಿನಿಂದ ಮಗನನ್ನೇ ಕಳೆದುಕೊಳ್ಳಬೇಕಾಯಿತೆಂಬ ಕೊರಿಕೆ ಅವಳಲ್ಲಿ ಮೂಡಿತು. ಪ್ರತಿದಿನವೂ ಸೊಸೆಯನ್ನು ಸಮಾಧಾನಪಡಿಸುವುದೂ, ತನ್ನ ಅತ್ತಿಗೆಯಿಂದ ನಿಂದಾವಚನಗಳನ್ನು ಕೇಳುವುದೂ ನಿತ್ಯದ ಸಂಗತಿಯಾಯಿತು. ಸಂಪತ್ತೆಲ್ಲ ಕರಗಿ ದಾರಿದ್ರ್ಯವು ಕಾಲಿಟ್ಟಿತು. ಒಂದುದಿನ ಸಾಲಗಾರರಿಗೆ ಮನೆಯು ಹೋಯಿತು. ಮನೆಯನ್ನು ತೊರೆದು ಬೇರೆಯ ಮನೆಗೆ ಹೋದುದೂ ಆಯಿತು.

ದೇಯಿಲೆ ದರಿದ್ರಳಾಗಿ ಅವಳಿಂದ ಹಣ ಬರುವುದು ನಿಂತನಂತರ ಕುಂಟಣಿ ಚಾರುದತ್ತನನ್ನು ಅನಾದರದಿಂದ ಕಾಣತೊಡಗಿದಳು. ವಸಂತ ತಿಲಕೆ ಮಾತ್ರ ತನ್ನ ಧರ್ಮವನ್ನು ಬಿಡಲಿಲ್ಲ. ಪತಿವ್ರತೆಯಂತೆಯೇ ಅವನ ಸೇವೆ ಮಾಡುತ್ತಿದ್ದಳು. ಚಾರುದತ್ತನನ್ನು ಮನೆ ಬಿಟ್ಟು ಹೊರಡಿಸ ಬೇಕೆಂದು ಅನೇಕ ವೇಳೆ ಮಗಳಿಗೆ ಹೇಳಿನೋಡಿದಳು. ಆದರೆ ಮಗಳು ಕೇಳಲಿಲ್ಲ. ದಿನವೂ ಆತನ ಮನೆಯಿಂದ ಧನವನ್ನು ತರಿಸುತ್ತಿದ್ದಳೆಂದು ತಿಳಿದಮೇಲಂತೂ ಅವಳಿಗೆ ಅತೀವ ದುಃಖವಾಯಿತು. ಈ ಸಂಗತಿ ತನ್ನ ಪತಿಗೆ ತಿಳಿದರೆ ನಿಜವಾಗಿಯೂ ತನ್ನನ್ನು ವೇಶ್ಯೆಯೆಂದೇ ತಿಳಿಯುವ ನೆಂದು ಬಹು ವ್ಯಥೆಪಟ್ಟಳು. ವೇಶ್ಯೆಯ ಕುಲದಲ್ಲಿ ಹುಟ್ಟಿದ ಮಾತ್ರಕ್ಕೆ ವೇಶ್ಯೆಯಾಗಿಯೇ ಬಾಳಬೇಕೆಂಬ ನಿಯಮವಿಲ್ಲವೆಂದು ತಾಯಿಯೊಂದಿ ಬಹುವಾಗಿ ವಾದಿಸಿದಳು. ಆದರೆ ಕಲ್ಲೆದೆಯುಳ್ಳವಳಾದ ಕುಂಟಣಿಗೆ ಇವಾ ವುದೂ ಬೇಕಾಗಿರಲಿಲ್ಲ. ವಾರಾಂಗನೆಯರಿಗೆ ಹಣವು ಮುಖ್ಯವೆಂಬೆ ಅವಳ ಛಲವಾಗಿದ್ದಿತು.

ಮಗಳಿಂದ ಚಾರುದತ್ತನನ್ನು ಅಗಲಿಸಲು ಕುಂಟಣಿಯು ಯಾವುದಾ ದರೂ ಒಂದು ಯುಕ್ತಿಯನ್ನು ಆಲೋಚಿಸುತ್ತಲೇ ಇದ್ದಳು. ಒಂದು ದಿ ಅವಳ ಅಭೀಷ್ಟವು ನೆರವೇರುವ ದಿನವೂ ಒಂದು ಒದಗಿತು. ನಗರ

ಜಿನದೇವನ ಮಂದಿರದಲ್ಲಿ ಮಹಾಭಿಷೇಕ ಮತ್ತು ಮಹಾಯಾಗಮಂಡಲಾ ರಾಧನೆಗಳು ನಡೆಯುತ್ತಿವೆಯೆಂದು ತಿಳಿದ ಚಾರುದತ್ತನು ಆ ಮಹಾ ಪೂಜೆಯ ಸಂದರ್ಶನಾರ್ಥವಾಗಿ ಬಸದಿಗೆ ಆ ದಿನ ಹೋಗಿದ್ದನು. ವಸಂತ ತಿಲಕೆಯು ಆವನ ಆಗಮುವವನ್ನೇ ಚಾತಕಪಕ್ಷಿಯಂತೆ ನಿರೀಕ್ಷಿಸುತ್ತಾ ಕುಳಿ ತಿದ್ದಳು. ಅವನು ಬರುವುದು ಸ್ವಲ್ಪ ವೇಳೆಯಾದರೂ ಆವಳಿಗೆ ಭಯ ವುಂಟಾಗುತ್ತಿತ್ತು. ಆದುದರಿಂದ ಅವಳು ಆತ್ತಿತ್ತ ಚಲಿಸುತ್ತ ಕಾತರದಿಂದ ಕಾಯುತ್ತಿದ್ದಳು. ಈ ಮಧ್ಯೆ ಆವಳ ತಾಯಿ ಒಂದೆರಡುಸಾರಿ ಬಂದು “ನಿನ್ನ ಪತಿ ಇನ್ನೂ ಬರಲಿಲ್ಲವೇನೇ ವಸಂತಾ!” ಬಂದು ವಿಚಾರಿಸಿಕೊಂಡು ಹೋಗಿದ್ದಳು. ಈ ದಿನ ತಾಯಿ ಅಪೂರ್ವವಾಗಿ ಮಧುರವಾಗಿ ಮಾತನಾ ಡಿದುದನ್ನು ಕೇಳಿ ವಸಂತತಿಲಕೆಗೆ ಅಚ್ಚರಿಯೂ ಆಗಿತ್ತು. ಆ ವೇಳೆಗೆ ಚಾರುದತ್ತನು ಬಂದನು. ಪತಿಯನ್ನು ಕಂಡೊಡನೇ ವಸಂತತಿಲಕ ನಿಟ್ಟು ಸಿರನ್ನು ಬಿಟ್ಟಳು. ಆತನ ಕೈ ಹಿಡಿದು ಮಂಚದಮೇಲಿನ ಶಯ್ಯೆಯಲ್ಲಿ ಕುಳ್ಳರಿಸಿದಳು. ಅನಂತರ ಇಬ್ಬರೂ ಜಿನಬಸದಿಯ ಪೂಜಾವೈಭವವನ್ನು ಮಾತಾಡತೊಡಗಿದರು. ಅಷ್ಟರಲ್ಲಿ ಕುಂಟಣಿಯು ಎರಡು ಲೋಟಗ ಳಲ್ಲಿ ತಂಪಾದ ಪಾನೀಯವನ್ನು ತಂದು “ನಿನ್ನ ಪತಿ ದಣಿದುಬಂದಿದ್ದಾರೆ. ಇದನ್ನು ಅವರಿಗೆ ಕೊಟ್ಟು ನೀನೂ ಕುಡಿ ವಸಂತಾ” ಎಂದು ಕೊಟ್ಟು ಹೊರಟುಹೊದಳು. ಚಾರುದತ್ತನಿಗೆ ಆಯಾಸವಾಗಿದ್ದುದೂ ನಿಜ. ಆದುದರಿಂದ ತಾನು ಒಂದನ್ನು ತೆಗೆದಕೊಂಡು ಮತ್ತೊಂದನ್ನು ವಸಂತ ತಿಲಕೆ ತೆಗೆದುಕೊಂಡು ತನ್ನ ಸಂಗಡದಲ್ಲೇ ಕುಡಿಯಬೇಕೆಂದು ಆಗ್ರಹ ಮಾಡಿದನು. ಪತಿಯ ಮನಸ್ಸನ್ನು ನೋಯಿಸಬಾರದೆಂದು ಆವಳೂ ತೆಗೆದುಕೊಂಡು ಅವನೊಂದಿಗೇ ಕುಡಿದಳು. ಕುಡಿದ ಸ್ವಲ್ಪ ಹೊತ್ತಿನಲ್ಲಿ ಅದರಲ್ಲಿ ಬೆರೆತಿದ್ದ ಮಾದಕಪದಾರ್ಥದ ಪ್ರಭಾವದಿಂದ ತಲೆ ತಿರುಗಿದಂ ತಾಗಿ ಇಬ್ಬರೂ ಪ್ರಜ್ಞಾಶೂನ್ಯರಾಗಿ ಬಿದ್ದರು.

ಕೂಡಲೇ ಕುಂಟಣಿ ಬಲಿಷ್ಠರಾದ ನಾಲ್ವರು ಕಟ್ಟಾಳುಗಳನ್ನು ಕರೆ ತಂದಳು. ಅವಳ ಆಜ್ಞೆಯಂತೆ ಚಾರುದತ್ತನನ್ನು ಒಂದು ಚಾಪೆಯಲ್ಲಿ ಸುತ್ತಿದರು. ಶೀಘ್ರವಾಗಿ ಅವನನ್ನು ಹೊತ್ತುಕೊಂಡು ನಗರದ ಮುಂದಿನ

ತಿಪ್ಪೆಗೆ ಎಸೆದು ಹೊರಟು ಹೋದರು. ಬೆಳಗಾಗುವವರೆಗೂ ಆ ತಿಪ್ಪೆಯಲ್ಲೇ ಚಾರುದತ್ತನು ಜ್ಞಾನವಿಲ್ಲದೇ ಬಿದ್ದಿದ್ದನು. ಸೂರ್ಯೋದಯವಾಗುವ ವೇಳೆಗೆ ಅವನಿಗೆ ಎಚ್ಚರವಾಯಿತು. ತಾನು ಎಲ್ಲಿ ಬಿದ್ದಿರುವೆನೆಂಬ ಕಲ್ಪನೆಯೇ ಅವನಿಗೆ ಉಂಟಾಗಲಿಲ್ಲ. ಶರೀರವು ಅಲ್ಲಾಡದಷ್ಟು ಬಂಧಿತವಾಗಿತ್ತು. ಮೂಗಿಗೆ ದುರ್ವಾಸನೆಯೂ ಬಡಿಯುತ್ತಿದ್ದಿತು. ತನ್ನನ್ನು ಸುತ್ತಿದ್ದ ಚಾಪೆಯನ್ನು ಬಹು ಶ್ರಮದಿಂದ ಬಿಡಿಸಿಕೊಂಡು ಮೇಲೆದ್ದನು. ಆಗ ಅವನಿಗೆ ತಾನೆಲ್ಲಿರುವೆನೆಂಬ ಅರಿವಾಯಿತು. ವೇಶ್ಯೆಯರ ಪ್ರೇಮ ಧನವಿರುವವರೆಗೆ ಮಾತ್ರ ಎಂದು ಆಗ ಅವನು ತಿಳಿದನು. ಅವನಿಗೆ ತನ್ನ ತಾಯಿ, ಹೆಂಡತಿ ಮತ್ತು ಮನೆಗಳು ಆಗಲೇ ಸ್ಮೃತಿಪಥದಲ್ಲಿ ಸುಳಿಯಲಾರಂಭಿಸಿದುವು. ನೇರವಾಗಿ ಹೊರಟು ಬಂದವನೇ ತನ್ನ ಮನೆಗೆ ಬಂದನು. ಮನೆಯೆಲ್ಲಿದೆ? ಅನ್ಯರ ಪಾಲಾಗಿತ್ತು! ತನ್ನ ಮನೆಯವರು ದರಿದ್ರಾವಸ್ಥೆಗೆ ಇಳಿದಿರುವರೆಂಬುದು ಆಗಲೇ ಅವನಿಗೆ ತಿಳಿದುದು! ಅಲ್ಲಿಂದ ವಿಚಾರಿಸಿಕೊಂಡು ತನ್ನ ಮನೆಯವರಿದ್ದಲ್ಲಿಗೆ ಹೋದನು. ಮಗನನ್ನು ನೋಡಿದ ದೇಯಿಲೆಗೆ ಆದ ಸಂತೋಷ ಅಷ್ಟಿಷ್ಟಲ್ಲ. ಆ ಸಂತೋಷದಲ್ಲಿ ಮಿತ್ರಾವತಿಯೂ ಭಾಗಿಯಾಗಿದ್ದಳು. ಆಕೆಯೂ ಬಂದು ಪತಿಯ ಪಾದಗಳಿಗೆ ವಂದಿಸಿ, ಅವನ ಮೈಮೇಲೆ ಅಂಟಿದ್ದ ತಿಪ್ಪೆಯ ಧೂಳನ್ನು ತೊಡೆದಳು. ಗೃಹಿಣಿಯ ಪ್ರೇಮಕ್ಕೂ ವೇಶ್ಯಾಪ್ರೇಮಕ್ಕೂ ಇರುವ ಅಂತರವನ್ನು ನೆನೆದ ಅವನು ಕಣ್ಣಲ್ಲಿ ಕಂಬನಿದುಂಬಿದನು. ತಾನು ಮಾಡಿದ ಅಪರಾಧಕ್ಕಾಗಿ ಹೆಂಡತಿಯಲ್ಲಿ ಕ್ಷಮೆಕೇಳಿದನು.

ಇತ್ತ ಎಚ್ಚೆತ್ತ ವಸಂತತಿಲಕೆ ತನ್ನ ಪತಿಯನ್ನು ಹುಡುಕಿದಳು. ಎಲ್ಲೂ ಕಾಣಲಿಲ್ಲ. ಗಾಬರಿಯಾದಳು. ಅತ್ತಳು. ತಾಯಿಯನ್ನು ಕೇಳಿದಳು "ನಿನ್ನ ಪ್ರಿಯ ಪತಿ ತಿಪ್ಪೆಯಲ್ಲಿ ಬಿದ್ದಿದ್ದಾನೆ" ಎಂದು ವ್ಯಂಗ್ಯವಾಗಿ ನುಡಿದ ನಕ್ಕಳು. ತಾಯಿಯ ನಗು ಮಗಳ ಹೃದಯಕ್ಕೆ ಶೂಲದಂತಾಯಿತು. ಅವಳ ಸಂಕಟ ಹೇಳತೀರದಾಯಿತು. ಒಂದು ಕ್ಷಣವೂ ಅವಳು ಅಲ್ಲಿ ನಿಲ್ಲಲಿಲ್ಲ. ತಾಯಿಯಾದಿಯಾಗಿ ಯಾರು ತಡೆದರೂ ನಿಲ್ಲದೆ ನೇರವಾಗಿ ಗಂಡನು ಬಿದ್ದಿದ್ದ ತಿಪ್ಪೆಯ ಬಳಿಗೆ ಓಡಿ ಬಂದಳು. ಆದರೆ ಅಲ್ಲಿ ಚಾರುದತ್ತನಿರಲಿಲ್ಲ. ಬರೀ ಚಾಪೆ ಬಿದ್ದಿದ್ದಿತು. ಚಾರುದತ್ತನಿರಲಿಲ್ಲ. ಅಲ್ಲಿಂ

ಚಾರುದತ್ತನಿರುವಲ್ಲಿಗೆ ವಿಚಾರಿಸಿಕೊಂಡು ಓಡಿದಳು. ನಡುಬೀದಿಯಲ್ಲಿ ಕಾತರದಿಂದ ಬರುತ್ತಿದ್ದ ಈ ಸುಂದರಿಯನ್ನು ಜನರು ನೋಡಿ ಪರಿಪರಿ ಮಾತನಾಡಿಕೊಂಡರು. ವಸಂತತಿಲಕೆ ಅದಾವುದಕ್ಕೂ ಕಿವಿಗೊಡದೆ ಚಾರುದತ್ತನಲ್ಲಿಗೆ ಬಂದಾಗ, ಮಿತ್ರಾವತಿ ಗಂಡನ ದೇಹದ ಧೂಳನ್ನು ತೊಡೆದು, ಕ್ಷಮೆ ಕೇಳಿದ ಆತನ ಪಾದಗಳ ಮೇಲೆ ಬಿದ್ದು "ತಾವು ಕ್ಷಮೆ ಕೇಳಬೇಡಿರಿ ಸ್ವಾಮಿ! ಪತಿವ್ರತೆಯರು ಪತಿಯಿಂದ ಕ್ಷಮೆ ಕೇಳಿಸಿಕೊಳ್ಳು ವುದನ್ನು ಸಹಿಸಲಾರರು" ಎಂದು ಹೇಳಿ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಚಾರುದತ್ತನಿಗೆ ವಿವಾಹವಾಗಿದ್ದಿತ್ತೆಂಬುದನ್ನು ಆಗಲೇ ವಸಂತ ತಿಲಕೆಗೆ ಅರಿವಾದುದು. ಆ ದಂಪತಿಗಳ ಮಧ್ಯೆ ತಾನು ಮುಖ ತೋರಿಸಿ ಅವರ ಜೀವನದ ಸೌಖ್ಯಕ್ಕೆ ಭಂಗತರಬಾರದೆಂದೆನಿಸಿದ ಆಕೆ ತನ್ನ ಮನಸ್ಸಿನಲ್ಲಿದ್ದ ಪತಿ ವ್ಯಾಮೋಹವನ್ನು ಕಷ್ಟದಿಂದ ತೃಣೀಕರಿಸಿ ಇಲ್ಲಿಗೆ ಬಂದಿದ್ದಾಳೆ. ಈಕೆಯು ವೇಶ್ಯಾ ಕುಲೋತ್ಪನ್ನೆಯಾಗಿದ್ದರೂ ಮಹಾ ಪರಿಶುದ್ಧಳು. ಪತಿವ್ರತಾ ಶಿರೋಮಣಿ. ವಾರಾಂಗನೆಯರಲ್ಲಿ ರತ್ನದಂತಿದ್ದಾಳೆ.

ಎಂದು ಅಜಿತಸೇನಸಾಗರ ಮುನಿಗಳು ಹೇಳಿ ಸಭೆಯವರಿಗೆ ಆಶ್ಚರ್ಯ ವನ್ನುಂಟುಮಾಡಿದರು. ಅಲ್ಲಿ ನೆರೆದಿದ್ದ ಧಾರ್ಮಿಕರು ವಸಂತತಿಲಕೆಯನ್ನು ಕೊಂಡಾಡಿದರು. ಅವಳೂ ಸಹ ವೈರಾಗ್ಯದಿಂದ ಎಲ್ಲ ವ್ಯಾಮೋಹಗಳನ್ನು ಕಿತ್ತೊಗೆದು ಶುಭ ಧ್ಯಾನವನ್ನುಮಾಡಿ ಸದ್ಗತಿಯನ್ನು ಹೊಂದಿದಳು. ಭೋಗಸ್ತ್ರೀಯಾಗಬೇಕಾಗಿದ್ದ ವಸಂತತಿಲಕೆ ಜಗತ್ತಿನಲ್ಲಿ ಎಂದೆಂದಿಗೂ ಯೋಗಸ್ತ್ರೀ ಆಗಿಯೇ ಉಳಿದಳು.

—–·–

ಬಡತನವನ್ನು ದ್ವೇಷಿಸು; ಬಡವರನ್ನಲ್ಲದೆ.

೭

ಮನೆ ಮುರುಕ ಗೆಳೆಯ



ಮಹಾ ವೈಭವದಿಂದ ಸುಖ ಸಂಪತ್ತನ್ನು ಅನುಭವಿಸಿದ್ದ ವಸುಷೇ
ಮಹಾರಾಜ, ಜಿನಮುನಿ ದೀಕ್ಷೆಗಾಗಿ ಸಿದ್ಧವಾಗಿ ನಿಂತಿದ್ದ. ಕಿರೀಟ ಧರಿ

ಕಣ್ ಕೋರೈಸುತ್ತಿದ್ದ ಅವನ ಶಿರಸ್ಸು ಇಂದು ಒಂದು ಕೂದಲೂ ಇಲ್ಲದಂತಾಗಿ ಬೋಳಾಗಿದ್ದಿತು. ನಿತ್ಯವೂ ಧರಿಸುತ್ತಿದ್ದ ನವರತ್ನದ ಒಡವೆಗಳು ದೀನದಲಿತರ ಪಾಲಾಗಿದ್ದುವು. ಚೀನಾಂಬರ ಪೀತಾಂಬರ ವಸ್ತ್ರದ ಸ್ಥಾನದಲ್ಲಿ ಶುಭ್ರವಾದ ಶ್ವೇತ ವಸ್ತ್ರವು ಬಂದಿತ್ತು. ಹೊಳೆಯುತ್ತಿದ್ದ ತೀಕ್ಷ್ಣವಾದ ಖಡ್ಗವನ್ನು ಹಿಡಿದಿದ್ದ ಕೈಗಳು ಇಂದು ಕುಂಚ ಕಮಂಡಲುಗಳನ್ನು ಹಿಡಿದಿದ್ದವು. ಅನುರಕ್ತ ಭಾವನೆಯ ಸ್ಥಾನದಲ್ಲಿ ವಿರಕ್ತ ಭಾವನೆಯು ಸ್ಫುಟಗೊಂಡಿತ್ತು.

ಮಹಾರಾಜನ ದೀಕ್ಷಾಗ್ರಹಣ ಸಮಾರಂಭವಾದ ಆ ಧಾರ್ಮಿಕ ಸಭೆಯಲ್ಲಿ ಅಸಂಖ್ಯಾತ ಜನರು ನೆರೆದಿದ್ದರು. ಸ್ತ್ರೀಯರು, ಪುರುಷರು. ಬಾಲಕರು ಎಲ್ಲರೂ ತದೇಕಚಿತ್ತರಾಗಿ ದಿಗಂಬರಾಚಾರ್ಯರತ್ತ ಒಮ್ಮೆ, ಮತ್ತೊಮ್ಮೆ ದೀಕ್ಷಾಗ್ರಾಹಿಯಾಗುತ್ತಿದ್ದ ಮಹಾರಾಜನ ಕಡೆ ನೋಡುತ್ತಿದ್ದರು. ಆಚಾರ್ಯರು "ಓಂಣಮೋ ಅರಿಹಂತಾಣಂ" ಎಂಬ ಪಂಚಪರಮೇಷ್ಠಿ ಮಂತ್ರವನ್ನು ಉಚ್ಚರಿಸಿದರು. ಆಚಾರ್ಯರು ಪಠಿಸುತ್ತಿದ್ದ ದೀಕ್ಷಾವಿಧಿಯ ಮಂತ್ರವನ್ನು ಶ್ರಾವಕ ಶ್ರಾವಿಕೆಯರು ಆಲಿಸಿದರು. ವಿಧಿಯ ಕಾರ್ಯದ ಅಂತ್ಯದಲ್ಲಿ "ಜಯತು ಜಿನ ಶಾಸನಂ" ಮತ್ತು "ಅಹಿಂಸಾ ಪರಮೋ ಧರ್ಮಃ" ಎಂಬ ಧಾರ್ಮಿಕ ವಾಕ್ಯಗಳನ್ನು ಏಕ ಕಂಠದಲ್ಲಿ ಘೋಷಿಸಿದರು. ಆ ಘೋಷಣೆಯ ಅನಂತರ ಎಲ್ಲರಿಗೂ ಆಧ್ಯಾತ್ಮಿಕಾನಂದವು ತುಂಬಿ ಬಂದು ಮತ್ತೆ ನಿಶ್ಶಬ್ದದಲ್ಲಿ ಪರ್ಯವಸಾನವಾಯಿತು.

ದೀಕ್ಷೆಯನ್ನು ತೆಗೆದುಕೊಂಡವನು ಸುರಮ್ಯಮಂಡಲಕ್ಕೆ ಒಡೆಯನಾಗಿದ್ದ ವಸುಷೇಣನೆಂಬುವನು. ಸುರಮ್ಯಮಂಡಲಕ್ಕೆ ಪಾವನಪುರವು ರಾಜಧಾನಿಯಾಗಿತ್ತು. ಹಿಂದೆ ಬಾಹುಬಲಿಯಂತಹ ಅತ್ಯುನ್ನತ ಮಹಾತ್ಯಾಗಿಯ ರಾಜಧಾನಿಯಾಗಿ ಪವಿತ್ರವಾಗಿತ್ತು. ವಸುಷೇಣ ಮಹಾರಾಜನಂತಹ ಪರಮಧಾರ್ಮಿಕ ನೃಪತಿಯ ರಾಜಧಾನಿಯಾಗಿ ಮತ್ತೆ ಪವಿತ್ರವಾಗಿಯೇ ಉಳಿದಿತ್ತು. ಅವನ ಧರ್ಮಪತ್ನಿ ಸುನಂದೆ. ರೂಪ, ಯೌವನ, ಸದ್ಗುಣಗಳೆಲ್ಲವೂ ಅವಳಲ್ಲಿ ಮನೆಮಾಡಿಕೊಂಡಿದ್ದವು. ಅಂಗಸೌಂದರ್ಯ, ಅಲಂಕಾರಸೌಂದರ್ಯ ಮತ್ತು ಆತ್ಮಸೌಂದರ್ಯಗಳು ಸುನಂದೆಯನ್ನೇ

ನೆಲೆಯನ್ನಾಗಿ ಮಾಡಿಕೊಂಡಿದ್ದವು. ಅವಳ ಚೆಲುವು ಮತ್ತು ಒಳ್ಳೆ
ಗಳಿಂದ ಆಕರ್ಷಿತನಾದ ರಾಜನು ಎಡೆಬಿಡದೆ ಅವಳ ಅಂಗಸೌಖ್ಯವನ್ನು
ಅನುಭವಿಸುತ್ತಿದ್ದನು.

ವಸುಷೇಣನಿಗೆ ಬಾಲ್ಯದಲ್ಲಿ ಚಂಡಶಾಸನನೆಂಬ ರಾಜಪುತ್ರನು ಸ
ಪಾಠಿಯೂ, ಸಹಸಂಗತಿಯೂ ಆಗಿದ್ದನು. ಅವನು ಮರಕಗ್ರಾಹಪು
ರಾಜನ ಮಗ. ಸ್ವಭಾವದಿಂದ ಅವನು ಹೆಸರಿಗೆ ತಕ್ಕಂತೆ ದುಷ್ಟ
ಆಗಿದ್ದರೂ ವಸುಷೇಣನ ಹೃದಯವನ್ನು ಗೆದ್ದಿದ್ದನು. ಇಬ್ಬರೂ ಅ
ಯರಾದ ಗೆಳೆಯರಾಗಿದ್ದರು. ಅವರಿಬ್ಬರ ಸ್ನೇಹವು ಸತ್ಯ ಮ
ತಪೋಗುಣಗಳ ಮಿಲನದಂತಾಗಿತ್ತು. ಅನ್ಯೋನ್ಯ ಮೈತ್ರಿಯಿಂದ ಅವ
ವರ್ತಿಸುತ್ತಿದ್ದುದು ವಿಧಿಯ ಒಂದು ವಿಚಿತ್ರ ಲೀಲೆಯೇ ಆಗಿದ್ದಿ
ಒಡನುಂಡು, ಒಡನಾಡಿ, ಒಡನೋದಿ ಬೆಳೆದು ಬಂದಿದ್ದ ಅವರ ಸ್ನೇ
ಸುದೃಢಗೊಂಡಿದ್ದಿತು. ಇಬ್ಬರೂ ರಾಜರಾದ ನಂತರವೂ ಆಗಾಗ್ಗೆ ಒ
ಸೇರಿ ಬಾಲ್ಯದ ಸವಿನೆನವುಗಳನ್ನು ಸ್ಮರಿಸಿ ಸಂತಸಪಡುತ್ತಿದ್ದರು.

ಒಮ್ಮೆ ಚಂಡಶಾಸನನು ಮಿತ್ರನನ್ನು ನೋಡಲು ಬರುತ್ತಿದ್ದಾನೆ
ವರ್ತಮಾನವನ್ನು ವಸುಷೇಣನು ಕೇಳಿದನು. ಅವನ ಆನಂದಕ್ಕೆ ತ
ಮೊದಲಿಲ್ಲವಾಯಿತು. ಗೆಳೆಯನನ್ನು ಎದುರ್ಗೊಳ್ಳಲು ವೈಭವದ ಏರ್ಪಾ
ನಡೆಯಿತು. ನಗರವು ಶೃಂಗಾರವಾಯಿತು. ಎಲ್ಲೆಲ್ಲೂ ತಳಿರ್ತೋರಣ
ಹಾರಾಡಿದವು. ಮನೆಗಳ ಮುಂದುಗಡೆ ಸಾರಣೆ ರಂಗವಲ್ಲಿಗಳು ಕಂಗೊ
ಸಿದವು. ಸಮವಸ್ತ್ರಧಾರಿಗಳಾದ ಸೈನಿಕರು ಶಿಸ್ತಿನಿಂದಲೂ, ಕ
ಯಿಂದಲೂ ಸಾಲಾಗಿನಿಂತರು. ಚತುರಂಗ ಸೈನ್ಯವೂ ಸಿದ್ಧವಾಗಿದ್ದಿ
ಬಂದ ಗೆಳೆಯನನ್ನು ವಸುಷೇಣನು ಆನಂದದಿಂದ ಆಲಂಗಿಸಿದನು.
ಸ್ಪರ ಕುಶಲ ಪ್ರಶ್ನೆಗಳಾದನಂತರ ಇಬ್ಬರೂ ಪಟ್ಟದ ಆನೆಯನ್ನೇರಿ
ತರು. ಜನಸಮುದ್ರದ ಮಧ್ಯೆ, ಜಯಘೋಷಗಳ ನಡುವೆ ರಾಜ
ರೀರ್ವರೂ ಮೆರವಣಿಗೆಯಲ್ಲಿ ಬಂದು ಅರಮನೆಯನ್ನು ಸೇರಿದರು.

ಅರಮನೆಯಲ್ಲಿ ಚಂಡಶಾಸನನ ಸಲುವಾಗಿ ಅನೇಕ ಮನೋರಂ
ಕಾರ್ಯಕ್ರಮಗಳು ಜರುಗಿದುವು. ಕಾವ್ಯಗೋಷ್ಠಿ, ಗೀತಪಠನೆ, ನ

ೂಷಣೆ, ನಾಟ್ಯಪ್ರದರ್ಶನ, ನೃತ್ಯಮೇಳ ಮೊದಲಾದ ಸಾಂಸ್ಕೃತಿಕ ರೋದಾವಳಿಗಳು ನಡೆದುವು. ಮಿತ್ರನ ಮನಸ್ಸಿಗೆ ಮತ್ತೂ ಹರ್ಷವ ಂಟುಮಾಡಲು, ರಾಜನು ಕಂದುಕ ಕ್ರೀಡೆ, ಮಲ್ಲಯುದ್ಧಗಳು ಮೊದ ವ ಆಟಗಳನ್ನೂ, ಆಡಿಸಿದನು. ಮಿತ್ರನ ಉಪಚಾರಕ್ಕೆ ಮಾರುಹೋದ ಂಡಶಾಸನನು ಅವನು ಏರ್ಪಡಿಸಿದ ಎಲ್ಲಾ ಸಮಾರಂಭಗಳಲ್ಲೂ ಭಾಗ ಹಿಸಿ ಆನಂದವನ್ನು ಹೊಂದಿದನು. ಒಬ್ಬರನೊಬ್ಬರು ಅಗಲದೆ ಎಲ್ಲಾ ೀಳೆಗಳಲ್ಲೂ ಜೊತೆಯಾಗಿಯೇ ಇದ್ದು .ಹರ್ಷಶರಧಿಯಲ್ಲಿ ಮುಳುಗಿದ್ದರು.

ಸಹಪಂಙ್ತಿ ಭೋಜನಕ್ಕೂ ಕುಳಿತರು. ಅನೇಕ ದಾಸದಾಸಿಯ ದ್ದರೂ ಅಂದು ಸುನಂದೆಯೇ ಬಡಿಸಬೇಕೆಂಬುದು ವಸುಷೇಣನ ಅಪೇಕ್ಷೆ ಯಾಗಿದ್ದಿತು. ಸುನಂದೆ ಮೊದಮೊದಲು ವಿರೋಧಿಸಿದರೂ ಕೊನೆಗೆ ತಿಯ ಆಗ್ರಹದಿಂದ ತಾನು ಬಡಿಸಲು ಬಂದಿದ್ದಳು. ಸಹಪಂಙ್ತಿ ಭೋಜನ ಲ್ಲಿ ಕುಳಿತಿದ್ದ ಗೆಳೆಯರು ಅನೇಕ ವಿನೋದ ವಚನಗಳನ್ನು ಆಡಿ ಗಹ ಿಸಿ ನಗುತ್ತಾ ಊಟ ಮಾಡುತ್ತಿದ್ದರು. ಎಳೆಯ ಮಿಂಚಿನಂತೆ ಹೊಳೆದು ಯೌವನೋನ್ಮತ್ತೆಯಾದ ಸುನಂದೆಯು ಬಂದು ಬಡಿಸಿದಳು. ಅವಳ ಿಲುವು ಚಂಡಶಾಸನನ್ನು ಗರಬಡಿಸಿತು. ಅವಳ ಒಡಲ ಸೊಬಗು, ಣ್ಣಳ ಬೆಳಕು, ಮುಖದ ಮೋಹಕತೆ—ಇವುಗಳು ಅವನನ್ನು ದಂಗು ಬಡಿಸಿ ುವು. ಮದನ ಜ್ವರದಿಂದ ಮತ್ತನಾದನು. ಹೊರಗೆತೋರಗೊಡದೆ ೀಗೋ ಊಟ ಮಾಡಿ ಮುಗಿಸಿದನು. ತಾಂಬೂಲ ಚರ್ವಣಾನಂತರ ುಸುಹೊತ್ತು ವಿಶ್ರಮಿಸಲು ಅವನನ್ನು ಏಕಾಂಗಿಯಾಗಿ ಬಿಟ್ಟು ವಸು ೇಣನು ರಾಜಕಾರ್ಯದತ್ತ ತೆರಳಿದನು.

ವಿಶ್ರಮಿಸಲು ಮಲಗಿದ ಚಂಡಶಾಸನನಿಗೆ ನಿದ್ದೆ ಎಲ್ಲಿಂದ ಬರಬೇಕು ? ವನ ಮನಸ್ಸಿನಲ್ಲಿ ಸುನಂದೆಯ ಸೌಂದರ್ಯವೇ ತುಂಬಿಬಂದಿತು. ಕಣ್ಮು ಚ್ಚಿದರೆ ಅವಳ ರೂಪೇ ಬಂದು ನಿಂತಂತಾಗುತ್ತಿದ್ದಿತು. ಆ ಜಗನ್ಮೋಹಕರ ಮಣಿಯನ್ನು ಎಂದು ಪಡೆವೇನೆಂದು ಕಾತರದಿಂದ ತಹತಹಿಸಿದನು. ಡೆಯಲಾರದೆ ತನ್ನ ಮಂತ್ರಿ ಸುದರ್ಶನನಲ್ಲಿ ಈ ಸಂಗತಿ ಯನ್ನು ತಿಳಿಸಿದನು. ಸುದರ್ಶನನೇನೂ ಸಜ್ಜನ ನಾಗಿರಲಿಲ್ಲ. ದುಷ್ಟ ಸಲಹೆಗಳನ್ನು ನೀಡುವುದರಲ್ಲಿ ನಿಷ್ಣಾತನಾಗಿದ್ದನು.

ತನ್ನ ರಾಜನ ಅಭಿಮಾನವನ್ನು ಗಳಿಸಲು ಅವನ ಹುಚ್ಚನ್ನು ಮತ್ತ
ಕೆರಳಿಸಿದನು. ಅವಳೂ ಸಹ ತಮ್ಮ ವಿಚಾರವನ್ನೇ ಕುತೂಹಲದಿ
ಕೇಳಿದಳೆಂದು ಸುಳ್ಳು ಹೇಳಿದನು. ತಾವು ವಸುಷೇಣನೊಂದಿಗೆ ಮಾತ
ಡುತ್ತ ರತ್ನದ ಮಂಚದಮೇಲಿನ ಹಂಸತೂಲಿಕಾ ತಲ್ಪದಲ್ಲಿ ಪವಡಿಸಿದ್ದಾ
ಸುನಂದೆ ಗಂಡನನ್ನು ನೋಡುವ ನೆಪದಿಂದ ನಿಮ್ಮನ್ನೇ ನೋಡುತ್ತಿದ್ದ
ಹೀಗೆ ಮೊದಲಾಗಿ ಸುಳ್ಳುಗಳನ್ನು ಜೋಡಿಸಿ ಅವನ ವಿರಹದ ವಿಕಾರವ
ಉಲ್ಬಣಗೊಳಿಸಿದನು. ಮದುವೆಯಾದವಳಾದರೇನು? ಅವಳೊಂ
ಕೂಡಿಯೇ ತೀರಬೇಕು ಎಂದು ದುರಾತ್ಮನಾದ ಅವನು ನಿರ್ಧರಿಸಿ
ಬಿಟ್ಟನು. ಬಹುಕಾಲದ ಮಿತ್ರನಿಗೆ ದ್ರೋಹವೆಣಿಸಲು ಸ್ವಲ್ಪವಾದ
ಹಿಂಜರಿಯಲಿಲ್ಲ. ನಿಷ್ಕಪಟಿಯಾದ ವಸುಷೇಣನಿಗೆ ಅದರ ಸುಳಿ
ಹತ್ತಲಿಲ್ಲ.

ಮಿತ್ರನ ಮನಸ್ಸಂತೋಷಕ್ಕಾಗಿ ಒಮ್ಮೆ ವಸುಷೇಣನು ಬೇಟೆಯಾ
ವುದನ್ನು ಏರ್ಪಡಿಸಿದನು. ತನ್ನ ಮಡದಿಯನ್ನೇ ಬೇಟೆಯಾಡಲು
ಮಿತ್ರನು ಹವಣಿಸಿದ್ದಾನೆಂಬುದು ಆ ಮುಗ್ಧ ನೃಪತಿಗೆ ಹೇಗೆ ತಿಳಿಯಬೇ
ಇಬ್ಬರೂ ಕುದುರೆಗಳ ಮೇಲೆ ಕುಳಿತು ಅರಣ್ಯದಲ್ಲಿ ಸಂಚರಿಸು
ಮೃಗಯಾವಿನೋದದಲ್ಲಿ ತೊಡಗಿದ್ದರು. ಚಂಡಶಾಸನನು ಒಂದು ಬ
ಹರಿಣನಿಗೆ ಗುರಿಯಿಟ್ಟು, ತಾನೇ ಮನ್ಮಥನೆಂದೂ, ಹರಿಣವೇ ಸುನ
ಯೆಂದೂ ಭಾವಿಸಿ ಕೊಲ್ಲದೇ ಬಿಟ್ಟುಬಿಟ್ಟನು. ಅಲ್ಲೂ ಅವನು ಸುನಂದೆ
ಚಿಂತೆಯನ್ನು ಬಿಟ್ಟಿರಲಿಲ್ಲ. ಬೇಟೆಯಾಡುತ್ತಾ ಆಡುತ್ತಾ ವಸುಷೇಣ
ಮುಂದೆ ಹೋಗಿಬಿಟ್ಟನು. ಚಂಡಶಾಸನನು ಹಿಂದೆ ಉಳಿದನು. ಹಿಂದಿನಿ
ಭಕ್ಷ್ಯಭೋಜ್ಯಗಳನ್ನು ತೆಗೆದುಕೊಂಡು ಸಖಿಯರೊಡ
ಸುನಂದೆ ಬಂದಳು. ಜೊತೆಯಲ್ಲಿ ಮಿತಸಂಖ್ಯೆಯ ಸೇವಕರೂ ಇದ್ದ
ಅವರೆಲ್ಲರೂ ಹೆಂಗಸರಿಗೆ ಸಹಜವಾದ ಕಲರವಧ್ವನಿಮಾಡುತ್ತಾ, ಹ
ಶಿಶುಗಳು ಬೆದರಿ ಓಡುವುದನ್ನು ನೋಡಿ ಅಟ್ಟಹಾಸದಿಂದ ನಗು
ಬರುತ್ತಿದ್ದರು. ಹಿಂದುಳಿದಿದ್ದ ಚಂಡಶಾಸನನ ಕಣ್ಣಿಗೆ ಮಣಿಗಳ ಮ
ದಲ್ಲಿನ ರತ್ನದಂತೆ ಗೆಳತಿಯರ ನಡುವೆ ಇದ್ದ ಸುನಂದೆ ಗೋಚರಿಸಿದ
ತನ್ನ ಬೇಟೆ ಸಿಕ್ಕಿತೆಂದು ಅವನು ಹಿಗ್ಗಿಹೋದನು.

ಈ ಸಮಯವನ್ನು ಬಿಟ್ಟರೆ ಮತ್ತೆ ಇಂತಹ ಸುಸಮಯವು ಸಿಗಲಾರ ದೆಂದು ನಿರ್ಧರಿಸಿದ ಆ ಕಾಮುಕನು ತನ್ನ ರಥವನ್ನು ರಭಸದಿಂದ ಆ ಹೆಂಗಳೆಯರ ಗುಂಪಿನತ್ತ ನುಗ್ಗಿಸಿದನು. ಕೂಡಲೇ ಭಯದಿಂದ ಹೆಂಗಸರು ಚೆಲ್ಲಾಪಿಲ್ಲಿಯಾಗಿ ಚದುರಿಹೋದರು. ಕೆಲವರು ಎಡವಿಬಿದ್ದರು. ಮತ್ತೆ ಕೆಲವರು ಸಹಾಯಕ್ಕಾಗಿ ಕೂಗಿಕೊಂಡರು. ಸುನಂದೆಯೂ ಸಹ ಬಿದ್ದು ಮೂರ್ಛಿತೆಯಾದಳು. ಸ್ವಲ್ಪವೂ ತಡಮಾಡದೆ ಆ ಚಂಡನೀಚನು ಅವಳನ್ನು ಎತ್ತಿ ತನ್ನ ರಥದ ಮೇಲೆ ಇಟ್ಟು ಕುದುರೆಗಳನ್ನು ಓಡಿಸತೊಡಗಿದನು. ಕೆಲವೇ ಮಂದಿ ಇದ್ದ ಸೇವಕರು ಪ್ರತಿಭಟಿಸಿ ನಿಂತರು. ಆದರೆ ಅವರನ್ನು ಅವನೂ ಮತ್ತು ಸುದರ್ಶನನೂ ಸೇರಿ ಕೊಂದುಬಿಟ್ಟರು. ಮಿತ್ರದ್ರೋಹ ವನ್ನು ಮಾಡಿದ ಆ ಪರಮ ನೀಚನು ತನ್ನ ರಾಜ್ಯದತ್ತ ಓಡತೊಡಗಿದನು. ಉಳಿದ ಸಖಿಯರು ಈ ಸಂಗತಿಯನ್ನು ತಿಳಿಸಲು ವಸುಷೇಣನನ್ನು ಅರಸಿ ಹೊರಟರು.

ಚಂಡಶಾಸನನ ರಥ ಮಕರಗ್ರಾಹಪುರದತ್ತ ವೇಗವಾಗಿ ಧಾವಿ ಸುತ್ತಿತ್ತು. ರಥದಲ್ಲಿ ಮೂರ್ಛೆಬಿದ್ದಿದ್ದ ಸುನಂದೆಗೆ ಎಚ್ಚರವಾಯಿತು. ತಾನೆಲ್ಲಿರುವೆನೆಂಬ ಅರಿವುಂಟಾಗಿ ಗರುಡನೆರಗಿದ ಉರಗದಂತೆ ನಡುಗಿದಳು. ಕ್ರೋಧ ಮಿಶ್ರಿತವಾದ ನಿಸ್ಸಹಾಯಕವಾದ ಧ್ವನಿಯಲ್ಲಿ ಕೂಗಿದಳು

"ಹಿಂದಕ್ಕೆ ರಥವನ್ನು ತಿರುಗಿಸು ನೀಚ! ಪಾಳುಬಿದ್ದ ಮನೆಯಿಂದ ನಾಯಿಯು ಘೃತಬಾಂಡವನ್ನು ಎತ್ತಿ ಒಯ್ಯುವಂತೆ ಗಂಡನಿಂದ ಮಡದಿ ಯನ್ನು ಹೇಡಿತನದಿಂದ ಅಗಲಿಸಿ ಕದ್ದು ಒಯ್ಯುತ್ತಿರುವೆಯಾ?"

ಚಂಡಶಾಸನನ ಕಿವಿಗೆ ಸುನಂದೆಯ ಮಾತುಗಳು ಬೀಳಲೇ ಇಲ್ಲ. ತನ್ನ ರಾಜ್ಯದ ಗಡಿಯನ್ನು ಮುಟ್ಟಿದರೆ ಸಾಕೆಂದು ಅವನು ಧಾವಿಸುತ್ತಿದ್ದನು. ಸುನಂದೆಯೂ ಸಹಾಯಕ್ಕಾಗಿ ಕೂಗತೊಡಗಿದಳು. ಸುರಮ್ಯರಾಜ್ಯದ ಗಡಿಯಲ್ಲಿ ಸಿಂಹಚೂಡನೆಂಬ ಸಾಮಂತರಾಜನಿದ್ದನು. ಅವನು ವಸುಷೇಣ ನಿಗೆ ಆಪ್ತಮಿತ್ರನಾಗಿದ್ದನು. ಅಲ್ಲದೆ ಗಡಿಯ ರಕ್ಷಣೆಯ ಹೊಣೆ ಅವನಿಗೆ ಸೇರಿದ್ದಿತು. ಸುನಂದೆಯು ಸಹಾಯಕ್ಕಾಗಿ ಕೂಗುತ್ತಿದ್ದುದು ಅವನ ಕಿವಿಗೆ ಬಿದ್ದಿತು. ಅವನೂ ಮಹಾ ಶೌರ್ಯವಂತನೇ ಆಗಿದ್ದನು. ಖಡ್ಗವನ್ನು ಹಿಡಿದು ಆರ್ಭಟಿಸುತ್ತಾ ಚಂಡಶಾಸನನಿಗೆ ಎದುರಾದನು. ಅವನನ್ನು ಕುರಿತು

"ಸಲಗನು ಹಿಡಿದಿದ್ದ ಕಜ್ಜಿನ ಜಲ್ಲೆಯನ್ನು ಕಸಿದುಕೊಳ್ಳ
ಪ್ರಯತ್ನಿಸುವಂತೆ ನಮ್ಮ ಪ್ರಭುವಿನ ಮಡದಿಯನ್ನು ಪರಮನೀಚನಾದ ನೀನು
ಅಪಹರಿಸಿ ಕಳ್ಳನಂತೆ ಓಡುತ್ತಿರುವೆಯಾ?" ಎಂದು ಮೂದಲಿಸಿದನು
ಭಯಂಕರ ಕಾಳಗವು ನಡೆಯಿತು. ಭೀಷಣ ರೋಷಗೊಂಡ ಚಂಡಶಾಸನನು
ಭಯಂಕರವಾಗಿ ಹೋರಾಡಿ ಸಿಂಹಚೂಡನ ತಲೆಯನ್ನು ಕಡಿದುಹಾಕಿ
ವಾಯುವೇಗದಲ್ಲಿ ರಥವನ್ನು ಓಡಿಸಿಕೊಂಡು ತನ್ನ ರಾಜ್ಯವನ್ನು ಸೇರಿದನು.
ಅಲ್ಲಿ ಒಂದು ಬಲವಾದ ದುರ್ಗದಲ್ಲಿ ಸುನಂದೆಯನ್ನು ಸೆರೆಯಲ್ಲಿಟ್ಟನು.

ಇತ್ತ ಸುನಂದೆಯ ಸಖಿಯರು ರೋಧಿಸುತ್ತಾ ವಸುಷೇಣನಿಗೆ ಚಂಡ
ಶಾಸನನ ಕೃತ್ಯವನ್ನು ತಿಳಿಸಿದರು. ಅದನ್ನು ಕೇಳಿ ಅವನು ದಿಗ್ಭ್ರಾಂತ
ನಾದನು. ತನ್ನ ಮಿತ್ರನ ವಿಚಾರದಲ್ಲಿ ಇಂತಹ ಅಪವಿತ್ರ ಕೃತ್ಯವನ್ನು
ಅವನು ನಿರೀಕ್ಷಿಸಿಯೇ ಇಲ್ಲವಾದುದರಿಂದ ಅವನಿಗೆ ಎಲ್ಲಿಲ್ಲದ ಸಿಟ್ಟು ಬಂದಿತು.
ಮತ್ತೆ ನಗರಕ್ಕೆ ಹೋಗುವ ಯೋಚನೆಯನ್ನೇ ಅವನು ಮಾಡಲಿಲ್ಲ. ಅಲ್ಲಿಗೇ
ಸೈನ್ಯವನ್ನು ಕರೆಯಿಸಿಕೊಂಡು ಚಂಡಶಾಸನನ ರಾಜ್ಯದತ್ತ ದಂಡೆತ್ತಿ
ಹೊರಟುಬಿಟ್ಟನು. ಗಡಿಯನ್ನು ಸಮೀಪಿಸುತ್ತಿದ್ದಂತೆಯೇ ತನ್ನ ಸಾಮಂತ
ಸಿಂಹಚೂಡನೂ ಮಡಿದ ಸಂಗತಿಯನ್ನು ಕೇಳಿ ಮತ್ತಷ್ಟು ಕ್ರುದ್ಧನಾದನು.
ತತ್‌ಕ್ಷಣವೇ ಒಂದು ಕ್ಷಣವೂ ತಡಮಾಡದೆ ಸೈನ್ಯವನ್ನು ಮುಂದುವರಿಯು
ವಂತೆ ಆಜ್ಞಾಪಿಸಿದನು. ಭೂಮಿಯ ಧೂಳನ್ನು ಚತುರ್ದಿಶೆಗಳಲ್ಲೂ
ಮುಚ್ಚುತ್ತಾ ಚತುರಂಗ ಸೈನ್ಯವು ಆರ್ಭಟಿಸುತ್ತಾ ಮುಂದುವರಿಯಿತು.

ಇತ್ತ ಚಂಡಶಾಸನನು ಸುನಂದೆಯನ್ನು ಒಲಿಸಲು ಹಲವಾರು ಪ್ರಯತ್ನ
ಗಳನ್ನು ಮಾಡಿದನು. ತನ್ನ ಸಂಪತ್ತನ್ನು ಅವಳ ಮುಂದೆ ಪ್ರದರ್ಶಿಸಿದನು.
ತನ್ನ ಶೌರ್ಯವನ್ನು ಹೊಗಳಿಕೊಂಡನು. ತನ್ನ ರೂಪವನ್ನು ಬಣ್ಣಿಸಿದನು.
ಅದಾವುದಕ್ಕೂ ಅವಳು ಜಗ್ಗಲಿಲ್ಲ, ಕೊನೆಗೆ ವಿನಯದಿಂದ ಬೇಡಿಕೊಂಡನು.
ಉದ್ಧಟತನದಿಂದ ತಂದುದು ತನ್ನ ತಪ್ಪೆಂದು ತಿಳಿದನು. ಅವಳಲ್ಲಿರುವ
ಪ್ರೀತಿಯಿಂದಲೇ ತಾನು ಹಾಗೆ ಮಾಡಿದೆನೆಂದು ದೈನ್ಯದಿಂದ ಹೇಳಿದನು.
ಆದರೆ ಸುನಂದೆಯು ಮಹಾಪತಿವ್ರತೆಯಾಗಿದ್ದಳು. ಪ್ರಾಣವನ್ನಾದರೂ
ಬಿಡಲು ಸಿದ್ಧಳಾಗಿದ್ದಳು. ಆದರೆ ಪಾತಿವ್ರತ್ಯ ಧರ್ಮದ ಭಂಗಮಾಡಿ

ೊಳ್ಳಲು ಅವಳು ಸಿದ್ಧಳಿರಲಿಲ್ಲ. ಆದುದರಿಂದ ಅವನ ಯಾವ ಯುಕ್ತಿಗೂ
ಒಳಪಡಲಿಲ್ಲ. ಇನ್ನೂ ಕ್ರುದ್ಧಳಾದಳು. ಕೆಣಕಿದ ಸರ್ಪಿಣಿಯಂತಾದಳು.

"ನಿನ್ನ ಸಂಪತ್ತು ನನಗೆ ತೃಣಕ್ಕೆ ಸಮಾನ. ನಿನ್ನ ಐಶ್ವರ್ಯಕ್ಕಿಂತ ನನಗೆ ಪತಿವ್ರತಾಧರ್ಮವು ಹೆಚ್ಚು. ನಿನ್ನ ಶೌರ್ಯವು ನಾಯಿಯಶೌರ್ಯಕ್ಕೆ ಸಮಾನವಾದುದು. ನಿನ್ನ ತಲೆ ಚೆಂಡಾಡುವ ವೇಳೆ ದೂರವೇನಿಲ್ಲ. ಪರ ಸ್ತ್ರೀಯರ ವಿಚಾರದಲ್ಲಿ ಬಾಯಿಗೆ ಬಂದಂತೆ ಹರಟಿ, ಘೋರನರಕಕ್ಕೆ ಹೋಗಲು ಏಕೆ ಬಯಸುವೆ." ಎಂದು ಗದರಿಸಿ ನುಡಿದಳು.

ಅವಳ ನಿಷ್ಠುರವಾದ ಮಾತುಗಳಿಂದ ಕಾಮುಕನಾದ ಚಂಡಶಾಸನನು ಅಪ್ರತಿಭನಾದನು, ನಿರುತ್ತರನಾದನು. ಏನಾದರೂ ಯುಕ್ತಿಯಿಂದಲೇ ಅವಳನ್ನು ವಶಪಡಿಸಿಕೊಳ್ಳಬೇಕೆಂದು ಯೋಚಿಸಿದನು. ಮರುಮಾತಾಡದೇ ಅರಮನೆಯನ್ನು ಸೇರಿದನು. ಇಡೀ ರಾತ್ರಿ ಆವನಿಗೆ ನಿದ್ರೆಯೇ ಹತ್ತಲಿಲ್ಲ. ವಿರಹತಾಪದಿಂದ ಬೆಂದುಹೋದನು. ಅವಳು ತನಗೆ ಒಲಿಯದಿದ್ದರೂ ಸರಿ, ತಾನು ಅವಳನ್ನು ಬಿಡುವುದಿಲ್ಲವೆಂದು ನಿರ್ಧರಿಸಿದನು. ಅವಳು ತನ್ನ ಮನೆಯಲ್ಲಿರುವುದೇ ಸೌಭಾಗ್ಯವೆಂದು ಎಣಿಸಿದನು. ಇದೇ ಮೊದಲಾಗಿ ರಾತ್ರಿಯೆಲ್ಲಾ ಆಲೋಚಿಸಿದ ಅವನು ಮರುದಿನ ಮತ್ತೊಂದು ಯುಕ್ತಿ ಯನ್ನು ಹುಡುಕಿದನು.

ಬೆಳಗಾದ ಕೂಡಲೇ ಚಂಡಶಾಸನನು ಚಿಂತಾಭಾರದಿಂದಲೇ ಹಾಸಿಗೆ ಬಿಟ್ಟೆದ್ದನು. ತನ್ನ ಇಂದ್ರಜಾಲ ವಿದ್ಯೆಯಿಂದ ವಸುಷೇಣನನ್ನು ಹೋಲುವ ಒಂದುಹೆಣವನ್ನು ಮಾಡಿದನು.ನಾಲ್ಕುಜನಗಳಿಂದ ಅದನ್ನು ಹೊರಿಸಿಕೊಂಡು ಬಂದನು. ಅರೆಗಣ್ಮುಚ್ಚಿ ಪತಿಧ್ಯಾನದಲ್ಲೀ ಮಗ್ನಳಾಗಿದ್ದ ಸುನಂದೆಯ ಮುಂಪೆ ಆ ಹೆಣವನ್ನು ಬಿಸುಡಿಸಿದನು. ಅವಳನ್ನು ಕುರಿತು ಹೀಗೆಂದನು.

"ಎಲಾ ಕೋಮಲಾಂಗಿ! ಸ್ವಲ್ಪ ಕಣ್ತೆರೆದುನೋಡು. ಇದುವರೆಗೆ ನೀನು ಯಾರಿಗಾಗಿ ಹಂಬಲಿಸುತ್ತಿದ್ದೆಯೋ ಅವನು ಹೆಣವಾಗಿ ನಿನ್ನಮುಂದೆ ಬಂದು ಬಿದ್ದಿದ್ದಾನೆ. ನಿನ್ನೆಯ ಯುದ್ಧದಲ್ಲಿ ನನ್ನ ಖಡ್ಗಕ್ಕೆ ಆಹುತಿಯಾದ ಅವನ ರುಂಡಮುಂಡಗಳು ಬೇರೆಯಾಗಿವೆ. ಇನ್ನೇಕೆ ಅವನ ಚಿಂತೆ? ಇನ್ನಾದರೂ ನನ್ನನ್ನು ಕೂಡಿ ಸಂತೋಷದಿಂದ ಬಾಳು."

ಚಂಡಶಾಸನನ ಮಾತು ಶೂಲದಂತೆ ಸುನಂದೆಯ ಕಿವಿಯನ್ನು ಇರಿಯಿತು. ಅದು ನಿಜವಾಗದಿರಲೆಂದು ಹಾರೈಸಿ ಕಣ್ಣುಬಿಟ್ಟಳು. ನಿಜ ವಾಗಿಯೂ ತನ್ನ ಪತಿಯ ಶರೀರವೇ ಬಿದ್ದಿದ್ದಿತು. ದುಃಖದ ಆವೇಗವನ್ನು ತಡೆಯುಲಾರದವಳಾದಳು. ಬಿರುಗಾಳಿಗೆ ಸಿಕ್ಕಿದ ಬಾಳೇ ಗಿಡ ಬುಡಸಹಿತ ಉರುಳಿ ನೆಲಕ್ಕೆ ಬೀಳುವಂತೆ ಆ ಮಾಯಾಶಿರದ ಮೇಲೆ ಬಿದ್ದು ಅಸುವನ್ನ ನೀಗಿದಳು. ಹೂವಿನಂತೆ ಸುಂದರವಾಗಿದ್ದ ಅವಳ ಕಣ್ಗಳು ಬಾಡಿಹೋ ದುವು. ಮುಖದ ಕಾಂತಿ ಕುಂದಿಹೋಯಿತು. ಉಸಿರು ಸದಾಕಾಲಕ್ಕೂ ನಿಂತುಹೋಯಿತು.

ಸುನಂದೆಯ ಆತ್ಮಪಕ್ಷಿ ಹಾರಿಹೋಯಿತೆಂದು ತಿಳಿದ ಚಂಡ ಶಾಸನನ ಕಪಟಹೃದಯವೂ ಸಹ ಬಿರಿದುಹೋಯಿತು. ಮನಸು ಎಚ್ಚರ ತಪ್ಪಿದ್ದ ಅವನು ಚೇತರಿಸಿಕೊಂಡು ಸುನಂದೆ ಹೋದರೂ ಅವಳ ಶವವನ್ನೂ ಬಿಡಲಾರೆನೆಂದು ಚೀರಿದನು. ತಾನೂ ಆಕೆಯ ಕಳೇಬರದೊಂದಿಗೆ ಅಗ್ನಿ ಪ್ರವೇಶ ಮಾಡಲು ಸಿದ್ಧನಾದನು. ಯಾರು ಎಷ್ಟು ತಡೆದರೂ ಫಲಕಾರಿ ಯಾಗಲಿಲ್ಲ. ಅಂತಃಪುರದರಾಣಿಯರ ರೋಧನವಂತೂ ಗಗನವನ್ನು ಮುಟ್ಟಿತು. ಅವರನ್ನು ಸಂತಯಿಸುವವರೇ ಇಲ್ಲದಂತಾಯಿತು. ಅನಾಥ ಯಾಗಲಿದ್ದ ಅವರು ಪತಿಯ ಪಾದಗಳ ಮೇಲೆ ಬಿದ್ದು ತಮ್ಮನ್ನು ಅಭಾಗಿನಿ ಯರನ್ನಾಗಿ ಮಾಡಬೇಡವೆಂದು ಇನ್ನಿಲ್ಲದಂತೆ ಬೇಡಿಕೊಂಡರು. ಸುನಂದೆ ಯಲ್ಲಿ ವ್ಯಾಮೋಹಗೊಂಡಿದ್ದ ಆ ಚಂಡಶಾಸನನಿಗೆ ಅದಾವುದೂ ಪರಿಣಾಮ ವನ್ನು ಬೀರಲಿಲ್ಲ.

ಚಿತಾಗ್ನಿ ಸಿದ್ಧವಾಯಿತು. ಆ ಛಲವಾದಿಯು ಸುನಂದೆಯ ಶವವನ್ನು ಒಡಗೊಂಡೇ ಚಿತೆಯನ್ನೇರಿದನು. ಚಿತೆಯನಾಲ್ದೆಸೆಗಳಲ್ಲೂ ಅಗ್ನಿಜ್ವಾಲೆಯು ಧೂಮಸಹಿತವಾಗಿ ಏಳಲಾರಂಭಿಸಿತು. ಅಂತಃಪುರದ ಇತರ ರಾಣಿಯರೂ ಗೋಳಿಡುತ್ತಾ ಒಬ್ಬೊಬ್ಬರಾಗಿ ಪತಿಯೊಂದಿಗೆ ಸಹಗಮನ ಮಾಡ ತೊಡಗಿದರು.

ಇತ್ತ ವಸುಷೇಣನು ತನ್ನ ದೊಡ್ಡ ಸೈನ್ಯದೊಂದಿಗೆ ಮಕರಗ್ರಾಹಪುರದ ಹೊರವಳಯುವಲ್ಲಿ ಬಂದು ಬೀಡುಬಿಟ್ಟನು. ಮುಂದೆ ನಗರವನ್ನು ಹೇಗೆ ಮುತ್ತಿಗೆ ಹಾಕಬೇಕೆಂದು ಮುಖ್ಯಾಧಿಕಾರಿಗಳಿಗೆ ಸೂಚನೆ ಕೊಡುತ್ತಿದ್ದನು

ಷ್ಟರಲ್ಲಿ ಗುಪ್ತಚಾರನೊಬ್ಬನು ಓಡಿಬಂದನು. ನಗರದ ದುರ್ಗದ ಒಳಗೆ ಟ್ಟವಾದ ಬೆಂಕಿಯ ಉರಿಯು ಏಳುತ್ತಿದೆಯೆಂದೂ, ಬಹುಜನ ಸ್ತ್ರೀಯರು ೋಧಿಸುವ ಧ್ವನಿಯು ಕೇಳಿಬರುತ್ತಿದೆಯೆಂದೂ ತಿಳಿಸಿದನು. ವಿಸ್ಮಿತನಾದ ಸುಷೇಣನು ವಿವರಗಳನ್ನು ತಿಳಿದುಕೊಂಡುಬರಲು ದೂತರನ್ನು ಅಟ್ಟಿದನು.

ವಸುಷೇಣನ ಎಡಗಣ್ಣು ಅದುರಿತು, ಹೃದಯವು ಕಾತರ ಂದ ತನ್ನ ಬಡಿತವನ್ನು ಇಮ್ಮಡಿಗೊಳಿಸಿತು. ತನ್ನ ನಲ್ಲೆ ಸುನಂದೆಗೆ ನೀಚನು ಏನೋ ಕೆಡಕನ್ನು ಮಾಡಿರುವನೇನೋ ಎಂದು ಅವನಮನಸ್ಸು ಳವಳಗೊಂಡಿತು. ಅಷ್ಟರಲ್ಲಿ ಹೋಗಿದ್ದ ದೂತರು ಹಿಂದಕ್ಕೆ ಬಂದು, ಂಡಶಾಸನನ ಮಾಯಾತಂತ್ರವನ್ನು ನಿಜವೆಂದು ನಂಬಿ ಸುನಂದೆಯು ಸುವನ್ನು ನೀಗಿದ ಸಂಗತಿಯನ್ನೂ, ಅವನೂ ಸಹ ಅವಳ ಶವದ ಸಂಗ ಲೇ ಅಗ್ನಿಪ್ರವೇಶ ಮಾಡಿದ ಸಂಗತಿಯನ್ನೂ, ಅದಕ್ಕಾಗಿ ಅಂತಃಪುರದ ನಿತೆಯರು ರೋಧಿಸುತ್ತಾ ಅವರೂ ಬೆಂಕಿಗೆ ಬೀಳುತ್ತಿರುವರೆಂಬುದನೂ ಳಿಸಿದರು.

ಆ ದಾರುಣ ಸಂಗತಿಯನ್ನರಿತು ವಸುಷೇಣ ಕ್ಷಣಕಾಲ ಸ್ತಂಭಿತ ಾದನು. ಸುನಂದೆಗೆ ಒದಗಿದ ದುರಂತವನ್ನು ನಾನು ತಪ್ಪಿಸಲಾರದುದ ಕ್ಕಾಗಿ ಬಹುವಾಗಿ ದುಃಖಿಸಿದನು. ಸಂಸಾರದ ವಿಚಿತ್ರ ಸ್ಥಿತಿಯನ್ನು ಮನ ಂಡ ಅವನಿಗೆ ನಗರದಮೇಲೆ ಹಲ್ಲೆಮಾಡುವುದಕ್ಕೆ ಮನವೊಪ್ಪಲಿಲ್ಲ. ರಾಗ್ಯವು ಅಂಕುರಿಸಿತು. ಅಲ್ಲಿಂದ ನೆಟ್ಟಗೆ ದಿಗಂಬರಾಚಾರ್ಯರು ುಪದೇಶಿಸುತ್ತಿದ್ದ ಧಾರ್ಮಿಕಸಭೆಯತ್ತ ನಡೆದನು. ಅಲ್ಲಿ ಎಲ್ಲವನ್ನೂ ್ಯಾಗಮಾಡಿದನು. ಸುನಂದೆಯಮೇಲಿನ ವ್ಯಾಮೋಹವನ್ನೂ ಚಂಡಶಾಸನನ ೇಲಿನ ದ್ವೇಷವನ್ನೂ ದೂರಮಾಡಿದನು. ನಿರ್ಮಲಚಿತ್ತದಿಂದ ದೀಕ್ಷೆಯನ್ನು ಗೊಂಡು, ಇಂದ್ರಿಯುಗಳನ್ನು ಜಯಿಸಿ ತಪಸ್ಸನ್ನು ಮಾಡಿ ದೇಹಾಂತವಾದ ಂತರ ಸದ್ಗತಿಯನ್ನು ಪಡೆದನು.

ಹೆಚ್ಚು ಲಾಭಪಡೆಯುವುದು ವ್ಯಾಪಾರವಲ್ಲ; ದುರಾಸೆ.

೮

ಆಡಿದಂತೆ ಮಾಡು



ಭರತಕ್ಷೇತ್ರದಲ್ಲಿ 'ಕಾಂಪಿಲವೆಂಬ' ಪಟ್ಟಣವಿತ್ತು. ಅದು ಸ
ಸಂಪತ್ಸಮೃದ್ಧತೆಯಿಂದ ಸೊಗಸುತ್ತಿತ್ತು. ಅಲ್ಲಿನ ಜನರಿಗೆ ಯಾ

ತೊಂದರೆಯೂ ಇರಲಿಲ್ಲ. ಯಜನಯಾಜನಾಧ್ಯಯನಾದಿ ಷಟ್ಕರ್ಮಗಳನ್ನು ಯಥೋಚಿತವಾಗಿ ಪಾಲಿಸುತ್ತ ಗೃಹಸ್ಥಧರ್ಮವನ್ನು ಆಚರಿಸುತ್ತಿದ್ದರು.

'ಭೀಮ' ಎಂಬ ಹೆಸರಿನ ದೊರೆ ಆ ಪಟ್ಟಣಕ್ಕೆ ಒಡೆಯನಾಗಿದ್ದನು. ಅವನು ಮಾಂಸಲೋಲುಪನಾಗಿದ್ದ. ಆದರೆ ತಾನು ಮಾಂಸಾಹಾರ ಮಾಡುವುದು ಪ್ರಜೆಗಳಿಗೆ ತಿಳಿದರೆ ತನ್ನ ಗೌರವ ನಾಶವಾಗುವುದೆಂದು ಹೆದರಿ ರಹಸ್ಯದಲ್ಲಿ ಅದನ್ನು ಭಕ್ಷಿಸುತ್ತಿದ್ದನು ಈ ವಿಚಾರದಲ್ಲಿ ಒಬ್ಬ ಅಡಿಗೆಯವನು ರಾಜನಿಗೆ ಅಂತರಂಗದಲ್ಲಿ ಸಹಾಯಕನಾಗಿದ್ದನು.

ಎಂದಿನಂತೆ ನಂದೀಶ್ವರ ವ್ರತವನ್ನು ಆಚರಿಸುವ ದಿನಗಳು ಬಂದುವು. ಪಟ್ಟಣದಲ್ಲಿ ಎಲ್ಲಿ ನೋಡಿದರೂ ವ್ರತವನ್ನು ಆಚರಿಸುವ ಶ್ರಾವಕರ ಆಧ್ಯಾತ್ಮಿಕ ಉತ್ಸಾಹ ಉಕ್ಕುತ್ತಿತ್ತು. ಬಸದಿಗಳೆಲ್ಲ ತಳಿರು ತೋರಣಗಳಿಂದಲಂಕೃತವಾದುವು. ಮನೆಗಳ ಮುಂಗಟ್ಟುಗಳು ಸಾರಣೆ, ರಂಗವಲ್ಲಿಗಳಿಂದ ಶೋಭಿಸಿದುವು. ವೃದ್ಧರು, ಬಾಲಕರು ಎಲ್ಲರೂ ಸ್ನಾನಾದಿ ಶುದ್ಧಿಯಿಂದ, ಪವಿತ್ರ ಮಂತ್ರಗಳನ್ನುಚ್ಚರಿಸುತ್ತಾ ಜಿನದೇವನ ದರ್ಶನಕ್ಕಾಗಿ ತೆರಳುತ್ತಿದ್ದರು.

ಧರ್ಮವನ್ನು ಅನುಸರಿಸಿ, ಮಹಾರಾಜನು " ನಂದೀಶ್ವರವ್ರತವು ಸಮಾಪ್ತಿಯಾಗುವವರೆಗೆ ರಾಜ್ಯದಲ್ಲಿ ಯಾರೂ ಯಾವ ಪ್ರಾಣಿಯ ಹಿಂಸೆಯನ್ನೂ ಮಾಡಬಾರದು. ಮಾಂಸವನ್ನು ತಿನ್ನಬಾರದು. ರಾಜಾಜ್ಞೆಗೆ ವಿರೋಧವಾಗಿ ನಡೆದರೆ ಕಠಿನಶಿಕ್ಷೆಗೆ ಗುರಿಮಾಡಲಾಗುವುದು " ಎಂದು ಡಂಗುರ ಹೊಯ್ಸಿದನು.

ಪ್ರಜೆಗಳೇನೋ ರಾಜಾಜ್ಞೆಯನ್ನು ಶಿರಸಾವಹಿಸಿ ನಡೆಸಿದರು. ಆದರೆ ರಾಜನಿಗೇ ಕಷ್ಟಕ್ಕೆ ಬಂದಿತು. ಅವನಿಗೆ ಮಾಂಸದ ಅಡಿಗೆಯಾಗದಿದ್ದರೆ ಮನಸ್ಸಿಗೆ ತೃಪ್ತಿಯೇ ಆಗುತ್ತಿರಲಿಲ್ಲ. ಆದರೆ ಬಹಿರಂಗವಾಗಿ ತಿನ್ನುವುದಂತೂ ಅಸಿವಾರ್ಯವಾಗಿತ್ತು. ಆದುದರಿಂದ ಅಡಿಗೆಯವನನ್ನು ಕರೆದು ರಹಸ್ಯವಾಗಿ ಮಾಂಸದ ಅಡಿಗೆ ಮಾಡುವಂತೆ ತಿಳಿಸಿದನು.

ಅಡಿಗೆಯವನು ಆದಿನವೆಲ್ಲಾ ಹುಡುಕಿದನು. ಪ್ರಾಣಹಿಂಸೆಯನ್ನು ಮಾಡಬಾರದೆಂದು ರಾಜಾಜ್ಞೆಯಿದ್ದುದರಿಂದ ಯಾವ ಪ್ರಾಣಿಯನ್ನೂ ಕೊಲ್ಲಲು ಸಾಧ್ಯವಾಗಲಿಲ್ಲ. ಇನ್ನು ಮಾಂಸವು ಸಿಕ್ಕುವುದು ಹೇಗೆ?

ಮಾಂಸದ ಅಡಿಗೆಯನ್ನು ಮಾಡದಿದ್ದರೆ ರಾಜನಿಂದ ಮೃತ್ಯುಪ್ರಾಪ್ತಿಯಂತೂ ಸಿದ್ಧ. ಹೀಗಾಗಿ ಅಡಿಗೆಯವನು ಉಭಯಸಂಕಟದಲ್ಲಿ ಬಿದ್ದ. ಏನು ಮಾಡುವುದೆಂದು ಆಲೋಚಿಸುತ್ತಾ ನಗರದ ಸ್ಮಶಾನದಬಳಿ ಬಂದು ಅಲ್ಲಿ ಅದೇತಾನೆ ಸತ್ತ ಬಾಲಕನ ಶವವನ್ನು ದಹನಕ್ಕಾಗಿ ತಂದಿಟ್ಟಿದ್ದರು. ಯುಕ್ತಿಯನ್ನು ಮಾಡಿ ಆ ಶವವನ್ನು ತನ್ನ ವಶಪಡಿಸಿಕೊಂಡು, ರಹಸ್ಯಪಥ ದಿಂದ ಅದನ್ನು ಅರಮನೆಗೆ ಒಯ್ದನು. ಆ ದಿನ ಆ ಬಾಲಕನ ಮಾಂಸ ವನ್ನೇ ಬೇಯಿಸಿ ರಾಜನಿಗೆ ಬಡಿಸಿದನು.

ಆದಿನ ಭೀಮರಾಜನಿಗೆ ಅಡಿಗೆ ರುಚಿಯಾಗಿ ಕಂಡುಬಂದಿತು. ಆನಂದದಿಂದ ಕೇಳಿದನು.

" ಇದು ಯಾವಮಾಂಸ? "

"ಈ ದಿನ ನಂದೀಶ್ವರ ವ್ರತವಾಗಿರುವುದರಿಂದ ತಮ್ಮ ಆಣತಿಯಂತೆ ಯಾವ ಬಗೆಯ ಮಾಂಸವೂ ಸಿಗಲಿಲ್ಲ. ಆದುದರಿಂದ ನರಮಾಂಸದಿಂದಲೇ ಅಡಿಗೆಮಾಡಿರುವೆ." ಎಂದು ಅಡಿಗೆಯವನು ಹೆದರುತ್ತಾ ಹೇಳಿದನು

" ಭಲೇ ! ನೀನು ನಿಜಕ್ಕೂ ಸರಿಯಾದ ಸೇವಕ. ಮಾಂಸ ತಿನ್ನ ತಕ್ಕವರಿಗೆ ಯಾವಮಾಂಸವಾದರೇನು? ಎಲ್ಲಾ ಮಾಂಸಕ್ಕಿಂತಲೂ, ನರ ಮಾಂಸವೇ ರುಚಿಯಾಗಿದೆ. ಪ್ರತಿದಿನ ಇದರಿಂದಲೇ ಅಡಿಗೆಮಾಡು"ಎಂದು ಹೇಳಿ ಅಡಿಗೆಯವನಿಗೆ ಹೇರಳವಾದ ಬಹುಮಾನವಿತ್ತನು.

ಬಹುಮಾನದ ಆಶೆಯಿಂದ ಅಡಿಗೆಯವನು ಮಾಂಸಕ್ಕಾಗಿ ಬಾಲಕ ರನ್ನು ಆಕರ್ಷಿಸಲು ದಿನಕ್ಕೊಂದು ಉಪಾಯವನ್ನು ಮಾಡಹತ್ತಿದನು. ಅರಮನೆಯಿಂದ ಬಾಲಕರಿಗೆ ಪ್ರತಿದಿನ ಸಿಹಿತಿಂಡಿಯನ್ನು ಹಂಚಲುತೊಡಗಿ ದನು. " ಹೆಂಗಸಿಗೆ ಹಣ ತೋರಿಸಬೇಡ, ಮಕ್ಕಳಿಗೆ ಸಿಹಿ ತೋರಿಸ ಬೇಡ" ಎಂಬ ಗಾದೆಯಂತೆ ಮಕ್ಕಳು ಸಹಜವಾಗಿಯೇ ಸಿಹಿತಿಂಡಿಗಳಿಗೆ ಆಕ ರ್ಷಿತರಾಗುತ್ತಾರಷ್ಟೆ! ಹಾಗೆ ಬಂದ ಮಕ್ಕಳಲ್ಲಿ ಎಲ್ಲರಿಗಿಂತ ಕೊನೆಯಲ್ಲಿ ಉಳಿದ ಬಾಲಕನನ್ನು ಅಪಹರಿಸಿ, ಕೊಂದು, ಅವನ ಮಾಂಸವನ್ನು ಬೇಯಿಸಿ ರಾಜನಿಗೆ ಉಣಬಡಿಸುತ್ತಿದ್ದನು.

ಆದರೆ ಪಾಪಕೆಲಸವನ್ನು ಎಷ್ಟುದಿನತಾನೇ ಬಚ್ಚಿಡಲು ಸಾಧ್ಯ? ದಿನಕ್ಕೆ ಒಬ್ಬ ಬಾಲಕ ಕಣ್ಮರೆಯಾಗುತ್ತಿರುವ ಸಂಗತಿ ನಗರದ ಜನರ ಕಳವಳಕ್ಕೆ ಕಾರಣವಾಯಿತು. ಅವರು ನಗರದ ಕೊತ್ವಾಲನಿಗೆ ದೂರು ಕೊಟ್ಟರು. ತಾವು ಸಹ ಅವನ ಸಂಗಡ ಸಹಾಯಕರಾಗಿ ಪತ್ತೆ ಹಚ್ಚಲು

ನಿಂತರು. ಅಡಿಗೆಯವನ ಅಸಾಧಾರಣ ಯುಕ್ತಿಯಿಂದ ಕೆಲವುದಿನಗಳ ವರೆಗೆ, ಪತ್ತೆಹಚ್ಚುವುದು ಯಾರಿಗೂ ಸಾಧ್ಯವಾಗಲಿಲ್ಲ.

ಕೊನೆಗೊಮ್ಮೆ ಅಡಿಗೆಯವನೇ ಬಾಲಕರನ್ನು ಅಪಹರಿಸುತ್ತಿರುವ ನೆಂಬುವನ್ನು ಕಂಡುಹಿಡಿದುಬಿಟ್ಟರು. ಅವನನ್ನು ಹಿಡಿದು ಚೆನ್ನಾಗಿ ಪ್ರಹರಿಸಿದಾಗ, ಅವನು ಏಟುಗಳನ್ನು ಸಹಿಸಲಾರದೆ ತಾನು ರಾಜನಿಗೋಸ್ಕರ ಮಾಡುತ್ತಿದ್ದ ಸಂಗತಿಯನ್ನು ತಿಳಿಸಿದನು.

ಮೊದಮೊದಲು ಪ್ರಜೆಗಳಿಗೆ ನಂಬಿಕೆ ಬರದಿದ್ದರೂ, ಕೂಲಂಕಷವಾಗಿ ವಿಚಾರಣೆಮಾಡಿದಮೇಲೆ ರಾಜನು ನರಮಾಂಸ ಭಕ್ಷಕನೆಂಬುದು ಸಿದ್ಧವಾಯಿತು. ಪ್ರಜೆಗಳಿಗೆ ರಾಜನ ವಿಚಾರದಲ್ಲಿ ಅಸಹ್ಯವಾಯಿತು. ರಾಜ್ಯಕ್ಕೆ ಅಧಿಪತಿಯಾಗಿರತಕ್ಕವನು ಪ್ರತ್ಯಕ್ಷದೇವತೆಯಿದ್ದಂತೆ. ಅವನು ಆಡಿದಂತೆ ಮಾಡಿ ತೋರಿಸತಕ್ಕ ಕರ್ತವ್ಯ ನಿಷ್ಠನಾಗಿರಬೇಕು. ರಕ್ಷಕನಾಗಿರಬೇಕಾದವನು ಭಕ್ಷಕನಾಗಿರುವ ಸಂಗತಿ ತಿಳಿದ ಅವರು, ರಾಜನನ್ನು ಸಿಂಹಾಸನದಿಂದ ಎಳೆದುಹಾಕಿ ರಾಜ್ಯದಿಂದ ಓಡಿಸಿದರು

ತಲೆಗೊಂದು ಕಲ್ಲನ್ನು ರಾಜನಮೇಲೆ ಹಾಕಿದರು. ತುಂಬಾ ಅವಮಾನಿತನಾದ ಮಹಾರಾಜ ತಲೆ ಮರೆಸಿಕೊಂಡು ಸಮೀಪದ ಅರಣ್ಯಕ್ಕೆ ಓಡಿಹೋದನು. ಅಲ್ಲಿ ಗಡ್ಡೆ, ಗೆಣಸುಗಳನ್ನು ತಿಂದು ಕಾಲಕಳೆದನು. ಕೊನೆಗೊಮ್ಮೆ ಕ್ರೂರ ಮೃಗಗಳು ಅವನನ್ನೂ ಹಿಂಸಿಸಿಕೊಂಡು ತಿಂದುವು. ತಾನು ಮಾಡಿದ ಪಾಪಕೃತ್ಯಕ್ಕೆ ಪ್ರಾಯಶ್ಚಿತ್ತವನ್ನು ಅನುಭವಿಸಿದನು.

ಆಡಿದಂತೆ ಮಾಡದವರ ಬಾಳು ಯಾವಾಗಲೂ ದುಃಖಮಯವಾಗುವುವೆಂಬುದೇ ಈ ಕಥೆಯ ಆಶಯ.

ಶಾರೀರಕ ಕಷ್ಟ ತೊಂದರೆ ಅಲ್ಲ. ಮಾನಸಿಕ ಅಶಾಂತಿಯೇ ತೊಂದರೆ.

೯

ಸೋದರಮಾವನ ಹೆಂಡತಿ



ಕುರುಭೂಮಿಯಲ್ಲಿ ಪಲಾಶಕೂಟವೆಂಬ ಗ್ರಾಮವು ಪ್ರಸಿದ್ಧವಾಗಿತ್ತು. ಕೆರೆ ಕುಂಟೆಗಳಿಂದ ಆವೃತವಾಗಿದ್ದ ಆ ಗ್ರಾಮ ಸಾಕಷ್ಟು ಸಮೃದ್ಧವಾಗಿತ್ತು.

ಅಲ್ಲಿ ಸೋಮಶರ್ಮನೆಂಬ ಬ್ರಾಹ್ಮಣನು ಪ್ರಸಿದ್ಧನಾಗಿದ್ದನು. ಅವನು ವೇದಶಾಸ್ತ್ರಗಳಲ್ಲಿ ಮಹಾಪಂಡಿತನಾಗಿದ್ದನು. ಇದರಿಂದ ಅವನನ್ನು ಸುತ್ತ ಮುತ್ತಣ ಹತ್ತಾರು ಹಳ್ಳಿಯವರು ಗೌರವಿಸುತ್ತಿದ್ದರು. ಅವನ ಹೆಂಡತಿ ಅಗ್ಗಿಲೆ. ಸ್ವಾಭಿಮಾನವುಳ್ಳ ಮೂರ್ಖ ಹೆಂಗಸು. ಅವಳು ಕೇವಲ ತನ್ನ ಸುಖಕ್ಕಾಗಿ ಪರರನ್ನು ಬಲಿಕೊಡಲು ಹಿಂದೆ ಮುಂದೆ ನೋಡದಂತಹ ಮಹಾಸ್ವಾರ್ಥಿಯಾಗಿದ್ದಳು.

ಸೋಮಶರ್ಮನಿಗೆ ಸಮೀಪದ ಹಳ್ಳಿಯಲ್ಲಿ ದೇವಶರ್ಮನೆಂಬ ಭಾವ ನಿದ್ದನು. ಅವನು ರೋಗಪೀಡಿತನಾಗಿ ಸತ್ತನು. ಅವನಿಗೆ ನಂದಿಶರ್ಮ ನೆಂಬ ಒಬ್ಬ ಮಗನಿದ್ದನು. ಪತಿ ಮೃತ್ಯುವಶನಾದುದರಿಂದ ತಾನೂ ಸಹ ಬದುಕಲಿಚ್ಛಿಸದೆ ತನ್ನ ಮಗನನ್ನು ಅಣ್ಣನಾದ ಸೋಮಶರ್ಮನ ವಶಕ್ಕೆ ಒಪ್ಪಿಸಿ ಅವನ ತಂಗಿ ಸಹ ಮೃತ್ಯುವಶಳಾದಳು.

ಸೋಮಶರ್ಮ ತಂಗಿಯಮಗ ನಂದಿಯನ್ನು ತನ್ನ ಮನೆಗೆ ಕರೆ ತಂದ. ಅವನಿಗೆ ಇಬ್ಬರು ಹೆಣ್ಣುಮಕ್ಕಳು. ನಂದಿಶರ್ಮನನ್ನು ವಿದ್ಯಾ ವಂತನನ್ನಾಗಿ ಮಾಡಿ ತನ್ನ ಹಿರಿಯ ಮಗಳನ್ನು ಅವನಿಗೇ ಕೊಟ್ಟು ವಿವಾಹಮಾಡಬೇಕೆಂದು ಅವನ ಇಚ್ಛೆ. ಆದರೆ ಅತನ ಹೆಂಡತಿ ಅಗ್ಗಿಲೆ ಅದಕ್ಕೆ ಅಡ್ಡಬಂದಳು. ಅವಳು ನಂದಿ ಶರ್ಮನನ್ನು ತನ್ನ ಮನೆಯಲ್ಲಿಟ್ಟು ಕೊಳ್ಳಲು ಒಪ್ಪಲೇ ಇಲ್ಲ. ಸೋಮಶರ್ಮನೂ ಹೆಂಡತಿಗೆ ನಾನಾಬಗೆ ಯಲ್ಲಿ ಸಮಾಧಾನ ಹೇಳಿದನು. ಆದರೆ ಆಕೆ ತನ್ನ ಹಠವನ್ನು ಬಿಡಲೇ ಇಲ್ಲ. ಆತನನ್ನು ಮನೆಯಲ್ಲಿಟ್ಟುಕೊಂಡರೆ ತಾನೇ ಮನೆಯನ್ನು ಬಿಟ್ಟು ಹೊರಟುಹೋಗುವುದಾಗಿ ಹೆದರಿಸಿದಳು.

ಸೋಮಶರ್ಮನ ಸ್ಥಿತಿ ಇತ್ತ ಹುಲಿ ಅತ್ತ ದರಿ ಎಂಬಂತಾಯಿತು. ಹೆಂಡತಿಯನ್ನೂ ಬಿಡಲಾರ. ತಂಗಿಯ ಮಗನನ್ನೂ ಕಳುಹಿಸಲಾರ. ಹೀಗೆ ಇಕ್ಕಟ್ಟಿಗೆ ಸಿಕ್ಕಿ ಅವನನ್ನು ತನ್ನ ಸ್ನೇಹಿತನ ಮನೆಯಲ್ಲಿಟ್ಟು ಅವನ ವಿದ್ಯಾಬುದ್ಧಿಗಳಿಗೆ ಏರ್ಪಾಡು ಮಾಡಿದನು.

ನಂದಿಶರ್ಮನು ವಿದ್ಯಾಬುದ್ಧಿಗಳಿಂದ ಮುಂದುವರಿಯುತ್ತಿದ್ದ. ಸೋಮಶರ್ಮನು ತನ್ನ ಮಗಳನ್ನು ಅವನಿಗೇ ಕೊಡಬೇಕೆಂದು ಹೇಳುತ್ತಿದ್ದ. ಆದರೆ ಅಗ್ಗಿಲೆ ಅದನ್ನು ವಿರೋಧಿಸುತ್ತಬಂದಳು. ತನ್ನ ಮಗಳಿಗೆ ಅವನಲ್ಲಿ

ಅನುರಾಗ ಮೂಡದಂತೆ ಅವಳಿಗೆ ಉಪದೇಶ ಮಾಡುತ್ತಿದ್ದಳು. "ನಂದಿ ಶರ್ಮ ಒಬ್ಬ ಕುರೂಪಿ, ರೋಗಿಷ್ಟ. ದಡ್ಡ ಅವನನ್ನು ಮದುವೆಯಾದರೆ ಬಹುಕಷ್ಟಕ್ಕೆ ಈಡಾಗಬೇಕಾಗುತ್ತದೆ. ನನ್ನ ಅಣ್ಣನ ಮಗ ಇವನಿಗಿಂತ ಸುಂದರವಾಗಿದ್ದಾನೆ" ಹೀಗೆ ಮುಂತಾಗಿ ತನ್ನ ಮಗಳಿಗೆ ಹೇಳಿ ಆಗಾಗ ಅವಳ ಮನಸ್ಸನ್ನು ಕೆಡಿಸುತ್ತಿದ್ದಳು. ಕೊನೆಗೊಂದುದಿನ ಮಗಳು ತಂದೆಯ ಮಾತನ್ನು ಒಪ್ಪದೆ ತಾಯಿಯ ಪಕ್ಷವನ್ನೇ ವಹಿಸಿದಳು. ಒಂದುದಿನ ಸೋಮಶರ್ಮನು ದುಃಖತುಂಬಿದ ಮನಸ್ಸಿನಿಂದ ತನ್ನ ಮಗಳನ್ನು ತನ್ನ ಹೆಂಡತಿಯ ಅಣ್ಣನ ಮಗನೊಂದಿಗೆ ವಿವಾಹಮಾಡಿ ಸಾಗಹಾಕಿದನು.

ಇದರಿಂದ ನಂದಿಶರ್ಮನಿಗೂ ದುಃಖವಾಯಿತು. ಆದರೆ ಸೋದರ ಮಾವನ ಇಕ್ಕಟ್ಟಿನ ಸ್ಥಿತಿಯನ್ನು ತಿಳಿದಿದ್ದುದರಿಂದ ಸಮಾಧಾನ ತಂದು ಕೊಂಡನು. ಸೋಮಶರ್ಮನು ಸಹ ತನ್ನ ಕಿರಿಯ ಮಗಳನ್ನು ಕೊಟ್ಟು ಮದುವೆಮಾಡಿಕೊಡುವುದಾಗಿ ನಂದಿಶರ್ಮನನ್ನು ಸಂತಯಿಸಿದನು. ಈ ಹಂಚಿಕೆ ತಿಳಿದಕೊಡಲೇ ಅಗ್ನಿಲೆ ತನ್ನ ನಾಟಕವನ್ನು ಮತ್ತೆ ಹೂಡಿದಳು. ಕಿರಿಯಮಗಳನ್ನೂ ಅವನಿಗೆ ಕೊಡಿಸಬಾರದೆಂದು ಹಠತೊಟ್ಟಳು. ಇದ ಕ್ಕಾಗಿ ಗಂಡನೊಂದಿಗೆ ಮಾತುಮಾತಿಗೂ ಕಲಹವನ್ನು ಹೂಡುತ್ತಿದ್ದಳು. ಹಿರಿಯಮಗಳ ಮನಸ್ಸನ್ನು ತಿರುಗಿಸಿದಂತೆಯೇ ಕಿರಿಯಮಗಳ ಮನಸ್ಸನ್ನೂ ತಿರುಗಿಸ ತೊಡಗಿದಳು.

ನಂದಿಶರ್ಮನೂ ತನ್ನ ಸೋದರಮಾವನು ಎರಡನೇಮಗಳನ್ನಾದರೂ ಕೊಟ್ಟು ಮದುವೆಮಾಡುವನೆಂಬ ಆಶೆಯಿಂದ ನಿರೀಕ್ಷಿಸುತ್ತಿದ್ದನು, ಸೋಮ ಶರ್ಮನು ಆವೇಮಾತುಗಳನ್ನಾಡುತ್ತ ತನ್ನ ಹೆಂಡತಿಯನ್ನು ಒಪ್ಪು ವಂತೆ ಮಾಡಲು ಮಹಾ ಸಾಹಸಮಾಡುತ್ತಿದ್ದನು. ಆದರೆ ಅವ ಮೂರ್ಖತನ ದಿನದಿನಕ್ಕೆ ಹೆಚ್ಚುತ್ತಿತ್ತೇ ಹೊರತು ಕಡಿಮೆಯಾಗಲಿಲ್ಲ ತನ್ನ ಕಪಟಚಾತುರ್ಯದಿಂದ ಕಿರಿಯಮಗಳ ಮನಸ್ಸನ್ನೂ ತನ್ನಂ ತಿರುಗಿಸಿಕೊಳ್ಳುವುದರಲ್ಲಿ ಸಮರ್ಥಳಾದಳು.

"ಗಂಡಿನ ಬಳಗ ಹೊರಗೊರಗೆ; ಹೆಣ್ಣಿನ ಬಳಗ ಒಳಗೊಳ ಎಂಬ ಮಾತು ಸುಳ್ಳಾಗುವುದಿಲ್ಲವಷ್ಟೆ! ಅಗ್ನಿಲೆಯ ತೌರೂರಿನ ಕಡೆಯವ ಬಂದು ಸೋಮಶರ್ಮನನ್ನು ಗಣನೆಗೇ ತಂದುಕೊಳ್ಳದೆ ಅಗ್ನಿಲೆಯೊಂದಿ

ಮಾತನಾಡಿ ಹೆಣ್ಣನ್ನು ನಿಶ್ಚಯಿಸಿಕೊಂಡರು. ಸೋಮಶರ್ಮನು ಭಗೀರಥ ಪ್ರಯತ್ನ ಮಾಡಿದರೂ ನಡೆಯಲಿಲ್ಲ. ಹೆಂಡತಿಯ ಮೂರ್ಖತನದ ಮುಂದೆ ಸೋಲಲೇ ಬೇಕಾಯಿತು.

ಈಗ ನಂದಿಶರ್ಮನಿಗೆ ಮನಸ್ಸಿನಲ್ಲಿ ವೈರಾಗ್ಯ ಹುಟ್ಟಿತು. ಕೊನೆಗೂ ತನ್ನ ಸೋದರಮಾವನ ಮಾತು ನಡೆಯಲಿಲ್ಲವೆಂಬ ವಿಚಾರ ಅವನ ಮನಸ್ಸಿಗೆ ಹೇಸಿತು. ಸಂಸಾರದ ವಿಚಿತ್ರ ವ್ಯಾಪಾರ ಅವನಿಗೆ ಬೇಸರ ವನ್ನು ತಂದಿತು. ತಾನು ಮುಂದೆ ಮದುವೆಯನ್ನೇ ಆಗಬಾರದೆಂದು ನಿರ್ಧರಿಸಿದ. ಜ್ಞಾನಿಗಳಾದ ಮುನಿಗಳೋರ್ವರ ಬಳಿಹೊಗಿ, ತನ್ನ ಕಥೆ ಯನ್ನು ಆಮೂಲಾಗ್ರವಾಗಿ ನಿವೇದಿಸಿಕೊಂಡು ತನಗೆ ದೀಕ್ಷೆಯನ್ನು ನೀಡ ಬೇಕೆಂದು ಬೇಡಿಕೊಂಡ. ಮುನಿಗಳು ಅವನಿಗೆ ಸಮಾಧಾನವನ್ನು ಹೇಳಿ ನೋಡಿದರು. ಆದರೆ ಅವನ ಮನಸ್ಸು ವೈರಾಗ್ಯದಿಂದ ದೃಢವಾಗಿದೆ ಯೆಂದು ಅವರಿಗೆ ನಿರ್ಧಾರವಾದಾಗ ಅವನಿಗೆ ಎಚ್ಚರವನ್ನು ನೀಡಿದರು.

ತನ್ನ ತಂಗಿಯ ಮಗ ದೀಕ್ಷೆಯನ್ನು ಕೈಗೊಂಡನೆಂಬ ವಾರ್ತೆಯನ್ನು ಕೇಳಿದಾಗ ಸೋಮಶರ್ಮ ದುಃಖದಿಂದ ರೋಧಿಸಿದನು. ತನ್ನ ಹೆಂಡತಿ ಯನ್ನು ಮನಸ್ಸಿನಲ್ಲೇ ನಿಂದಿಸಿದನು. ಏನಾದರೂ ಅಗ್ನಿಲೆಯ ಕಗ್ಗಲ್ಲಿನಂತಹ ಮನಸ್ಸು ಕರಗಲಿಲ್ಲ. ಸಂಸಾರದ ಸ್ಥಿತಿ ಆವನ ಮನಸ್ಸಿನಲ್ಲೂ ವೈರಾಗ್ಯ ವನ್ನು ತಂದಿತು. ಹೆಂಡತಿಯಾದರೇನು? ಮಕ್ಕಳಾದರೇನು? ಎಲ್ಲರೂ ಸ್ವಾರ್ಥಿಗಳೇ. ಇಂತಹ ಸ್ವಾರ್ಥಿಗಳಲ್ಲಿ ವ್ಯಾಮೋಹವನ್ನಿಟ್ಟು ಶ್ರಮಿಸುವುದು ವ್ಯರ್ಥವೆಂದು ಅವನ ಮನಸ್ಸಿನಲ್ಲಿ ಭಾವನೆ ಹುಟ್ಟಿತು. ತನ್ನ ಹೆಂಡತಿ ಮಕ್ಕಳೇ ನನ್ನ ಮಾತನ್ನು ಕೇಳಲಿಲ್ಲವೆಂದಮೇಲೆ ತನ್ನ ಬಾಳು ಏತಕ್ಕೆ? ಇವೇ ಮೊದಲಾದ ಅನೇಕ ಚಿಂತೆಗಳು ಅವನ ಮನಸ್ಸಿನಲ್ಲಿ ದಿನದಿನಕ್ಕೆ ಹೆಚ್ಚಿ, ತಾನು ಸಹ ದೀಕ್ಷೆಯನ್ನು ತೆಗೆದುಕೊಂಡು, ಸೋದರಳಿಯನಿದ್ದ ಮುನಿಸಂಘವನ್ನೇ ಸೇರಲು ನಿರ್ಧರಿಸಿದನು. ತನ್ನ ಪತಿದೀಕ್ಷೆಗೆ ಹೋಗದಂತೆ ತಡೆಯಲು ಅಗ್ನಿಲೆ ಮಹಾ ಪ್ರಯತ್ನಮಾಡಿದಳು. ಆದರೆ ಈಗ ಆಕೆಯ ಜಾಣ ನಾಟಕಕ್ಕೂ ಸೋಮಶರ್ಮನು ಒಳಗಾಗುವ ಪರಿಸ್ಥಿತಿಯಲ್ಲಿರಲಿಲ್ಲ. ತಾನು ದೀಕ್ಷೆಯನ್ನು ಗ್ರಹಿಸಿ ಮುನಿಸಂಘವನ್ನು ಸೇರಿಯೇಬಿಟ್ಟನು.

ಇತ್ತ ಅಗ್ನಿಲೆಯನ್ನು ನೋಡುವವರಿಲ್ಲದೆ, ಬಹುಕಾಲ ದಾರಿದ್ರ್ಯವನ್ನು ಅನುಭವಿಸಿ, ನಿರ್ಗತಿಕಳಾಗಿ ಸತ್ತು ದುರ್ಗತಿಯನ್ನು ಪಡೆದಳು.

೧೦

ರಕ್ತದಾಹ



ಅರವಿಂದನೆಂಬ ವಿದ್ಯಾಧರ ರಾಜನೊಬ್ಬನಿದ್ದ. ಅವನು ಮಹಾ
ಕ್ರಮಿ. ಮದೋನ್ಮತ್ತರಾದ ಶತ್ರುಸಾಮಂತರನ್ನು ತನ್ನ ಬಲದಿಂದ

ು. ಅವರೆಲ್ಲರಿಂದ ತಪ್ಪದೆ ಕಪ್ಪಕಾಣಿಕೆಗಳನ್ನು ಸ್ವೀಕರಿಸುತ್ತಿದ್ದ
ೋಗೋಪಭೋಗಗಳನ್ನು ಅನುಭವಿಸುವುದರಲ್ಲಿಯೂ ಹಿಂದಾಗಿರಲಿಲ್ಲ.
ರ್ವ ಪುಣ್ಯದಿಂದ ಅವನಿಗೆ ಇಬ್ಬರು ಮಕ್ಕಳಿದ್ದರು. ಹಿರಿಯಮಗ ಹರಿ
ದ್ರ. ಕಿರಿಯವನು ಕುರುವಿಂದ. ಈ ಹರಿಚಂದ್ರ ಕುರುವಿಂದರು ಯಥೋ
ವಾದ ರಾಜಶಿಕ್ಷಣವನ್ನು ಪಡೆದು ಸಮರ್ಥರಾದರು. ಆಡಿನ ಮೊಲೆ
ಂತಿದ್ದ ಇಬ್ಬರೇ ಮಕ್ಕಳ ಅಭ್ಯುದಯವು ಅರವಿಂದ ಮಹಾರಾಜನಿಗೆ
ುತವಾದ ಆನಂದವನ್ನು ಒದಗಿಸಿತ್ತು.

"ಬುದ್ಧಿಃ ಕರ್ಮಾನುಸಾರಿಣೀ" ಎಂಬಂತೆ ಅರವಿಂದ ಮಹಾರಾಜನ
ದ್ಧಿಯೂ ಬದಲಾಗುವ ಸಮಯಬಂದಿತು. ಅವನಿಗೆ ಸಂಪತ್ತು, ಅಧಿಕಾರ
ು ಹೆಚ್ಚುತಿದ್ದಂತೆ ಸ್ವಭಾವದಲ್ಲೂ ಕೆಟ್ಟತನಗಳು ಸೇರತೊಡಗಿದುವು.
ಂಕಾರ, ಅಧಿಕಾರವ್ಯಾಮೋಹ, ಪರಸ್ತ್ರೀಕಾಂಕ್ಷೆ ಮೊದಲಾದಬಹ್ವಾರಂಭ
ು ಅವನಲ್ಲಿ ಕಾಣತೊಡಗಿದುವು. ಇದರಿಂದ ಅವನಿಂದ ಪ್ರಜೆಗಳಿಗೆ
ನಾಬಗೆಯಲ್ಲಿ ಹಿಂಸೆಯಾಗತೊಡಗಿತು. ಮಕ್ಕಳು ಸಹ ತಮ್ಮ ತಂದೆ
ನ್ನು ತಿದ್ದಲು ಹಲವಾರು ಪ್ರಯತ್ನಗಳನ್ನು ಮಾಡಿದರು. ತಂದೆಯೇ
ಕ್ಕಳನ್ನು ತಿದ್ದಬೇಕಾಗಿರುವ ಲೋಕ ಸ್ವಭಾವಕ್ಕೆ ವಿರುದ್ಧವಾಗಿ ಇಲ್ಲಿ
ಕ್ಕಳೇ ತಂದೆಯನ್ನು ತಿದ್ದುವ ವಿಚಿತ್ರ ಪರಿಸ್ಥಿತಿ ಬಂದೊದಗಿತ್ತು. ಏನು
ಾಡಿದರೂ ಅಸಾತಾವೇದನೀಯ ಕರ್ಮದ ಉದಯದಿಂದ ಅವನಲ್ಲಿ
ಂಸೆಯ ಪ್ರಭಾವವೇ ಹೆಚ್ಚತೊಡಗಿತು. ಹೀಗೆ ಹಿಂಸೆಯ ಪರಿಣಾಮದಿಂದ
ರ್ತ ಮತ್ತು ರೌದ್ರಧ್ಯಾನದ ಪರಿಣಾಮದಿಂದ ಅವನಿಲ್ಲಿ ಹಿಂಸಾಬುದ್ಧಿ
ಚ್ಚಿತು. ಅಂದಿನಿಂದ ಅವನಲ್ಲಿ ಕೆಟ್ಟಬಯಕೆಗಳೇ ಅಧಿಕವಾದುವು.

ವೃದ್ಧಾಪ್ಯ ಹೆಚ್ಚಿದ ಅರವಿಂದ ಮಹಾರಾಜನಿಗೆ ಒಮ್ಮೆದಾಹಜ್ವರವು
ರಂಭಿಸಿತು. ಅದು ಅವನಿಗೆ ಸಹಿಸಲು ಆಗದಂತಹ ವೇದನೆಯನ್ನು
ಟ್ಟಿತು. ಇದರಿಂದ ಅವನು ಅಗ್ನಿಕುಂಡದಲ್ಲಿ ಬೆಂದಂತೆ ಪರಿತಪಿಸ
ಡಗಿದನು. ಅದನ್ನು ಸಹಿಸಲಾರದ ಅವನು ತನ್ನ ಹಿರಿಯ ಮಗ ಹರಿ
ಂದ್ರನನ್ನು ಕುರಿತು ತನ್ನ ವೇದನೆಯನ್ನು ಉಪಶಮನಮಾಡುವ ಯಾವು
ದರೂ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳಿದನು. ಅವನು ತಂಪಾದ

ನೀರಿನಹನಿಗಳಿಂದ ಕೂಡಿದ ಕಲ್ಹಾರ ಪುಷ್ಪಗಳಿಂದ ಬೀಸಣಿಗೆಯಂತೆ ಗ
ಯನ್ನು ಬೀಸಿದನು. ತಣ್ಣನೆ ಕೊರೆಯುತ್ತಿದ್ದ ಚಂದನ ಗಂಧವನ್ನು ಅ
ಅಂಗಾಂಗಗಳಿಗೆಲ್ಲಾ ಲೇಪಿಸಿದನು. ಮಂತ್ರವೈದ್ಯರಿಂದ ಇನ್ನೂ ಅನೆ
ಬಗೆಯ ಶೈತ್ಯೋಪಚಾರಗಳನ್ನು ಮಾಡಿಸಿದನು. ಆದರೂ ತನ್ನ ತಂದೆ
ಪರಿತಾಪವು ನಿಲ್ಲದುದನ್ನು ಕಂಡು ಹರಿಚಂದ್ರನು ಅವನನ್ನು ಉತ್ತರ ಕ
ವಿನ ಸೀತಾನದಿಯ ಅಲೆಗಳ ತಂಪಿನಿಂದ ಶೋಭಿಸುತ್ತಿದ್ದ ಆ ಪ್ರದೇಶದ
ಅರವಿಂದನ ದಾಹಜ್ವರವು ಶಮನವಾಗಲಿಲ್ಲ. ಇದರಿಂದ ಅರವಿಂದ ಮ
ರಾಜನಿಗೆ ಮಗನಮೇಲೆ ಕ್ರೋಧವು ಇಮ್ಮಡಿಸಿತೇ ಹೊರತು ಕಡಿ
ಯಾಗಲಿಲ್ಲ.

ಒಮ್ಮೆ ರೋಗಿಯಾದ ಅವನು ಹಾಸಿಗೆಯಲ್ಲಿ ಮಲಗಿ ತನ್ನ ದುದ
ಯನ್ನು ಕುರಿತು ದುಃಖದಿಂದ ಚಿಂತಿಸುತ್ತಿದ್ದನು. ಅದೇ ಸಮಯದಲ್ಲಿ ಎ
ಹಲ್ಲಿಗಳು ಪರಸ್ಪರ ಕಲಹಮಾಡಿದ್ದರಿಂದ ಅವುಗಳ ಬಾಲಗಳು ತುಂಡ
ಅಲ್ಲಿಂದ ಬಿದ್ದ ರಕ್ತದಹನಿಗಳು ಅವನಮೇಲೆ ಬಿದ್ದಿದ್ದವು. ಅವುಗಳ ಸಿಂ
ದಿಂದ ಅವನಲ್ಲಿದ್ದ ಸಂಕಟವು ತುಸು ಕಡಿಮೆಯಾದಂತೆ ಕಂಡುಬಂದ
ಕೊಡಲೇ ಅವನು "ಅದೃಷ್ಟದಿಂದ ನನಗೆ ದಿವ್ಯ ಔಷಧ ಸಿಕ್ಕಿತು" ಎ
ಆನಂದದಿಂದ ಉಬ್ಬಿದನು. ಕೂಡಲೇ ತನ್ನ ಮಗನನ್ನು ಕುರಿತು "ನ
ಈಜಾಡಲು ರಕ್ತದಿಂದ ತುಂಬಿದ ಒಂದು ಬಾವಿಯನ್ನು ಮಾಡಿಸು" ಎ
ಹೇಳಿದನು. "ಕಾಡಿನಲ್ಲಿ ಮೃಗಗಳು ಹೇರಳವಾಗಿವೆ. ಅವೆಲ್ಲವನ್ನು ಕೊ
ಆ ಬಾವಿಯನ್ನು ರಕ್ತದಿಂದ ತುಂಬಿಸು" ಎಂದು ಪುನಃಪುನಃ ಒತ್ತಾ
ಪಡಿಸಿದನು.

ಹರಿಶ್ಚಂದ್ರನು ಅಸಂಖ್ಯಾತ ಪ್ರಾಣಿಗಳ ವಧೆಗೆ ಅವಕಾಶವಾ
ಅಂತಹ ಕೆಲಸಕ್ಕೆ ಒಪ್ಪಲಿಲ್ಲ. ಜೈನಧರ್ಮೀಯರು ಇಂತಹ ಹಿಂಸೆಯ ಕೆ
ವನ್ನು ಮಾಡಬಾರದೆಂದು ವಿನಯದಿಂದ ಹೇಳಿದನು. ಇದರಿಂದ ಮತ್ತ
ಕುಪಿತನಾದ ಅರವಿಂದ ಹರಿಚಂದ್ರನನ್ನು ನಿಂದಿಸಿ, ತನ್ನ ಕಿರಿಯ
ಕುರುವಿಂದನನ್ನು ಕರೆದು ರಕ್ತದ ಬಾವಿಯನ್ನು ಮಾಡಿಸು
ತಿಳಿಸಿದನು.

ಪಾಪಭೀತನಾದ ಕುರುವಿಂದನಿಗೂ ಈ ವಿಚಾರ ಸರಿಬೀಳಲಿಲ್ಲ.
ಅವನು ತನ್ನ ತಂದೆ ಮರಣ ಸಮೀಪದಲ್ಲಿರುವುದರಿಂದ, ಯಾವು
ದೂ ಒಂದು ಯುಕ್ತಿಯಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು
ಚಿಸಿದನು. ಇದಕ್ಕಾಗಿ ಅರಗು ಮೊದಲಾದ ವಸ್ತುಗಳಿಂದ ರಕ್ತ
ದ್ರವವನ್ನು ಸಿದ್ಧಪಡಿಸಿ, ಅದನ್ನು ತುಂಬಿ ಒಂದು ಬಾವಿಯನ್ನು
ಡಿಸಿದನು. ರಕ್ತದಬಾವಿ ಸಿದ್ಧವಾದನಂತರ ತಂದೆಯನ್ನು ಕರೆದು
ು ಹೋಗಿ ಈಜಾಡಲು ಬಿಟ್ಟನು.

ಅರವಿಂದ ಮಹಾರಾಜನು ಅದನ್ನು ಕೃತ್ರಿಮ ರಕ್ತವೆಂದು ತಿಳಿಯದೆ
ದಿಂದ ಈಸಿದನು. ಅವನ ಕ್ಷಣಿಕವಾದ ಮಾನಸಿಕ ಶಾಂತಿಯು
ಮದಿಂದ ಶರೀರಕ್ಕೂ ಕ್ಷಣಿಕವಾದ ಶಾಂತಿಯು ಲಭಿಸಿತು. ತಾಪವು
ಯಾಯಿತು. ಈಸುತ್ತಿದ್ದಂತೆಯೆ ಅದನ್ನು ಬಾಯಿಮುಕ್ಕುಳಿಸಿದನು.
ದರ ರುಚಿಯಿಂದ ಅದನ್ನು ರಕ್ತವಲ್ಲವೆಂದು ತಿಳಿದನು. ಕೃತ್ರಿಮ
ರಕ್ತವೆಂದು ತಿಳಿದನು. ಇದರಿಂದ ಅವನಲ್ಲಿ ಕ್ರೋಧಾಗ್ನಿ ಮತ್ತಷ್ಟು
ಿಸಿತು. ಅದರ ಸಂಗಡದಲ್ಲೇ ಅವನ ಶರೀರದ ವೇದನೆಯೂ
ಾಯಿತು. ಕೂಡಲೇ ಅವನು "ನನಗೆ ಮೋಸ ಮಾಡದ ನೀನು
ಗನೇ ಅಲ್ಲ. ನಿನ್ನನ್ನು ಕೊಂದೇ ಮುಂದಿನ ಕೆಲಸ" ಎಂದು
ವನೇ, ಶರೀರದಲ್ಲಿ ವೇದನೆಯಿದ್ದರೂ ಖಡ್ಗವನ್ನು ಹಿಡಿದು ಮೇಲಕ್ಕೆ
ದುರ್ಬಲನಾಗಿ ಬಿದ್ದಿದ್ದ ಅವನಿಗೆ ಆ ಕ್ಷಣದಲ್ಲಿಯಾವ ಶಕ್ತಿಯೂ
ೋ ಆಶ್ಚರ್ಯ!


ತನ್ನ ತಂದೆ ಖಡ್ಗವನ್ನು ಹಿಡಿದು ಕೊಲ್ಲಲು ಬರುತ್ತಿರುವುದನ್ನು
ಕುರುವಿಂದನು ಆತ್ಮರಕ್ಷಣೆಗಾಗಿ ಮನಬಂದಂತೆ ಓಡತೊಡಗಿದ.
ದನೂ ರೌದ್ರಾವತಾರದಿಂದ ಹಿಂಬಾಲಿಸಿದನು. ಆದರೆ ದುರ್ಬಲನು
ತಾನೆ ಓಡಬಲ್ಲರು? ಹಾಗೆ ಓಡುತ್ತಿರುವಾಗ ಒಂದು ಕಲ್ಲನ್ನು ಎಡವಿ
ದನು ಬಿದ್ದುಬಿಟ್ಟನು. ಬೀಳುವಾಗ ಅವನು ಹಿಡಿದಿದ್ದ ಕತ್ತಿಯ
ು ಅವನ ಎದೆಯನ್ನು ಚುಚ್ಚಿಬಿಟ್ಟಿತು. ಅವನ ಖಡ್ಗ ಅವನಿಗೇ
ಾಯಿತು. ಕೊಡಲೇ ಅವನ ಎದೆಯಿಂದ ರಕ್ತವು ಧಾರಾಳವಾಗಿ

ಹರಿಯತೊಡಗಿತು. ಆವನು ಮಗನನ್ನು ವೀಕ್ಷಿಸುತ್ತಲೇ ರಕ್ತದಾಹದ
ಅಸುವು ನೀಗಿದನು.

ತನ್ನ ತಂದೆ ದುರ್ಮರಣಕ್ಕೆ ಈಡಾಗಿದ್ದುದನ್ನು ಕಂಡ ಆ ಮಕ್ಕಳಿಬ್ಬ
ಅತೀವ ದುಃಖವಾಯಿತು. ಹಿಂಸಾಭಾವ, ರೌದ್ರಭಾವಗಳನ್ನು ಹೊ
ಬಾರದೆಂಬುದಕ್ಕೆ ಅರವಿಂದ ಮಹಾರಾಜನ ಕಥೆ ಪ್ರಸಿದ್ಧವಾಯಿತು.

ಪಾಪಮಾರ್ಗದಲ್ಲಿ ಸಂಪಾದನೆಮಾಡುವವರ ಮಕ್ಕಳಿಗೆ ಸುಖ ಇರುವುದ

೧೧
...ೋಳುತಲೆಯ ಮಹಿಮೆ



ಬಸದಿಯ ಚಂದ್ರಶಾಲೆಯಲ್ಲಿ ಆದಿಸಾಗರ ಮುನಿಗಳ ಪ್ರವಚನವು
ಯುತ್ತಿತ್ತು. ಆಧ್ಯಾತ್ಮಿಕ ತೇಜಸ್ಸಿನಿಂದ ಅವರ ಮುಖ ಪ್ರಜ್ವಲ

ವಾಗಿತ್ತು. ಅವರ ಶರೀರದ ಗೋಧಿಯ ಬಣ್ಣದಮೇಲೆ ಕಾಷಾಯ
ಆಚ್ಛಾದವಾಗಿ ಮುನಿಧರ್ಮದ ಶ್ರೇಷ್ಠತೆಯನ್ನು ಸಾರುತ್ತಿತ್ತು.
ಲಿಲ್ಲದ ಅವರ ತಲೆ ಮಿರಿ ಮಿರಿ ಮಿಂಚುತ್ತಿದ್ದಿತು. ಶ್ರಾವಕ ಶ್ರಾವಿ
ಅವರ ಉಪದೇಶ ಶ್ರವಣದಲ್ಲಿ ತಲ್ಲೀನರಾಗಿದ್ದರು.

ಅದೇ ವೇಳೆಗೆ ಬಸದಿಯ ಮುಂದಿನಬೀದಿಯಲ್ಲಿ ಕುಂಬಾರ
ನೊಬ್ಬ ಹೋಗುತ್ತಿದ್ದ. ಅವನ ಕಿವಿಗೆ ಮುನಿಗಳ ಮಧುರವಾಣಿ ಕೇ
ಆದರ ಅರ್ಥ ಇವನಿಗೆ ತಿಳಿಯದಿದ್ದರೂ, ಅದನ್ನು ಮತ್ತಷ್ಟು
ಕೆಂಬ ಕುತೂಹಲ ಅವನ ಮನಸ್ಸನ್ನು ಕೆರಳಿಸಿತು. ಬಸದಿಯನ್ನು
ದೂರದಲ್ಲಿ ನಿಂತು ಕೇಳತೊಡಗಿದ.

ಪ್ರವಚನ ಮುಗಿಯಿತು. ಅಲ್ಲಿದ್ದ ಶ್ರಾವಕ ಶ್ರಾವಿಕೆಯರು ಗು
ವಂದಿಸಿ ಹೊರಟರು. ಕೆಲವರು ಹಲವಾರು ವ್ರತಗಳನ್ನು ಕೈಗೆ
ಮತ್ತೆ ಕೆಲವರು ರಾತ್ರಿಭೋಜನ ತ್ಯಾಗದ ವ್ರತವನ್ನು ಕೈಗೊಂಡು
ತ್ತಿದ್ದುದನ್ನು ಕಂಡು ಕುಂಬಾರ ಹುಡುಗನಿಗೂ ವ್ರತವನ್ನು
ಬೇಕೆಂಬ ಆಪೇಕ್ಷೆಯಾಯಿತು. ಗುರುಗಳಮುಂದೆ ಕೈಜೋಡಿಸಿ

" ಸ್ವಾಮಿ, ನನಗೂ ಒಂದು ವ್ರತವನ್ನು, ಕೊಡಿರಿ " ಎಂದು
ಮುಗ್ಧ ಕುಂಬಾರ ಹುಡುಗನನ್ನು ಮುನಿಗಳು ಒಂದುಸಾರಿ ಸಿಂಹಾವ
ದಿಂದ ನೋಡಿದರು. ಮುಗ್ಧ ಬಾಲಕ ವ್ರತವೆಂದರೆ ಏನೆಂಬುದ
ಯದ ಮುಗ್ಧಭಾವ. ಆತನನ್ನು ನೋಡಿದ ಮುನಿಗಳಿಗೆ ಆಸಕ್ತಿ

" ವ್ರತವೆಂದರೆ ಏನೆಂಬುದು ಗೊತ್ತೇನಪ್ಪಾ ಮಗು " ವ
ಪ್ರೀತಿ ಪುರಸ್ಸರವಾಗಿ ಕೇಳಿದರು.

" ಗೊತ್ತಿಲ್ಲ ಸ್ವಾಮಿ "

" ಮತ್ತೆ ಕೇಳಿದೆ ಏಕೆ? "

" ಎಲ್ಲರಿಗೂ ಕೊಡುತ್ತಿದ್ದೀರಿ. ನನಗೂ ಬೇಕೆನಿಸಿತು.
ಕೇಳಿದೆ ಸ್ವಾಮಿ "

ಮುನಿಗಳು ನಕ್ಕುಬಿಟ್ಟರು. ಈ ಮುಗ್ಧಬಾಲಕನಿಗೆ ಯ
ವನ್ನು ಕೊಡಬೇಕೆಂಬುದು ಅವರಿಗೆ ಚಿಂತೆಯಾಯಿತು. ಮತ್ತೆ
ಕುರಿತು ಕೇಳಿದರು. " ಮುನಿಗಳೆಂದರೇನೆಂದು ಗೊತ್ತೇನಪ್ಪಾ

" ಏನೋ ಗೊತ್ತಿಲ್ಲ ಸ್ವಾಮಿ " ಸಹಜ ಮುಗ್ಧತೆಯಿಂದಲೇ ಂಬಾರ ಹುಡುಗ ಹೇಳಿದ.

" ಹಾಗಾದರೆ ತಿಳಿ. ತಲೆ ಬೋಳಿಸಿಕೊಂಡಿರುವವರೇ ಮುನಿ. ಇಷು ನಗೆ ತಿಳಿಯುವುದಷ್ಟೆ "

" ತಿಳಿಯಿತು ಸ್ವಾಮಿ. "

" ಸರಿ ಈಗ ಒಂದು ಕೆಲಸಮಾಡು. ಪ್ರತಿನಿತ್ಯ ನೀನು ಊಟ ಾಡುವುದಕ್ಕೆ ಮುನ್ನ ಒಂದುಸಲ ಬೋಳುತಲೆಯವರನ್ನು ನೋಡಿ ಟ ಮಾಡು. ಅದನ್ನು ತಪ್ಪದೆ ಮಾಡುತ್ತೇನೆಂದು ನಿನ್ನ ಮನಸ್ಸಿನಲ್ಲಿ ಶ್ಚಯಿಸು " ಎಂದು ಹೇಳಿದರು. ಆ ಬಾಲ ಬುದ್ಧಿಗೆ ಅನುಗುಣವಾದ ತವನ್ನೇ ಮುನಿಗಳು ನೀಡಿದರು.

" ಅದೇನು ಬಹಳ ಸುಲಭ " ಎಂದ ಕುಂಬಾರ ಹುಡುಗ ಮುನಿಗಳಿಗೆ ಂದಿಸಿ ಹೊರಟುಹೋದ.

ಆ ಕುಂಬಾರ ಹುಡುಗನ ಮನೆಯ ಎದುರಿನಲ್ಲೇ ಮತ್ತೊಬ್ಬ ಕುಂಬಾ ರ ಮನೆ. ಅದರ ಮಾಲೀಕ ಬೋಳು ತಲೆಯವನು. ಈ ಹುಡುಗ ತಿದಿನ ತಾನು ಊಟಮಾಡುವುದಕ್ಕೆ ಮುನ್ನ ಅವನ ಬೋಳು ಲೆಯನ್ನು ನೋಡಿ ಉಣ್ಣತೊಡಗಿದ. ಇದು ಎಷ್ಟೋ ದಿನಗಳವರೆಗೆ ನಡೆ ತು. ಆದರೆ ಈ ವಿಚಾರ ಆ ಬೋಳುತಲೆಯ ಕುಂಬಾರನಿಗೆ ಳಿದಿರಲಿಲ್ಲ.

ಒಂದು ದಿನ ಬೋಳುತಲೆಯ ಕುಂಬಾರ ಮಡಿಕೆಗಳನ್ನು ಮಾಡಲು ದವಾದ ಮಣ್ಣನ್ನು ತರಲು ಕೆರೆಯ ಒಳಾಂಗಣಕ್ಕೆ ನಡೆದ. ಅಲ್ಲಿ ಒಳ್ಳೆಯ ಣ್ಣು ಸಿಗುವ ಸ್ಥಳವನ್ನು ತುಸುವೇಳೆ ಹುಡುಕಿ, ಆ ಮಣ್ಣನ್ನು ಅಗೆಯ ಡಗಿದ. ಹೀಗೆ ಅಗೆಯುತ್ತಿದ್ದಾಗ ಅವನ ಪಿಕಾಸಿಗೆ ಏನೋ ಒಂದು ಟ್ಟಿಯಾದ ಪದಾರ್ಥ ಸಿಕ್ಕಿತು. ಕುತೂಹಲದಿಂದ ಅದನ್ನು ಶ್ರಮದಿಂದ ೋಧಿಸಿನೋಡಿದ. ಅದು ನಿಧಿಯಾಗಿದ್ದಿತು. ಇದನ್ನು ಯಾರಿಗೂ ಳಿಯದಂತೆ ತನ್ನ ಮನೆಗೆ ಸಾಗಿಸುವ ಬಗೆ ಹೇಗೆ ಎಂದು ಚಿಂತಿಸುತ್ತ ಳಿತಿದ್ದ.

ಇತ್ತ ಕುಂಬಾರ ಹುಡುಗನಿಗೆ ಊಟದ ಸಮಯವಾಯಿ
ನಾಲ್ಕಾರುಸಾರಿ ಬಂದು ನೋಡಿದರೂ ಬೋಳು ತಲೆಯ ಕುಂಬ
ಅವನ ದೃಷ್ಟಿಗೆ ಬೀಳಲಿಲ್ಲ. ಬೋಳುತಲೆ ನೋಡಿದನಂತರವೇ ಊ
ಮಾಡಬೇಕೆಂದು ಗುರುಗಳು ಹೇಳಿಬಿಟ್ಟಿದ್ದಾರೆ. ಹೊತ್ತಾಗಿಹೋಯಿ
ಈಗ ಏನುಮಾಡುವುದು? ಕುಂಬಾರ ಹುಡುಗನಿಗೆ ಚಿಂತೆಹತ್ತಿತು.

ಕೂಡಲೇ ಅವನ ಮನಸ್ಸಿನಲ್ಲಿ ಒಂದು ಪರಿಹಾರ ಹೊಳೆಯಿ
"ಹೇಗೂ ಬೋಳುತಲೆಯ ಕುಂಬಾರ ಮಡಿಕೆಗಳಿಗಾಗಿ ಮಣ್ಣುತರ
ಕೆರೆಯಬಳಿ ಹೋಗಿದ್ದಾನೆ. ನಾನೇ ಅಲ್ಲಿಗೆ ಹೋಗಿ, ಅವನ ಬೋಳು
ಯನ್ನು ನೋಡಿ ಬಂದುಬಿಡಬಾರದೇಕೆ?" ಈ ಆಲೋಚನೆ ಅ
ಮನಹೊಕ್ಕ ಕೂಡಲೆ ಅವನು ಕೆರೆಯತ್ತ ಧಾವಿಸಿದ.

ಕೆರೆಯ ಏರಿಯ ಮೇಲೆ ಹೋಗುತ್ತಿದ್ದಾಗ, ಕುಂಬಾರ ತಲೆ ಬಗ
ಕೊಂಡು ಆ ನಿಧಿಯನ್ನು ಬೇರೊಂದುಸ್ಥಳದಲ್ಲಿ ಹುದುಗಿಡುತ್ತಿದ್ದ. ಕುಂಬ
ಹುಡುಗನಿಗೆ ಅವನ ಬೋಳುತಲೆ ಬಿಸಿಲಿನಲ್ಲಿ ಮಿರಿ ಮಿರಿ ಮಿಂಚುತ್ತಿದ್ದು
ಕಾಣಿಸಿತು. ಕೂಡಲೇ "ಕಂಡೇ! ಕಂಡೇ!" ಎಂದು ಕೂಗಿದವ
ಊಟಕ್ಕಾಗಿ ಮನೆಯ ಕಡೆಗೆ ಹಿಂತಿರುಗಿ ಓಡಿದ.

ಕುಂಬಾರನಿಗೆ ಸಂದೇಹ ಬಂದಿತು. ತನ್ನ ಬೋಳುತಲೆಯನ್ನು ಕಂ
ಅವನು ಹಾಗೆಂದಿದ್ದಾನೆಂಬುದು ಅವನಿಗೆ ತಿಳಿಯದು. ತಾನು ಬಚ್ಚಿಡುತಿ
ನಿಧಿಯನ್ನು ಕಂಡು "ಕಂಡೇ! ಕಂಡೇ!" ಎಂದು ಕೂಗಿಕೊಂಡು
ಹೋಗಿದ್ದಾನೆಂದು ಊಹಿಸಿದನು. ಇನ್ನೂ ಆತನು ಈ ಸಂಗತಿಯ
ಬಹಿರಂಗ ಪಡಿಸಿದರೆ ತನಗೆ ರಾಜದಂಡನೆಯಾಗುತ್ತದೆಯೆಂದು ಹೆ
ದನು. ಕೂಡಲೇ ಆ ನಿಧಿಯನ್ನು ಬಚ್ಚಿಟ್ಟು ತಾನೂ ಮನೆಗೆ ಬಂದು
ಹುಡುಗನನ್ನು ಏಕಾಂತಕ್ಕೆ ಕರೆದು, "ಮಗೂ ನೀನು ಕಂಡ ನಿಧಿಯ ವಿಚಾ
ವನ್ನು ಯಾರಿಗೂ ಹೇಳಬೇಡ. ನಿನಗೂ ಅದರಲ್ಲಿ ಅರ್ಧ ನಿಧಿಯ
ಕೊಡುವೆ" ಎಂದು ಹೇಳಿ, ರಾತ್ರಿಯಾದನಂತರ ಯಾರಿಗೂ ತಿಳಿಯದ
ಆ ನಿಧಿಯನ್ನು ತಂದು, ಆ ಕುಂಬಾರ ಹುಡುಗನಿಗೂ ಅರ್ಧ ಹ
ಕೊಟ್ಟನು.

ಮುನಿಗಳು ತನಗೆ ಜೋಳುತಲಿಯನ್ನು ನೋಡಿ ಊಟಮಾಡೆಂದು ಏಕೆ ಹೇಳಿದ್ದರೆಂಬುದು ಆ ಕುಂಬಾರ ಹುಡುಗನಿಗೆ ಅರ್ಥವಾಯಿತು. ಈ ಚಿಕ್ಕ ವ್ರತವನ್ನು ನಡೆಸಿದಮಾತ್ರದಿಂದಲೇ ತನ್ನ ಇಷ್ಟು ಸಂಪತ್ತು ದೊರಕಿತೆಂದಮೇಲೆ, ದೊಡ್ಡದೊಡ್ಡ ವ್ರತಗಳನ್ನು ಆಚರಿಸಿದರೆ ಇನ್ನೂ ಸುಖ ಸಂಪತ್ತು ಹೆಚ್ಚಬಹುದೆಂದು ತಿಳಿದು ಅಂದಿನಿಂದ ಅಹಿಂಸಾದಿ ಉತ್ತಮ ವ್ರತಗಳನ್ನು ಆಚರಿಸತೊಡಗಿದನು.

ಸದ್ವ್ರತಾಚರಣೆಯಿಂದ ಸುಖ ಸಂಪತ್ತುಗಳು ಒದಗುವುದೆಂಬುದೇ ಈ ಕಥೆಯ ಆಶಯ.

ಒಳ್ಳೆಯದನ್ನು ನೋಡುವುದು, ಒಳ್ಳೆಯದನ್ನು ತಿಳಿಯುವುದು, ಒಳ್ಳೆಯದನ್ನು ಆಚರಿಸುವುದು ಮುಕ್ತಿಮಾರ್ಗ.

೧೨

ತಂದೆಯನ್ನು ತಿದ್ದಿದ ಮಗ



ಮುದುಕನಾದ ರೈತನೊಬ್ಬನಿದ್ದ. ಅವನಿಗೆ ಅನುರೂಪ ವಯಸ್ಸಿ
ಹೆಂಡತಿ ಮತ್ತು ದುಡಿಯುವ ಮಗ ಇದ್ದರು. ಒಮ್ಮೆ ಆಕಸ್ಮಾತ್ ರೋ

ದಿಂದ ಆತನ ಹೆಂಡತಿ ಸತ್ತುಹೋದಳು. ಅನಂತರ ಆ ರೈತನಿಗೆ ಮತ್ತೆ ಮದುವೆಯಾಗಬೇಕೆಂಬ ಆಶೆ ಬಲಿಯಿತು. ಎರಡನೆಯ ಮದುವೆಯಿಂದ ಸುಖವಾಗಲಾರದೆಂದು ಅವನ ಗೆಳೆಯರೆಲ್ಲಾ ಹೇಳಿದರು. ಆದರೂ ಅವನು ಕೇಳಲಿಲ್ಲ. ಹಣದಾಶೆಯ ಮತ್ತೊಬ್ಬ ರೈತನಿಗೆ ಹೇರಳವಾದ ಧನವನ್ನಿತ್ತು ಆತನ ಕಿರಿಯ ವಯಸ್ಸಿನ ಮಗಳನ್ನು ಮದುವೆಯಾದ.

"ಕಿರಿಯ ಹೆಂಡತಿ ಕಿವಿಕಿತ್ತರೂ ಪ್ರೀತಿಯೇ" ಎಂಬಂತೆ ಆ ಮುದಿ ರೈತನ ಸ್ಥಿತಿಯಾಯಿತು. ದಿನದಿನಕ್ಕೆ ಅವಳ ಕೈಗೊಂಬೆಯಾಗುತ್ತ ಬಂದನು. "ಅವಳು ಏನು ಮಾಡಿದರೂ ಸರಿ" ಏನು ಹೇಳಿದರೂ ಸರಿ ಎಂಬ ನಿರ್ಧಾರಕ್ಕೆ ಅವನು, ಅವಳ ಮೇಲಿನ ವ್ಯಾಮೋಹದಿಂದ ಬಂದಿದ್ದ.

ಕಿರಿಯ ಹೆಂಡತಿ ಸಹ ಕ್ರಮಕ್ರಮವಾಗಿ ಮನೆಯ ಸಕಲ ಅಧಿಕಾರವನ್ನೂ ತನ್ನ ಕೈಗೆತ್ತಿಕೊಂಡಳು." ಒಂದುದಿನ ತನ್ನ ವೃದ್ಧಪತಿ ಸಂಪೂರ್ಣವಾಗಿ ತನ್ನ ಮೋಹದಲ್ಲಿ ಮುಳುಗಿದ್ದಾನೆಂದು ಖಚಿತವಾದಾಗ,

"ನೀವು ತೋರಿಸುತ್ತಿರುವುದು ಬರೀ ತೋರಿಕೆಯ ಪ್ರೀತಿ" ಎಂದು ಹೇಳಿ ಮುಖ ತಿರುಗಿಸಿದಳು.

ಮುದುಕ ರೈತನಿಗೆ ಭ್ರಾಂತಿಯಾಯಿತು. "ಹೇಗೆ ಹೇಳುವೆ?" ಎಂದು ಆಶ್ಚರ್ಯದಿಂದ ಕೇಳಿದನು.

"ನಿಮಗೆ ಆಗಲೇ ಪ್ರಾಯಸಮರ್ಥನಾದ ಮಗನಿದ್ದಾನೆ."

"ಇರಲಿ ಅದಕ್ಕೇನು?"

"ಅದಕ್ಕೇನೂ ಇಲ್ಲ. ಆದರೆ ನಾಳೆ ನನ್ನ ಹೊಟ್ಟೆಯಲ್ಲಿ ಗಂಡುಮಗ ಹುಟ್ಟಿದರೆ ಅವನ ಗತಿ?"

"ಅವನ ಗತಿಯೂ ಚನ್ನಾಗಿಯೇ ಇರುವುದು."

"ಎಂದಿಗೂ ಇಲ್ಲ ನನ್ನ ಮಗ ನಿಮ್ಮ ಹಿರಿಯ ಹೆಂಡತಿಯ ಮಗನ ಸೇವಕನಾಗಿ ಬಾಳಬೇಕೆಂಬುದು."

"ಅದನ್ನು ನಾವು ಈಗಲೇ ಏಕೆ ಕಲ್ಪಿಸಿಕೊಂಡು ಚಿಂತಿಸಬೇಕು?"

"ನಿಮಗೇನೋ ಬೇಕಿಲ್ಲ. ಹೇಗೂ ಮುದುಕರಾಗಿರುವಿರಿ. ಬೇಗನೆ ನೀವು ಸಾಯುವುದಂತೂ ನಿಜ. ಆಮೇಲೆ ನನ್ನ ಮತ್ತು ನನ್ನ ಮಗನ ಗತಿ?"

ಮುದುಕನ ಮನಸ್ಸಿಗೆ ಕಿರಿಯ ಹೆಂಡತಿಯ ಮಾತು ನಾಟಿತು.

"ಹಾಗಾದರೆ ಏನು ಮಾಡಬೇಕು?" ಎಂದು ಕೇಳಿದ."

"ನೀವು ನಿಮ್ಮ ಮಗನನ್ನು ಕೊಲ್ಲಬೇಕು."

"ಇಲ್ಲದಿದ್ದರೆ ನಾನು ನಿಮ್ಮ ಸಂಗಡ ಬಾಳುವುದೇ ಇಲ್ಲ. ಈ ದಿನವೇ ಹೊರಟು ಹೋಗುವೆ."

"ಅತ್ತ ಪುಲಿ; ಇತ್ತ ದರಿ" ಎಂಬಂತಾಯಿತು ಮುದುಕನ ಸ್ಥಿತಿ. ಪುತ್ರವಧೆ ಧರ್ಮವಿರೋಧ. ತಾನು ನೆಟ್ಟು ಬೆಳಿಸಿದ ಗಿಡವನ್ನು ತಾನೇ ಕಡಿದುಹಾಕುವುದು ಎಂದಿಗೂ ಸರಿಯಲ್ಲ. ಕೊಲ್ಲದಿದ್ದರೆ ಪ್ರೀತಿಯಹೆಂಡತಿ ತನ್ನನ್ನು ಬಿಟ್ಟು ಹೊರಟುಹೋಗುತ್ತಾಳೆ. ತನ್ನ ಕಾಮೋಪಭೋಗಗಳಿಗೆ ಕಲ್ಲು ಬೀಳುತ್ತದೆ. ಹೀಗೆ ಬಹಳ ಹೊತ್ತು ಚಿಂತೆಯಿಂದ ಬೆಂದ ಮುದುಕ ಹೆಂಡತಿಯ ಸಹವಾಸವೇ ಹೆಚ್ಚೆಂದು ಬಗೆದು ಮಗನನ್ನು ಕೊಲ್ಲಲು ಒಪ್ಪಿದ, ಆದರೆ ಹೇಗೆ ಕೊಲ್ಲುವುದು ?

"ಮಗನನ್ನು ಕೊಂದರೆ ರಾಜನು ನನಗೆ ಮರಣದಂಡನೆ ನೀಡುವನು. ಸ್ವಜಾತಿಯವರು ಬಹಿಷ್ಕರಿಸುವರು. ಏನು ಮಾಡಲಿ?" ಎಂದು ತನ್ನ ಹೆಂಡತಿಯನ್ನೇ ಕೇಳಿದ.

ಪ್ರತ್ಯುತ್ಪನ್ನ ಮತಿಯಾದ ಆ ಹೆಂಗಸಿಗೆ ಇದರ ಉಪಾಯವು ಹೊಳೆಯುವುದು ತಡವಾಗಲಿಲ್ಲ. ತನ್ನ ಪತಿಯಮುಂದೆ ಉಪಾಯವನ್ನು ತಿಳಿಸಿದಳು.

"ನಾಳೆ ಎದ್ದು ನೇಗಿಲಿನಿಂದ ನೀವು ಮತ್ತು ನಿಮ್ಮ ಮಗ ಹೊಲವನ್ನು ಉಳಲು ಹೋಗಿರಿ. ಮುಂದೆ ಅವನು ಉಳುತ್ತಾ ಹೋಗಲಿ. ಹಿಂದಿನಿಂದ ನೀವು ಉಳುತ್ತಾ ಹೋಗಿರಿ. ಸಮಯವನ್ನು ನೋಡಿ ನಿಮ್ಮ ಎತ್ತುಗಳನ್ನು ಅವನಮೇಲೆ ನುಗ್ಗಿಸಿ, ಹೊಡೆದು ಕೊಂದುಬಿಡಿ ಕೂಡಲೇ 'ಅಯ್ಯೋ ಓಡಿಬನ್ನಿ. ನನ್ನ ಮಗನನ್ನು ಎತ್ತು ತಿವಿದು ಕೊಂದಿತು' ಎಂದು ಕಿರಿಚಿಕೊಳ್ಳಿರಿ, ಆಗ ಬಂದವರೆಲ್ಲರೂ ಎತ್ತುಗಳು ತಿವಿದು ಸತ್ತುಹೋದನೆಂದು ತಿಳಿಯುವರು. ನಿಮ್ಮಮೇಲಿನ ಅಪವಾದವೂ ತಪ್ಪುವುದು."

ಹೆಂಡತಿಯ ವ್ಯಾಮೋಹಮಗ್ನನಾಗಿದ್ದ ಆ ಮೂರ್ಖ ರೈತ ಅವಳ

ಮಾತಿಗೆ ಒಪ್ಪಿದನು. ಆದರೆ ಇವರಿಬ್ಬರೂ ಆಡಿದ ಮಾತುಗಳನ್ನು ಮಗನು ಕೇಳಿಸಿಕೊಂಡನು.

ಮರುದಿನ ಎಂದಿನಂತೆ ಮುದುಕ ರೈತ ಮಗನನ್ನು ಕರೆದು ಹೊಲಕ್ಕೆ ನೇಗಿಲನ್ನು ತೆಗೆದುಕೊಂಡು ಹೋಗಲು ಹೇಳಿದನು ಅವನು ಹಾಗೇ ಮಾಡಿದನು. ಜೊತೆಯ ಮತ್ತೊಂದು ನೇಗಿಲನ್ನು ತೆಗೆದುಕೊಂಡು ತಂದೆಯೂ ಹೊರಟನು.

ಮಗ ಮುಂದೆ ನೇಗಿಲಿಗೆ ಎತ್ತುಗಳನ್ನು ಕಟ್ಟಿ ಫಲಭರಿತವಾಗಿದ್ದ ಬೆಳೆಗಳನ್ನು ಉಳಲಾರಂಭಿಸಿದನು. ಕೊಯ್ಲಿಗೆ ಬಂದಿದ್ದ ಬೆಳೆಯನ್ನು ಉತ್ತು ಹಾಕುವುದನ್ನು ಕಂಡ ಮುದುಕನಿಗೆ ರೇಗಿತು.

" ಇದೇನು! ಮೂರ್ಖನಂತೆ ಮಾಡುತ್ತಿರುವೆ? ಕೈಗೆ ಬಂದು ಇನ್ನು ನಾಲ್ಕಾರು ತಿಂಗಳು ಜೀವನವಾಗುವ ಬೆಳೆಯನ್ನು ಉತ್ತು ಹಾಕುತ್ತಿರುವೆ? ಹುಚ್ಚನಾಗಿರುವೆಯೇನು?" ಎಂದು ಮುದುಕನು ಅರ್ಭಟಿಸಿದನು.

" ಅಪ್ಪಾ ! ಬೆಳೆ ಹೋದರೆ ಆದ ನಷ್ಟವೇನು? ನಾವು ಈಗ ಮತ್ತೆ ಉತ್ತು ಬಿತ್ತುತ್ತೇವೆಯಲ್ಲವೇ ! ಇದರಲ್ಲಿ ಬಂದುದನ್ನು ನಾಲ್ಕಾರು ತಿಂಗಳ ಮುಂದೆ ಊಟ ಮಾಡಿದರಾಯ್ತು" ಎಂದು ಹೇಳಿ ಹುಸಿನಗೆ ನಕ್ಕನು.

ಅವನ ನಗೆ ಅಪ್ಪನನ್ನು ಇನ್ನೂ ಕೆರಳಿಸಿತು. " ನೀನು ಏಕೋ ಇಂದು ಮಹಾ ಮೂರ್ಖನಾಗಿರುವೆ. ಬೆಳೆದು ಸಿದ್ಧವಾಗಿರುವ ಬೆಳೆಯನ್ನು ಬಿಟ್ಟು ಮುಂದೆ ಬರುವ ಬೆಳೆಯಲ್ಲಿ ಯಾವ ಭರವಸೆಯನ್ನಿಡುವುದು? ಮುಂದೆ ಬೆಳೆ ಬರುವುದೆಂಬ ಭರವಸೆತಾನೇ ಹೇಗೆ?" ಎಂದು ರೇಗುತ್ತಲೇ ಕೇಳಿದ ಮುದುಕ ರೈತ.

ತನ್ನ ತಂದೆಗೆ ಬುದ್ಧಿ ಕಲಿಸಲು ಇದೇ ಸಮಯವೆಂದರಿತ ಆ ಮಗ "ಅಪ್ಪಾ! ಹಾಗಾದರೆ ನನ್ನನ್ನು ನೀನು ಒಂದುವೇಳೆ ಕೊಂದುಬಿಟ್ಟೆ ಅನ್ನು. ಮುಂದೆ ಮತ್ತೆ ನಿನಗೆ ಮಗ ಹುಟ್ಟುವನೆಂಬ ನಂಬಿಕೆತಾನೇ ಹೇಗೆ? ಅಥವಾ ಹುಟ್ಟಿದರೂ ಯೋಗ್ಯನಾಗಿದ್ದು ನಿನ್ನ ಸೇವೆ ಮಾಡುವನೆಂಬ ಭರವಸೆತಾನೇ ಏನು?" ಎಂದು ಹೇಳಿ ಗಂಭೀರನಾದನು.

ಮಗನ ಮಾತನ್ನು ಕೇಳಿದ ತಂದೆಗೆ ನಾಚಿಕೆಯಾಯಿತು. ತನ್ನ

ಅಜ್ಞಾನಕ್ಕೆ ಮರುಗಿದ. ಕಣ್ಣುಗಳಲ್ಲಿ ನೀರನ್ನು ತುಂಬಿ ಮಗನನ್ನು ಬಾಚಿ ತಬ್ಬಿಕೊಂಡು ಕ್ಷಮೆ ಕೇಳಿದ. ಹೆಂಡತಿಯ ಮೋಹಕ್ಕೆ ಕಟ್ಟು ಬಿದ್ದಿದ್ದ ತನ್ನ ಹೇಡಿತನಕ್ಕೆ ಪಶ್ಚಾತ್ತಾಪಪಟ್ಟು, ಅಂದೇ ಸಮಸ್ತ ಸಂಪತ್ತನ್ನೂ ತನ್ನ ಮಗನಿಗೆ ವಹಿಸಿದ. ಸಂಸಾರವನ್ನು ತ್ಯಜಿಸಿ, ಮುನಿಗಳಲ್ಲಿ ಹೋಗಿ ದೀಕ್ಷೆಯನ್ನು ಪಡೆದು ತಪೋಮಗ್ನನಾದ. ಇದರಿಂದ ಅವನ ಹೆಂಡತಿಗೂ ವೈರಾಗ್ಯವು ಅಂಕುರಿಸಿ, ಕಾಲಕ್ರಮದಲ್ಲಿ ಅವಳೂ ದೀಕ್ಷಾಬದ್ಧಳಾದಳು.

ಶರೀರದಲ್ಲಿ ಪಟುತ್ವವಿರುವಾಗಲೇ ಧರ್ಮಾಚರಣೆಯನ್ನು ಮಾಡಬೇಕೇ ಹೊರತು, ವೃದ್ಧಾಪ್ಯದಲ್ಲಿ ಮಾಡುವೆನೆಂದು ಉದಾಸೀನ ವಹಿಸಬಾರದೆಂಬುದೇ ಈ ಕಥೆಯ ಆಶಯ.

ಅಜ್ಞಾನಿಯ ತಪ್ಪು ಕೆಲಸಗಳಿಗೆ ಅವನ ಅಜ್ಞಾನವೇ ಕಾರಣ.

೧೩

ಒಳ್ಳೆಯವರು ಯಾರು?



ಹಿಂದೆ ಪಾಟಲಿಪುತ್ರವು ಪ್ರಸಿದ್ಧಿಯಾಗಿತ್ತು. ನಾನಾವರ್ಗದ ಜನರಿಂದ ತುಂಬಿ ಸಕಲ ಸಂಪತ್ಸಮೃದ್ಧವಾಗಿ ಆ ನಗರವು ಶೋಭಿಸುತ್ತಿ

ದ್ದಿತು. ಅಲ್ಲಿ ಧನಿಕರಾದ ವರ್ತಕರಲ್ಲಿ "ಸುದತ್ತ' ನೆಂಬ ವಣಜ
ಪ್ರಮುಖನಾಗಿದ್ದ. ಅವನಿಗೆ ಅತ್ಯಂತ ಚಲುವೆಯಾದ ಸುದಾಮೆಯೆಂ
ಮಗಳಿದ್ದಳು. :ಅವಳು ರೂಪಿನಲ್ಲಿ ಚತುರೆಯಾಗಿದ್ದಳು. ಇದರಿಂದ ಅವ
ಎಲ್ಲರಿಗೂ ಅಚ್ಚುಮೆಚ್ಚಾಗಿದ್ದಳು.

ಸುದಾಮೆಯ ಸೋದರಮಾವ ಧನದತ್ತ, ಬಾಲ್ಯದಿಂದಲೂ ಅವ
ಅವಳನ್ನು ಕಂಡರೆ ಅತಿಪ್ರೀತಿ. ದಿನಕ್ಕೊಮ್ಮೆಯಾದರೂ ಅವಳಬ
ಬಂದು ಅವಳ ಮಧುರವಾದ ನುಡಿಗಳನ್ನು ಕೇಳಿ, ಅವಳ ಚಂಚಲಯು
ವಾದ ಕಣ್ಗಳಿಂದ ಕೂಡಿದ್ದ ಸುಂದರ ಮುಖವನ್ನು ನೋಡದಿದ್ದರೆ ಅವ
ತೃಪ್ತಿಯೇ ಆಗುತ್ತಿರಲಿಲ್ಲ. ಅವಳು ಸಹ ತನ್ನ ಸೋದರಮಾವನ ಸಂ
ಅಷ್ಟೇ ಸಲಿಗೆಯಿಂದ ವ್ಯವಹರಿಸುತ್ತಿದ್ದಳು.

ಒಂದು ದಿನ ಸುದಾಮೆ ಗಂಗಾನದಿಗೆ ಸ್ನಾನಕ್ಕಾಗಿ ಹೋದಳು. ಅ
ಸಂಗಡ ಧನದತ್ತನೂ ಹೋಗಿದ್ದ. ಅವಳು ಶೀತಲವಾದ ಗಂಗಾಜಲದ
ಆನಂದದಿಂದ ಮೀಯುತ್ತಿದ್ದಾಗ, ಅನಿರೀಕ್ಷಿತವಾಗಿ ಒಂದು ಮೊಸಳೆಬಂ
ಅವಳನ್ನು ಹಿಡಿದುಕೊಂಡಿತು. ಆಗ ಅವಳು ತನ್ನ ಮಾವನನ್ನು ಕು
"ತನ್ನನ್ನು ಮೊಸಳೆಯಿಂದ ಬಿಡಿಸಬೇಕೆಂದು ಕೂಗಿಕೊಂಡಳು. ಆಗ ಅ
ಅವಳನ್ನು ಕುರಿತು" ನನ್ನ ಒಂದು ಮಾತನ್ನು ನೀನು ನಡೆಸಿಕೊಡುವುದಾ
ತಾನು ಅವಳನ್ನು ಬಿಡಿಸುವುದಾಗಿ ಕೂಗಿ ಹೇಳಿದ. ಪ್ರಾಣರಕ್ಷಣೆಯ
ಯಿಂದ ಅವಳು ಅವನ ಮಾತಿಗೆ ಮರುಮಾತಿಲ್ಲದೆ ಒಪ್ಪಿದಳು. ಅ
ಅವಳನ್ನು ಮೊಸಳೆಯಬಾಯಿನಿಂದ ಬಿಡಿಸಿದನು.

ಈಗ ಅವಳಿಗೆ ಚಿಂತೆಯಾಯಿತು. ಸೋದರಮಾವ ಏನುಕೆ
ವನೋ ಎಂಬ ಚಿಂತೆ ಅವಳ ಮನಸ್ಸಿನಲ್ಲಿ ಹೊಯ್ದಾಡಿತು. ಕೊನೆಗೆ ಅ
"ನೀನು ಏನುಕೇಳುವೆ ಮಾವ ?" ಎಂದು ಕೇಳಿದಳು.

" ಸುದಾಮೇ ! ಬಾಲ್ಯದಿಂದಲೂ ನಿನ್ನನ್ನು ಕಂಡರೆ ನನಗೆ ಬಹುಪ್ರೀ
ಯಿದೆ. ನಿನ್ನನ್ನಂತೂ ನಾನು ವಿವಾಹವಾಗಲು ಸಾಧ್ಯವಿಲ್ಲ. ಆದುದ
ನಿನಗೆ ಯೌವನವು ಪ್ರಾಪ್ತವಾದನಂತರ. ನಿನ್ನ ಮದುವೆಯದಿನ ನನ್ನ
ಬಂದು ನಿನ್ನ ಶೃಂಗಾರ ಚಾತುರ್ಯದಿಂದ ನನ್ನನ್ನು ಆನಂದಪಡಿಸಬೇ
ಎಂದು ಕೇಳಿದನು.

ಸುದಾಮೆಗೆ ಚಿಂತೆಗಿಟ್ಟುಕೊಂಡಿತು. ಮಾತನ್ನು ಕೊಟ್ಟಂತೂ ಬಿತು. ನಡೆಸದಿದ್ದರೆ ಪಾಪಸಂಘಟನೆಯಾಗುತ್ತದೆ. ಹೀಗೆ ಬಹು ಹೊಯುದವರೆಗೆ ಚಿಂತಿಸಿ ಕೊನೆಗೆ ಸಮ್ಮತಿಸಿದಳು. ಅವನೂ ಸಂತೋಷ ಗೊಂಡು ಹೊರಟು ಹೋದ.

ಕಾಲಕ್ರಮದಲ್ಲಿ ಸುದಾಮೆ ಋತುಮತಿಯಾದಳು. ಅವಳ ಶರೀರವು ಯೌವನದ ಚಿಹ್ನೆಗಳಿಂದ ಬೆಳಗಿತು. ಮುಖಮಂಡಲದಲ್ಲಿ ಕಾಂತಿಯು ತುಂಬಿತು. ಅವಳ ಯೌವನವನ್ನು ಕಂಡು ಸುದತ್ತನು ಒಬ್ಬ ಯೋಗ್ಯ ದ ವರನಿಗೆ ಅವಳನ್ನು ಕೊಟ್ಟು ಮದುವೆಮಾಡುವ ಏರ್ಪಾಡು ಮಾಡಿದನು.

ಮದುವೆಯ ಹಿಂದಿನದಿನ ಸುದಾಮೆಯನ್ನು ರತ್ನಖಚಿತವಾದ ಆಭರ ಣಾದಿಗಳಿಂದ ಅಲಂಕರಿಸಿದರು. ಅವಳುಮಾತ್ರ ತಾನುಕೊಟ್ಟ ಮಾತನ್ನು ಹೇಗೆ ನಡೆಸುವುದೆಂದು ಚಿಂತಾಕ್ರಾಂತಳಾಗಿದ್ದಳು. ಎಷ್ಟೇ ಕಷ್ಟ ಬರಲಿ. ಕೊಡಿದ ಮಾತನ್ನು ನಡೆಸೇತೀರಬೇಕೆಂಬ ದೃಢ ಸಿದ್ಧಾಂತ ಅವಳ ಮನಸ್ಸಿ ನಲ್ಲಿ ನೆಲಸಿಹೋಗಿತ್ತು. ಆದಿನ ರಾತ್ರಿ ಎಲ್ಲರೂ ನಿದ್ರೆ ಹೋದನಂತರ ಮಧ್ಯರಾತ್ರಿಯಲ್ಲಿ ಅವಳು ತನ್ನ ಸರ್ವಾಲಂಕಾರದೊಂದಿಗೆ ಪೇಟೆಯಲ್ಲಿದ್ದ ಸೋದರಮಾವನ ಮನೆಗೆ ನಡೆದಳು.

ದಾರಿಯಲ್ಲಿ ಒಬ್ಬ ಕಳ್ಳ ಎದುರುಬಿದ್ದ. ಸುಂದರಿಯಾದ ಹೆಂಗಸು, ಸಕಲ ಆಭರಣಗಳಿಂದ ಅಲಂಕೃತಳಾಗಿ ಹೋಗುತ್ತಿದ್ದುದು ಕಂಡು ಅವನ ಬಾಯಿಯಲ್ಲಿ ನೀರು ಬಂದಿತು. ಏಕಾಕಿಯಾಗಿ ಅವಳು ಹೋಗುತ್ತಿರು ವುದರಿಂದ ಅವಳ ಆಭರಣಗಳನ್ನು ಕದಿಯುವುದಕ್ಕೆ ಅಡ್ಡಿಯೇನಿಲ್ಲವೆಂದು ಯೋಚಿಸಿ “ಎಲೌ ಹೆಂಗಸೇ ! ಒಳ್ಳೆಯ ಮಾತಿನಲ್ಲಿ ನೀನು ಧರಿಸಿರುವ ಒಡವೆಗಳನ್ನು ಕೊಟ್ಟುಹೋಗು. ಇಲ್ಲದಿದ್ದರೆ ನಿನ್ನನ್ನು ಕೊಂದು ತೆಗೆದು ಕೊಂಡು ಹೋಗುತ್ತೇನೆ” ಎಂದು ಗದರಿಸಿದನು.

ಅದಕ್ಕೆ ಅವಳು “ಅಣ್ಣಾ! ನಿನಗೆ ಒಡವೆಗಳುತಾನೇ ಬೇಕಾಗಿರು ವುದು. ನಾನು ಕೊಟ್ಟಿರುವ ಒಂದು ಮಾತನ್ನು ನಡೆಸಿಕೊಡಲು ಹೋಗು ತ್ತಿದ್ದೇನೆ. ನನ್ನ ವಚನವು ತೀರಿದನಂತರ ಹಿಂದಕ್ಕೆ ಬರುವಾಗ ನನ್ನ

ಆಭರಣಗಳನ್ನೆಲ್ಲಾ ಕಳಚಿಕೊಡುವೆ. ಅಲ್ಲಿಯವರೆಗೆ ಅವಕಾಶಕೊಡು" ಎಂದು ಹೇಳಿದಳು.

ನಿಷ್ಕಪಟವಾದ ಸುದಾಮೆಯ ಮಾತನ್ನು ಕೇಳಿದ ಚೋರನಿಗೆ ಅವಳ ಮಾತಿನಲ್ಲಿ ನಂಬಿಕೆಯಾಯಿತು. ಹಾಗೇ ಆಗಲಿ. ನೀನು ಬರುವವರೆಗೆ ನಾನು ಕಾದಿರುವೆ." ಎಂದು ಹೇಳಿ ಅವಳನ್ನು ಬಿಟ್ಟನು. ಆದರೂ ಅವಳು ಎಲ್ಲಿಗೆ ಹೋಗುವಳೋ·ನೋಡಬೇಕೆಂಬ ಕುತೂಹಲದಿಂದ ಅವಳನ್ನು ಅವಳಿಗೆ ಅರಿವಾಗದಂತೆ ಅವಳ ಹಿಂದೆಯೇ ನಡೆದನು.

ಮುಂದೆ ಹೋಗುತ್ತಿದ್ದ ಅವಳಿಗೆ ಒಬ್ಬ ಬ್ರಹ್ಮರಾಕ್ಷಸನು ಎದುರಾದನು. ಅವಳನ್ನು ತಿನ್ನಬೇಕೆಂದು ಅವನಿಗೆ ಆಶೆಯಾಯಿತು. ಅಗಲವಾಗಿ ಬಾಯ್ದೆರೆದು ಅಬ್ಬರಿಸುತ್ತ ಅವನು ಹಿಡಿಯಲು ಬಂದನು. ಆಗ ಅವಳು ಧೈರ್ಯವಾಗಿ ಆ ರಾಕ್ಷಸನನ್ನು ಕುರಿತು ಹೇಳಿದಳು.

" ಅಣ್ಣಾ! ನೀನು ನನ್ನನ್ನು ತಿನ್ನಬೇಕಾಗಿದ್ದರೆ ತಿನ್ನುವೆಯಂತೆ. ಆದರೆ ಈಗ ನನ್ನ ಮಾತನ್ನು ಪೂರೈಸಲು ತೆರಳುತ್ತಿದ್ದೇನೆ. ನನ್ನ ಕೆಲಸ ಮುಗಿದ ಕೂಡಲೇ ಹಿಂತಿರುಗಿ ಬರುವೆ. ಆಗ ಬೇಕಾದ ಹಾಗೆಮಾಡು. ಅಲ್ಲಿಯವರೆಗೆ ಅವಕಾಶಕೊಡು" ಎಂದು ಬೇಡಿದಳು. ರಾಕ್ಷಸನೂ ಅವಳ ಮಾತಿಗೆ ಒಪ್ಪಿದನು. ಆದರೆ ಅವಳನ್ನು ಹಿಂಬಾಲಿಸಿಕೊಂಡು ಹೋಗುವುದನ್ನು ಮಾತ್ರ ಅವನೂ ಮರೆಯಲಿಲ್ಲ.

ಸುದಾಮೆಯ ಸೋದರಮಾವ 'ಧನದತ್ತ' ನಿಶ್ಚಿಂತನಾಗಿ ಮಲಗಿ ನಿದ್ರಿಸುತ್ತಿದ್ದ. ಅವನು ಸುದಾಮೆಯಿಂದ ಪಡೆದಿದ್ದ ಮಾತನ್ನು ಮರತೇ ಇದ್ದ. ಅರ್ಧರಾತ್ರಿಯಲ್ಲಿ ಅನಿರೀಕ್ಷಿತವಾಗಿ ಸುದಾಮೆ ಬಂದು ಮನೆಬಾಗಿಲನ್ನು ತಟ್ಟಿದಾಗ ಅವನಿಗೆ ಯಾರಿರಬಹುದೆಂದು ಆಶ್ಚರ್ಯವಾಯಿತು. ಬಾಗಿಲು ತೆರೆದನಂತರ ಅವನು ತನ್ನ ಕಣ್ಣುಗಳನ್ನೇ ನಂಬಲಾರದಾದ. ಸರ್ವಾಲಂಕಾರ ಭೂಷಿತೆಯಾಗಿ, ಯೌವನದಿಂದ ಪರಿಪುಷ್ಟವಾಗಿದ್ದ ಶರೀರದಿಂದ ಶೋಭಿಸುತ್ತಿದ್ದ ತನ್ನ ಸೋದರಸೊಸೆಯನ್ನು ಕೆಲಕಾಲದವರೆಗೆ, ಎವೆಯಿಕ್ಕದೆ ಸ್ತಂಭಿತನಾಗಿ ನೋಡಿದ. ಅನಂತರ ವಿಸ್ಮಿತನಾಗಿ ಕೇಳಿದ.

ಈ ಅಪರರಾತ್ರಿಯಲ್ಲಿ ನೀನು ಒಬ್ಬಳೇ ಏಕೆ ಬಂದೆ?"

"ನಾಳೆ ನನ್ನ ಮದುವೆಯಲ್ಲವೇ ಮಾವ!"

"ಆದರೆ ನೀನಿಲ್ಲಿಗೆ ಬರುವ ಆವಶ್ಯಕವೇನಿತ್ತು?"

"ನನ್ನನ್ನು ಮೊಸಳೆಯ ಬಾಯಿಯಿಂದ ನೀವು ಬಿಡಿಸಿದಾಗ ನಿಮಗೆ ಕೊಟ್ಟಿದ್ದ ಮಾತನ್ನು ನಡೆಸಬೇಡವೇ?"

ಆಗ ಅವನಿಗೆ ನೆನಪಿಗೆ ಬಂದಿತು. ತುಂಬಿದ ಹೃದಯದಿಂದ ಹೇಳಿದ.

"ಸುದಾಮಾ ನಿಜಕ್ಕೂ ನೀನು ಅತಿ ಚೆಲುವೆ. ನಿನ್ನ ರೂಪು ದೇವ ಸ್ತ್ರೀಯರಿಗೂ ಇಲ್ಲ. ನಿನ್ನ ಸೌಂದರ್ಯವನ್ನು ನೋಡಲು ನನ್ನ ಎರಡು ಕಣ್ಣುಗಳೂ ಸಾಲವು."

ಎಂದು ಹೇಳಿದವನೇ ಸ್ವಲ್ಪ ಹೊತ್ತು ಮೌನವಾಗಿದ್ದು,

"ನೀನು ಎಷ್ಟಾದರೂ ಸತ್ಯವತಿ. ನುಡಿದಂತೆ ತಪ್ಪದೆ ನಡೆದಿರುವೆ. ನಿನ್ನಂತಹ ಸತ್ಯಶಾಲಿಯನ್ನು ನಾನು ಸ್ಪರ್ಶಿಸಬಾರದು. ನನ್ನಮಾತು ನನಗೆ ಸಂದಿದೆ. ಈಗ ನೀನು ಹೋಗು" ಎಂದವನೇ ಅವಳನ್ನು ಗೌರವದಿಂದ ಕಳುಹಿಸಿಕೊಟ್ಟ.

ಅವಳನ್ನೇ ಹಿಂಬಾಲಿಸಿಕೊಂಡು ಬಂದಿದ್ದವರೆಲ್ಲರೂ ಅವಳ ಮಾತುಗಳನ್ನು ಕೇಳಿ ಅವಳ ಸತ್ಯಸಂಧತೆಗೆ ಮೆಚ್ಚಿ, ಅವಳಿಗೆ ಕಾಣದಂತೆ ಯಥಾಪ್ರಕಾರ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ನಿಂತರು.

ಸುದಾಮೆ ಬ್ರಹ್ಮರಾಕ್ಷಸನ ಬಳಿಗೆ ಬಂದು ತನ್ನನ್ನು ತಿನ್ನುವಂತೆ ಹೇಳಿದಳು. ಆಗ ಅವನು "ನೀನು ಮಹಾ ಸತ್ಯವತಿ, ನುಡಿದಂತೆ ನಡೆಯ ತಕ್ಕ ಪರಮಸಾಧ್ವಿ. ನಿನ್ನಂತಹವಳನ್ನು ತಿಂದು ನಾನು ನರಕಕ್ಕೆ ಹೋಗ ಲಾರೆ. ನಿನ್ನ ಇಚ್ಛೆ ಬಂದಲ್ಲಿಗೆ ಹೋಗು" ಎಂದು ಕಳುಹಿಸಿಕೊಟ್ಟನು.

ತಳವಾರನಬಳಿಗೂ ಬಂದು ಹಾಗೆಯೇ ನುಡಿದಳು. ಅವನು ಅವಳನ್ನು ಕುರಿತು "ನಿನ್ನನ್ನು ಕೇವಲ ಹೆಂಗಸೆಂದು ತಿಳಿದಿದ್ದೆ. ನಿನ್ನಂತಹ ಸತ್ಯವತಿಯರ ಸಂದರ್ಶನದಿಂದಲೇ ನನಗೆ ಪರಮ ಪುಣ್ಯ ಬಂದಿದೆ. ನಿನ್ನಿಷ್ಟ ದಂತೆ ನೀನು ಹೋಗಬಹುದು" ಎಂದು ಹೇಳಿ ಅವನು ಸಹ ಕಳುಹಿಸಿ ಕೊಟ್ಟನು.

ಕಳ್ಳನೂ ಸಹ ಅವಳನ್ನು ಕುರಿತು "ನಿನ್ನ ಆಭರಣದಿಂದ ನಾನು

ಜೀವಮಾನ ಪೂರ್ಣಲಾಭಹೊಂದುವುದಿಲ್ಲ. ನೀನು ಸತ್ಯಸಂಧೆ. ನಿನ್ನ ಒಡ
ಗಳನ್ನು ನಾನು ಮುಟ್ಟಿದರೆ ಘೋರ ನರಕಕ್ಕೆ ಹೋಗುವೆ" ಎಂದು ಹೇ
ಅವನೂ ಗೌರವದಿಂದ ಅವಳನ್ನು ಕಳುಹಿಸಿಕೊಟ್ಟನು.

ಇವರಲ್ಲಿ ಸುದಾಮೆ ಒಳ್ಳೆಯವಳೇ?, ಧನದತ್ತ ಒಳ್ಳೆಯವನೇ?
ಕಳ್ಳ ಒಳ್ಳೆಯವನೇ?, ತಳವಾರ ಒಳ್ಳೆಯವನೇ?, ಅಥವಾ ಬ್ರಹ್ಮರಾಕ್ಷಸ
ಒಳ್ಳೆಯವನೇ? ಯಾರು ಒಳ್ಳೆಯವರು ಎಂಬುದನ್ನು ಈ ಕಥೆಯನ್ನು
ಓದುತ್ತಿರುವ ಸಜ್ಜನರೇ ನಿರ್ಣಯಿಸಲಿ.

ನಿಜ ಹೇಳುವವರಿಗೆ ತೊಂದರೆ ಇರುವುದಿಲ್ಲ.

೧೪

ಅಪಕಾರ-ಉಪಕಾರ



ಸೋಮಶರ್ಮನು ಮಹಾ ಬುದ್ಧಿಶಾಲಿ. ಇದರಿಂದಾಗಿ ಅವನಿಗೆ ಕೌಸಂಬಿಯ ಮಂತ್ರಿಪದವಿ ದೊರಕಿತ್ತು. ಕಾಶ್ಯಪಿ ಅವನ ಹೆಂಡತಿ.

ಇವರಿಗೆ ಇಬ್ಬರು ಗಂಡುಮಕ್ಕಳು. ಅಗ್ನಿಭೂತಿ ಮತ್ತು ವಾಯುಭೂ
ಈ ಮಕ್ಕಳಿಬ್ಬರೂ ಯೋಗ್ಯರಾಗಿರಲಿಲ್ಲ. ವೇದಾಧ್ಯಯನವನ್ನು ಮಾಡಲಿ
ತಂದೆ ತಾಯಿಗಳ ಮಾತನ್ನು ಕೇಳುತ್ತಿರಲಿಲ್ಲ. ಗುರುಹಿರಿಯರಿಗೆ ವಿಧೇ
ರಾಗಿರಲಿಲ್ಲ. ನಾನಾ ದುರ್ಮಾರ್ಗಗಳಲ್ಲಿ ಹಣವನ್ನು ಮನಬಂದಂತೆ ವೆ
ಮಾಡುತ್ತಿದ್ದರು. ಇವರನ್ನು ತಿದ್ದಲು ಹಲವಾರು ಮಾರ್ಗಗಳಲ್ಲಿ ಪ್ರ
ತ್ನಿಸಿ ಸೋಮಶರ್ಮನು ವಿಫಲನಾಗಿ ನಿರಾಶನಾಗಿದ್ದನು.

ಆಯುಷ್ಯ ಮುಗಿದಕೂಡಲೇ ಸೋಮಶರ್ಮ ಸತ್ತುಹೋದನ
ಮಕ್ಕಳಿಬ್ಬರು ದಡ್ಡರೂ, ದುಷ್ಟರೂ ಆಗಿದ್ದುದರಿಂದ ಅವರಿಗೆ ತಂದೆ
ಮಂತ್ರಿಪದವಿ ದೊರಕಲಿಲ್ಲ. ಆಗ ಅವರಿಗೆ ತಾವು ವಿದ್ಯಾವಂತರಾಗ
ಕೆಂಬ ಬುದ್ಧಿ ಹುಟ್ಟಿತು. ಆದರೆ ವಿಧವೆಯಾದ ತಾಯಿ ಏನು ಮಾ
ಯಾಳು? "ಕೆಟ್ಟಮೇಲೆ ಬುದ್ಧಿಬಂತು; ಅಟ್ಟಮೇಲೆ ಒಲೆ ಉರಿಯಿತ
ಅನ್ನುವಂತಿತ್ತು ಅವರ ಸ್ಥಿತಿ.

ಈ ವಿಚಾರದಲ್ಲಿ ಬಹುವಾಗಿ ಚಿಂತಿಸಿದ ಕಾಶ್ಯಪಿ ಒಂದು ನಿರ್ಧಾರ
ಬಂದಳು. ಮಕ್ಕಳನ್ನು ಕುರಿತು "ಮಕ್ಕಳೇ! ಚಿಂತಿಸಬೇಡಿರಿ. ರಾ
ಗೃಹ ನಗರದಲ್ಲಿ ನಿಮ್ಮ ಸೋದರಮಾವನಾದ ಸೂರ್ಯಮಿತ್ರನಿದ್ದಾ
ಆತನು ಅಲ್ಲಿ ಬುದ್ಧಿವಂತನಾಗಿ, ಆ ರಾಜ್ಯದ ಮಂತ್ರಿಯಾಗಿದ್ದಾ
ತಂದೆಯನಂತರ, ಅವನ ಸ್ಥಾನದಲ್ಲಿ ಸೋದರಮಾವನೇ ನಿಲ್ಲತಕ್ಕವ
ತಂಗಿಯ ಮಕ್ಕಳೆಂದು ಅವನು ನಿಮಗೆ ಅನುಕೂಲ ಮಾಡಿಕೊಡುವ
ನೀವು ಅವನಲ್ಲಿದ್ದು ವಿದ್ಯಾಬುದ್ಧಿಗಳನ್ನು ಕಲಿತು ಬನ್ನಿ ಎಂದು ಹೇ
ತನ್ನ ಅಣ್ಣನಿಗೆ ಒಂದು ಪತ್ರವನ್ನು ಬರೆದುಕೊಟ್ಟು ಮಕ್ಕಳ
ಕಳುಹಿಸಿದಳು.

ಅಗ್ನಿಭೂತಿ ಮತ್ತು ವಾಯುಭೂತಿಯರು ಹಲವಾರು ದಿನಗ
ನಡೆದು ರಾಜಗೃಹ ನಗರವನ್ನು ಸೇರಿದರು. ಸೋದರಮಾವನ
ಸೂರ್ಯಮಿತ್ರನನ್ನು ಕಂಡು ತಮ್ಮ ತಾಯಿ ಬರೆದು ಕಳುಹಿಸಿದ
ವನ್ನು ಕೊಟ್ಟರು, ಆ ಕಾಗದದಿಂದ ತನ್ನ ತಂಗಿಗೆ ವೈಧವ್ಯ ಪ್ರಾಪ್ತಿಯಾ
ದನ್ನೂ, ತಂಗಿಯ ಮಕ್ಕಳಾದ ಇವರಿಬ್ಬರೂ ಅವಿದ್ಯಾವಂತರಾಗಿ ಪೋ

ಾಗಿರುವುದನ್ನು ತಿಳಿದನು. ತಂಗಿಯ ದುರ್ದಶೆಗೆ ಮರುಗಿದನು. ಇವರನ್ನು ನ್ನ ಮನೆಯಲ್ಲೇ ಇಟ್ಟು ಪ್ರೀತಿಯಿಂದ ನೋಡಿಕೊಂಡರೆ ಮೊದಲಿ ಂತೆಯೇ ನಡತೆಗೆಡುವರೆಂದು ಆಲೋಚಿಸಿ ಕಠೋರವಾಗಿ ಹೇಳಿದನು.

"ನೀವು ನನ್ನ ತಂಗಿಯ ಮಕ್ಕಳಲ್ಲ. ಸೂರ್ಯಮಿತ್ರ ಎಂಬ ನನ್ನ ೆಸರಿನವರು ಎಷ್ಟೋ ಜನರಿರಬಹುದು. ನಿಮ್ಮ ಸೋದರಮಾವ ಬೇರೆ ರಬಹುದು" ಎಂದನು.

ಅವನ ಮಾತನ್ನು ಕೇಳಿ ಅಣ್ಣತಮ್ಮಂದಿರು ಅವಾಕ್ಕಾದರು. ಅವರಿಗೆ ಹಳ ಚಿಂತೆ ಹತ್ತಿತು. ತಮ್ಮ ತಂದೆಯಿದ್ದಾಗಲೇ ಸರಿಯಾಗಿ ವಿದ್ಯಾ ುದ್ಧಿಗಳನ್ನು ಕಲಿಯದೆ, ಜೀವನವನ್ನು ವ್ಯರ್ಥಮಾಡಿಕೊಂಡೆವಲ್ಲ" ಂದು ಚಿಂತಿಸುತ್ತ ಸಪ್ಪೆ ಮುಖದಿಂದ ಹೊರಡಲನುವಾದರು.

ಇದನ್ನು ಗಮನಿಸಿದ ಸೂರ್ಯಮಿತ್ರ "ಹೋಗಲಿ, ನೀವು ಯಾರಾದ ೇನು? ವಿದ್ಯೆಯನ್ನು ಯಾಚಿಸಲು ನನ್ನಬಳಿ ಬಂದಿರುವಿರಿ. ಭಿಕ್ಷೆ ಾಡಿ ನಿಮ್ಮ ಆಹಾರವನ್ನು ಅರಸಿಕೊಳ್ಳಿರಿ. ನಾನು ನಿಮಗೆ ವಿದ್ಯೆಯನ್ನು ೇಳಿಕೊಡುತ್ತೇನೆ" ಎಂದು ಹೇಳಿದನು. ವಿಧಿಯಿಲ್ಲದೆ ಅವರು ಹಾಗೇ ಾಡಿದರು.

ಸೂರ್ಯಮಿತ್ರನೇ ಅವರಿಬ್ಬರಿಗೂ ವಿದ್ಯೆಯನ್ನು ಹೇಳಿಕೊಟ್ಟು ಕಲಶಾಸ್ತ್ರ ಪಾರಂಗತರನ್ನಾಗಿ ಮಾಡಿದನು. ಇಬ್ಬರೂ ವಿದ್ಯಾವಂತರಾದ ಂತರ ಪುನಃ ತಮ್ಮ ಊರಿಗೆ ಹೊರಡುವಾಗ ಸೂರ್ಯಮಿತ್ರನಲ್ಲಿಗೆ ಬಂದು ಮಸ್ಕರಿಸಿ ತಾವು ಊರಿಗೆ ಹೋಗುವುದಾಗಿ ತಿಳಿಸಿದರು.

ಆಗ ಸೂರ್ಯಮಿತ್ರ, ಮಕ್ಕಳೇ, ನೀವು ನಿಜವಾಗಿಯೂ ನನ್ನ ಂಗಿಯ ಮಕ್ಕಳು. ನಿಮಗೆ ಹೆಚ್ಚು ಸಲಿಗೆಯನ್ನು ಕೊಟ್ಟರೆ ಓದುವುದಿಲ್ಲ ಂದು ನಾನು ಇದುವರಿಗೆ ನಿಮ್ಮನ್ನು ದೂರವಿಟ್ಟೆನು. ಅದಕ್ಕಾಗಿ ನನ್ನ ಚಾರದಲ್ಲಿ ಏನೂ ತಿಳಿದುಕೊಳ್ಳಬೇಡಿರಿ. ಈದಿನ ನನ್ನ ಮನೆಯ ಔತಣ ನ್ನು ಮಾಡಿಹೊರಡಿರಿ" ಎಂದು ಹೇಳಿ ಅವರನ್ನು ನಾನಾಬಗೆಯ ಕ್ಷ್ಯ ಭೋಜ್ಯಗಳಿಂದ ತೃಪ್ತಿಪಡಿಸಿ ಕಳುಹಿಸಿಕೊಟ್ಟನು.

ಅವರಿಬ್ಬರೂ ಕೌಸಂಬಿನಗರಕ್ಕೆ ಮರಳಿದರು. ತಮ್ಮ ತಾಯಿಯನ್ನು

ಕಂಡು ಅವಳ ಪಾದಗಳಿಗೆ ವಂದಿಸಿದರು. ಮಕ್ಕಳಿಬ್ಬರೂ ವಿದ್ಯಾಬುದ್ಧಿ ಸಂಪನ್ನರಾಗಿ ಬಂದುದನ್ನು ಕಂಡು, ಆನಂದದಿಂದ ಕಣ್ಣೀರನ್ನಮಿಡಿದು "ನೋಡಿದಿರಾ! ಮಕ್ಕಳೇ! ಎಷ್ಟಾದರೂ ನನ್ನ ಅಣ್ಣನಲ್ಲವೇ! ದಾರಿ ಬಿಟ್ಟು ಹಾಳಾಗುತ್ತಿದ್ದ ನಿಮ್ಮನ್ನು ದಾರಿಗೆ ತಂದು ಉದ್ಧಾರ ಮಾಡಿದನು" ಎಂದಳು. ಅದಕ್ಕೆ ಅಗ್ನಿಭೂತಿ "ಹೌದಮ್ಮಾ! ನಮ್ಮ ಮಾವನಿಂದಲೇ ನಾವು ಉದ್ಧಾರವಾದವು. ಅವರಿಗೆ ನಾವು ನಿರಂತರವಾಗಿ ಕೃತಜ್ಞರಾಗಿರ ಬೇಕು" ಎಂದನು

ಆದರೆ ತಮ್ಮನಾದ ವಾಯುಭೂತಿ ಆ ಮಾತನ್ನು ಒಪ್ಪಲಿಲ್ಲ.

"ಮಾವನೇನು ಮಾಡಿದ್ದು ? ಒಂದುದಿನವಾದರೂ ಪ್ರೀತಿಯಿಂದ ಮನೆಯಲ್ಲಿ ಅನ್ನ ಹಾಕಲಿ. ನಾವು ಭಿಕ್ಷೆಮಾಡಿ ಊಟ ಮಾಡುತ್ತಿದ್ದೆವಲ್ಲ ಮನೆಯ ಮುಂದಿನ ಕೈಸಾಲೆಯಲ್ಲಿ ಮಲಗುತ್ತಿದ್ದೆವು. ಅವನು ತನ್ನಹೆಂಡತಿ ನೆಂಟರೊಡನೆ ಮೃಷ್ಟಾನ್ನಭೋಜನ ಮಾಡುತ್ತಿದ್ದರೂ, ನಮ್ಮನ್ನು ಒಂದುಸಾರಿಯಾದರೂ ಕರೆದು ಊಟಕ್ಕೆ ಇಡಲಿಲ್ಲ. ನಮ್ಮನ್ನು ಶತ್ರುಗಳಂತೆ ಕಾಣುತ್ತಿದ್ದ ನಾವು ಕಷ್ಟಪಟ್ಟು ಓದಿದೆವು, ವಿದ್ಯಾವಂತರಾದೆವು. ಅದರಲ್ಲಿ ಅವನ ಉಪಕಾರವೇನಿದೆ?" ಎಂದು ಸೋದರಮಾವನನ್ನು ನಿಂದಿಸಿ ನುಡಿದನು.

ಕಿರಿಯಮಗನ ಮಾತನ್ನು ಕೇಳಿ ತಾಯಿಗೆ ಬಹು ದುಃಖವಾಯಿತು. ಮಗನ ನಡತೆ ಅವಳಿಗೆ ಸರಿಬೀಳಲಿಲ್ಲ. ಉಪಕಾರಮಾಡಿದವರನ್ನ ನಿಂದಿಸ ಬಾರದೆಂದು ಎಷ್ಟೋಪರಿಯಲ್ಲಿ ಹೇಳಿದಳು. ಆದರೂ ವಾಯುಭೂತಿ ತನ್ನ ಸೋದರಮಾವನಮೇಲೆ ದ್ವೇಷವನ್ನು ಸಾಧಿಸುತ್ತಲೇ ಇದ್ದ.

ಅಗ್ನಿಭೂತಿ ಮಾತ್ರ ತನ್ನ ಸೋದರಮಾವನಲ್ಲಿ ಗೌರವವನ್ನು ತೋರಿಸುತ್ತಾ ಕೃತಜ್ಞತೆಯಿಂದ ಇದ್ದ. ಕಾಲಕ್ರಮದಲ್ಲಿ ಇಬ್ಬರೂ ರಾಜ್ಯದ ಉನ್ನತಪದವಿಗಳಿಗೇರಿ ಹೇರಳವಾಗಿ ಹಣವನ್ನು ಸಂಪಾದಿಸುತ್ತಾ ಸುಖದಿಂದ ಇದ್ದರು.

ಇತ್ತ ಸೂರ್ಯಮಿತ್ರನಿಗೆ ಸಂಸಾರದ ಸ್ಥಿರತೆಯನ್ನು ಮನಗಂಡು ವೈರಾಗ್ಯವು ಬಂದಿತು. ಸುಧರ್ಮಾಚಾರ್ಯರೆಂಬ ಮುನಿಗಳಲ್ಲಿ ದೀಕ್ಷೆ

ಯನ್ನು ಕೈಗೊಂಡು ತಪಸ್ಸನ್ನು ಮಾಡತೊಡಗಿದ. ಕಾಲಕ್ರಮದಲ್ಲಿ ತನ್ನ ದಿವ್ಯ ತಪಸ್ಸಿನ ಪರಿಣಾಮದಿಂದ ಮುನಿಯಾಗಿ ವಿಹರಿಸತೊಡಗಿದನು. ಏಕವಿಹಾರಿಯಾಗಿ ಗ್ರಾಮದಲ್ಲಿ ಒಂದುರಾತ್ರಿ, ನಗರದಲ್ಲಿ ಐದುರಾತ್ರಿ, ಕಾಡಿನಲ್ಲಿ ಹತ್ತುರಾತ್ರಿ – ಈ ರೀತಿಯಲ್ಲಿ ಅರ್ಹದ್ಧರ್ಮಾನುಸಾರವಾದ ನಿಯಮಗಳನ್ನೂ ಪಾಲಿಸುತ್ತಾ ತಪಸ್ಸನ್ನು ಮಾಡುತ್ತಿದ್ದನು. ಹೀಗೆ ವಿಹರಿಸುತ್ತಾ ಕೌಸಂಬಿ ನಗರಕ್ಕೆ ಬಂದನು.

ಭಿಕ್ಷೆಗಾಗಿ ನಗರಕ್ಕೆ ಹೊಕ್ಕ ಸೂರ್ಯಮಿತ್ರ ಮುನಿಗಳು ಅಗ್ನಿಭೂತಿಯ ಮನೆಯನ್ನು ಪ್ರವೇಶಿಸಿದರು. ಅಗ್ನಿಮಿತ್ರನು ಅವರನ್ನು ಕಂಡ ಕೊಡಲೇ ವಿನಯದಿಂದ ಸತ್ಕರಿಸಿ ಉಪಚರಿಸಿದನು. ಅವನ ಉಪಚಾರವನ್ನು ಕೈಗೊಂಡು ಅವರು ಅವನಿಗೆ ಆಶೀರ್ವಾದವನ್ನುಮಾಡಿ ಮುಂದಕ್ಕೆ ಹೊರಡಲನುವಾದರು. ಆಗ ಅಗ್ನಿಭೂತಿಯು "ಸ್ವಾಮಿ ನನ್ನ ತಮ್ಮ ವಾಯುಭೂತಿಯನ್ನು ತಾವು ಹರಸುವುದಿಲ್ಲವೇ? ಅವನು ಸಹ ತಮ್ಮ ಪೂರ್ವಾಶ್ರಮದ ಸೋದರಳಿಯನಲ್ಲವೇ? ದಯವಿಟ್ಟು ಅವನ ಮನೆಗೂ ಹೋಗಿ ಅವನನ್ನು ಸಹ ನನಗೆ ಹರಸಿದಂತೆಯೇ ಹರಸಬೇಕು" ಎಂದು ಬೇಡಿಕೊಂಡು ತನ್ನ ತಮ್ಮನ ಮನೆಗೆ ಕರೆದುಕೊಂಡು ಹೋದನು.

ಸೂರ್ಯಮಿತ್ರ ಮುನಿ ಅಗ್ನಿಭೂತಿಯೊಡನೆ ವಾಯುಭೂತಿಯ ಮನೆಯನ್ನು ಹೊಕ್ಕಾಗ ಅವನು ಎತ್ತರವಾದ ಪೀಠದಲ್ಲಿ ಕುಳಿತಿದ್ದನು. ಮುನಿಯಾಗಿದ್ದ ಅವನ ಸೋದರಮಾವನನ್ನು ಕಂಡು ಅವನ ಕೋಪ ಪ್ರಜ್ವಲಿಸಿತು ಮೇಲಕ್ಕೆದ್ದು ಗೌರವಿಸದೆ ಹಾಗೆಯೇ ಕುಳಿತಿದ್ದ ತನ್ನ ತಮ್ಮನನ್ನು ಕುರಿತು ಅಗ್ನಿಭೂತಿ ಹೇಳಿದನು.

"ವಾಯುಭೂತಿ! ಬಂದಿರುವವರನ್ನು ಗುರುತಿಸಲಿಲ್ಲವೇ? ನಮ್ಮ ಸೋದರಮಾವಂದಿರಲ್ಲವೇ? ಈಗ ಮುನಿಗಳಾಗಿದ್ದಾರೆ. ನಿನ್ನನ್ನು ಆಶೀರ್ವದಿಸಲೋಸುಗ ಕರೆತಂದಿದ್ದೇನೆ. ಬಂದು ನಮಸ್ಕರಿಸು" ವಾಯುಭೂತಿ ಕನಲಿ ನುಡಿದನು.

"ಅಣ್ಣಾ! ನೀನು ಈತನಿಗೆ ಗೌರವ ಕೊಡಬಹುದೇ? ಈತನು ನಮ್ಮ ಸೋದರ ಮಾವನೇನು? ನಮ್ಮ ವಿದ್ಯಾಭ್ಯಾಸಕಾಲದಲ್ಲಿ ನಮ್ಮನ್ನು ಪ್ರೀ

ಯಿಂದ ಕಾಣುತ್ತಿದ್ದನೇ? ಮನೆಮನೆಗಳಲ್ಲಿ ನಮ್ಮಿಂದ ಭಿಕ್ಷೆಯಿತ್ತಿ ಲಿಲ್ಲವೇ? ನಮ್ಮನ್ನು ಎಷ್ಟು ತಿರಸ್ಕಾರದಿಂದ ಕಾಣುತ್ತಿದ್ದನೆಂಬುದನ ಮರೆತುಬಿಟ್ಟೆಯಾ? ನಾನಂತೂ ಮರೆಯಲಿಲ್ಲ. ಈ ನೀಚನನ ಮೊದಲು ಮನೆಯಿಂದ ಆಚೆಗೆತಳ್ಳು."

ತಮ್ಮನ ವರ್ತನೆಯನ್ನೂ ಕಂಡು ಅಗ್ನಿಭೂತಿಯ ಮನಸ್ಸಿಗೆ ಬಹ ವೇದನೆಯಾಯಿತು. ನಮ್ಮ ಉಪಕಾರಕ್ಕೋಸ್ಕರವೇ ಅವರು ನಡೆ ಕೊಂಡ ರೀತಿಯನ್ನು ಈತನು ಅಪಕಾರವನ್ನಾಗಿ ಬಗೆದು ವಿರೋಧಿಸು ರುವನಲ್ಲಾ ಎಂದು ವ್ಯಥೆಪಟ್ಟು, ಮುನಿಗಳನ್ನು ಹೊರಕ್ಕೆ ಕರೆತಂದ ಅವರ ಪಾದಗಳಿಗೆ ಬಿದ್ದು ತನಗಾಗಿ ತನ್ನ ತಮ್ಮನನ್ನು ಕ್ಷಮಿಸಬೇಕೆಂ ಬೇಡಿಕೊಂಡನು.

ಮುನಿಗಳು ನಸುನಕ್ಕು "ವತ್ಸ! ಇದಕ್ಕೇಕೆ ಚಿಂತಿಸುವೆ. ಸವ ಸಂಗ ಪರಿತ್ಯಾಗಿಗಳಾದ ನಮಗೆ ನಿಂದಾ–ಸ್ತುತಿ, ಉಪಕಾರ–ಅಪಕಾ ಎಲ್ಲಾ ಭಾವಗಳೂ ಒಂದೇ ಅಲ್ಲವೇ?" ಎಂದು ಹೇಳಿ ಅಗ್ನಿಭೂತಿಯನ ಆಶೀರ್ವದಿಸಿ ತಮ್ಮ ವಿಹಾರವನ್ನು ಮುಂದುವರಿಸಿದರು.

ಮುನಿಗಳನ್ನು ನಿಂದಿಸಿದ ಪಾಪದಿಂದ ವಾಯುಭೂತಿ ಕೆಲವೇದಿನ ಳಲ್ಲಿ ಭಯಂಕರವ್ಯಾಧಿಗೆ ತುತ್ತಾಗಿ ಬಹು ಕಷ್ಟವನ್ನು ಅನುಭವಿಸಿದನು.

ನಮ್ಮ ಪಾಪ–ಪುಣ್ಯ ಕಾರ್ಯಗಳನ್ನು ಅನುಸರಿಸಿ
ಕಷ್ಟಸುಖಗಳು ಬರುತ್ತವೆ.

೧೫

ಬಿಡಲಾರದ ವ್ರತಗಳು



ಸೋಮಶರ್ಮಭಟ್ಟ ಸದಾಚಾರವಂತ, ವೈದಿಕ ಕರ್ಮಗಳನ್ನು ತಪ್ಪದೆ ಆಚರಿಸುತ್ತಿದ್ದ. ನಿಷ್ಠ ಧಾರ್ಮಿಕ. ಅವನಿಗೆ 'ನಾಗಶ್ರೀ' ಎಂಬ

ಮಗಳಿದ್ದಳು, ಅವಳು ಸಹ ಧಾರ್ಮಿಕ ಪ್ರವೃತ್ತಿಯುವಳೇ. ಸ್ನಾನ, ಪೂಜೆ ಗುರು ಹಿರಿಯರ ಸೇವೆ, ವಿನಯ–ಹೀಗೆ ಎಲ್ಲಾ ಸದ್ಗುಣಗಳೂ ಅವಳ ತುಂಬಿದ್ದವು.

ಒಮ್ಮೆ ಅವರ ಊರಿಗೆ ಸೂರ್ಯಮಿತ್ರಾಚಾರ್ಯರೆಂಬ ಜೈನಮುನಿಗಳು ಬಂದರು. ಅವರು ಪ್ರತಿದಿನ ಅಲ್ಲಿ ಪ್ರವಚನವನ್ನು ಮಾಡಿ ಗೃಹಸ್ಥರಿ ಅನೇಕ ಬಗೆಯ ಧರ್ಮೋಪದೇಶವನ್ನು ಮಾಡುತ್ತಿದ್ದರು. ಉಪದೇಶದ ಕೊನೆಯಲ್ಲಿ ಅಹಿಂಸಾದಿ ಶ್ರೇಷ್ಠ ವ್ರತಗಳನ್ನು ಶ್ರಾವಕ, ಶ್ರಾವಿಕೆಯರಿಗೆ ನೀಡಿ ಪವಿತ್ರಮಾರ್ಗವನ್ನು ತೋರಿಸುತ್ತಿದ್ದರು. ನಾಗಶ್ರೀ ಒಂದು ದಿನ ಮುನಿಗಳ ಉಪದೇಶವನ್ನು ಕೇಳಿದಳು. ಅವರ ಉಪದೇಶದಿಂದ ಅವಳು ಪ್ರಭಾವಿತಳಾದಳು. ಸಭೆಯ ಕೊನೆಯಲ್ಲಿ ತನಗೂ ವ್ರತಗಳನ್ನು ನೀಡಬೇಕೆಂದು ಮುನಿಗಳನ್ನು ಪ್ರಾರ್ಥಿಸಿದಳು.

ನಾಗಶ್ರೀ ಚತುರೆ. ಬುದ್ಧಿವಂತೆ. ಕೊಟ್ಟ ವ್ರತಗಳನ್ನು ನಡೆಸಬಲ್ಲಳೆಂದು ಮುನಿಗಳಿಗೆ ಅನಿಸಿತು. ಆದುದರಿಂದ ಅವರು ಅವಳಿಗೆ ಅಹಿಂಸೆ, ಸತ್ಯ, ಅಸ್ತೇಯ (ಕಳ್ಳತನ ಮಾಡದಿರುವಿಕೆ), ಬ್ರಹ್ಮಚರ್ಯೆ ಮತ್ತು ಅಪರಿಗ್ರಹ (ದುರಾಶೆ ಪಡದಿರುವುದು) ಈ ವ್ರತಗಳನ್ನು ಕೊಟ್ಟರು. ನಾಗಶ್ರೀ ಸಹ ಆ ವ್ರತಗಳನ್ನು ಭಕ್ತಿಯಿಂದ ಸ್ವೀಕರಿಸಿ, ಮುನಿಗಳಿಗೆ ವಂದಿಸಿ, ಮನೆಯತ್ತ ನಡೆದಳು.

ಸೋಮಶರ್ಮ ಭಟ್ಟನಿಗೆ ತನ್ನ ಮಗಳು ಜೈನಮುನಿಗಳಿಂದ ವ್ರತ ಕೈಗೊಂಡು ಬಂದಿದ್ದಾಳೆಂದು ತಿಳಿಯಿತು. ಆಗ ಅವನು ಮಗಳನ್ನು ಕುರಿತು "ಮಗಳೇ! ನಾವು ಬ್ರಾಹ್ಮಣರು. ಜಗತ್ತಿನಲ್ಲಿ ಶ್ರೇಷ್ಠರಾದವರು. ನಾವು ಜೈನರ ವ್ರತಗಳನ್ನು ಪರಿಗ್ರಹಿಸಬಾರದು" ಎಂದನು.

"ಹಾಗಾದರೆ ಈಗೇನುಮಾಡಲಿ ತಂದೆ!" ನಾಗಶ್ರೀ ಕೇಳಿದಳು.

"ಮತ್ತೆ ಆ ಮುನಿಯಬಳಿಗೇ ಹೋಗಿ ಆತನಿಂದ ಸ್ವೀಕರಿಸಿರುವ ವ್ರತಗಳನ್ನು ಹಿಂತಿರುಗಿಸಿಬಿಡು" ತಂದೆ ಆಗ್ರಹಪೂರ್ವಕವಾಗಿ ನುಡಿದನು.

ನಾಗಶ್ರೀ ಒಪ್ಪಿದಳು. ತನ್ನ ತಂದೆಯನ್ನೂ ಬರುವಂತೆ ಒತ್ತಾಯ

ಡಿಸಿದಳು. ಆತನೂ ಸಮ್ಮತಿಸಿ ಅವಳ ಸಂಗಡವೇ ನಡೆದನು. ದಾರಿ
ಯಲ್ಲಿ ಬರುತ್ತಿರುವಾಗ ಒಬ್ಬ ಮನುಷ್ಯನನ್ನು ರಾಜದೂತರು ಬಂಧಿಸಿ
ಳೆದೊಯ್ಯುತ್ತಿದ್ದರು. ಅವನನ್ನು ನೋಡಿದ ನಾಗಶ್ರೀಯು ತನ್ನ ತಂದೆ
ಾಗಶ್ರೀಯು ತನ್ನ ತಂದೆಯನ್ನು ಕುರಿತು “ ಅಪ್ಪಾ! ರಾಜದೂತರೇಕೆ
ಇವನನ್ನು ಎಳೆದೊಯುತ್ತಿದ್ದಾರೆ?” ಎಂದು ಕೇಳಿದಳು. ಅವನು “ಇವನು
ೊಲೆಪಾತಕ. ಜೂಜಾಡಿ ಪರಸ್ಪರ ಕಲಹಬಂದು ಒಬ್ಬನನ್ನು ಕೊಂದು
ಬಿಟ್ಟಿದ್ದಾನೆ. ಆದುದರಿಂದ ಮಹಾರಾಜನು ಈತನಿಗೆ ಮರಣದಂಡನೆ
ವಿಧಿಸಿದ್ದಾನೆ. ಅದಕ್ಕಾಗಿ ಒಯ್ಯುತ್ತಿದ್ದಾರೆ” ಎಂದನು.

“ಹಾಗಾದರೆ, ಕೊಲ್ಲುವುದು ತಪ್ಪೇನಪ್ಪಾ?” ಮಗಳು ಕೇಳಿದಳು.

“ತಪ್ಪಲ್ಲವೇ ಮಗಳೇ”

“ಹಾಗಾದರೆ ನಾನು ಮುನಿಗಳ ಬಳಿಯಲ್ಲಿ ತೆಗೆದುಕೊಂಡಿರುವ
ಮೊದಲನೇ ವ್ರತವೇ ‘ಅಹಿಂಸೆ’ ಯಲ್ಲವೇ? ಅದನ್ನು ಈಗ ಬಿಟ್ಟುಬಿಡು
ವುದು ಸರಿಯೇ?

ಮಗಳು ಮಾತು ಸರಿಯೆನಿಸಿತು ತಂದೆಗೆ. “ಹೀಗಿದ್ದಮೇಲೆ ಇದೊಂದು
ವ್ರತವನ್ನು ಇಟ್ಟುಕೋ. ಉಳಿದವನ್ನು ಹಿಂತಿರುಗಿಸಿಬಿಡು” ಎಂದು
ಸೋಮಶರ್ಮ ಭಟ್ಟನು ಹೇಳಿದನು. ಮಗಳೂ ತಂದೆಯಮಾತಿಗೆ ಸಮ್ಮ
ತಿಸಿದಳು. ಇಬ್ಬರೂ ತುಸುದೂರ ಮುಂದೆ ನಡೆದರು.

ಮತ್ತೊಬ್ಬನನ್ನು ರಾಜದೂತರು ರಾಜಬೀದಿಯಲ್ಲಿ ಎಳೆದೊಯ್ಯು
ತ್ತಿದ್ದುದು ಕಂಡುಬಂದಿತು. ಪುನಃ ನಾಗಶ್ರೀ ತಂದೆಯನ್ನು ಆ ಅಪರಾ
ಧಿಯ ವಿಚಾರವನ್ನು ಕೇಳಿದಳು.

“ಇವನು ಸುಳ್ಳು ಸುಳ್ಳು ಕಥೆಗಳನ್ನು ಹೇಳಿ ಜನಗಳನ್ನು ವಂಚಿಸು
ತ್ತಿದ್ದ. ತನ್ನ ಸುಳ್ಳುಮಾತುಗಳಿಂದಲೇ ಹೇರಳವಾದ ಹಣವನ್ನು ಸಂಪಾದಿ
ಸಿದ್ದ. ಆದುದರಿಂದ ರಾಜನು ಇವನಿಗೆ ದಂಡನೆ ನೀಡಿದ್ದಾನೆ” ಎಂದು
ತಂದೆ ಹೇಳಿದನು.

“ಹಾಗಾದರೆ ಸುಳ್ಳು ಹೇಳುವುದು ತಪ್ಪೇನಪ್ಪಾ?” ಎಂದು ಮಗಳು
ಕೇಳಿದ ಪ್ರಶ್ನೆಗೆ ತಂದೆ ಒಪ್ಪಬೇಕಾಯಿತು, ಆಗ ‘ ಸುಳ್ಳು ಹೇಳಬಾರದು ’

ಎಂಬ ಎರಡನೇ "ಸತ್ಯ" ವ್ರತವನ್ನು ಉಳಿಸಿಕೊಳ್ಳಲು ತಂದೆಯು
ಸಮ್ಮತಿಸಿದನು.

ಯಥಾರೀತಿ ತಂದೆ ಮಗಳು ಮುಂದೆ ನಡೆದರು. ಸ್ವಲ್ಪದೂ
ಹೋಗುವುದರಲ್ಲೇ ಮತ್ತೊಬ್ಬ ಅಪರಾಧಿಯನ್ನು ಕರೆದೊಯ್ಯುತ್ತಿದ್ದುದ
ಕಂಡುಬಂದಿತು. ಅವನು ಮಾಡಿರುವ ತಪ್ಪು ಏನೆಂಬುದನ್ನು ನಾಗಶ್ರೀ
ತಂದೆಯನ್ನು ಕೇಳಿದಳು.

"ಇವನು ದೊಡ್ಡ ಕಳ್ಳ, ಜನಗಳ ಬತ್ತವನ್ನು ಅಳತೆಯಲ್ಲಿ ಮೋ
ಮಾಡಿ ಕದಿಯುತ್ತಿದ್ದ. ಕಣಜಗಳಲ್ಲಿ ರಂಧ್ರಗಳನ್ನು ಕೊರೆದು, ಯಾರಿಗೂ
ತಿಳಿಯದಂತೆ ಬತ್ತ ಮೊದಲಾದ ಧಾನ್ಯಗಳನ್ನು ಲೂಟಿ ಮಾಡುತ್ತಿದ್ದ.
ಒಂದುದಿನ ಒಬ್ಬ ಬುದ್ಧಿಶಾಲಿಯಾದ ಗೌಡ ಇವನ ಕಳ್ಳತನವನ್ನು ಕಂಡು
ಹಿಡಿದುಕೊಟ್ಟ. ಈಗ ಇವನಿಗೆ ರಾಜ ಶಿಕ್ಷೆಯನ್ನು ವಿಧಿಸಿದ್ದಾನೆ."

ತಂದೆಯಮಾತು ಮುಗಿಯುವುದರೊಳಗೇ ನಾಗಶ್ರೀ "ಕಳ್ಳತನವನ
ಮಾಡುವುದು ತಪ್ಪೇನು ತಂದೆಯೇ"? ಎಂದು ಕೇಳಿದಳು. ಪ್ರಾಜ್ಞನಾ
ಅವನು 'ಕಳ್ಳತನವು ತಪ್ಪಲ್ಲ'ವೆಂದು ಹೇಗೆತಾನೇ ಹೇಳಿಯಾನು? ಕೊನೆ
"ಕಳ್ಳತನವನ್ನು ಮಾಡಬಾರದು" ಎನ್ನುವ "ಅಸ್ತೇಯ" ಎಂಬ ವ್ರತವನ
ಇಟ್ಟುಕೊಳ್ಳಲು ಸಮ್ಮತಿಸಿದನು.

ಮತ್ತೆ ಇಬ್ಬರೂ ಮನೆಗಳಬಳಿ ಸಾಗಿದರು. ಎಂದಿನಂತೆ ಸ್ವ
ದೂರ ಹೋಗುವುದರಲ್ಲೇ ರಾಜಭಟರು ಮೋವಾಳಿ ಎಂಬ ಹೆಂಗಸನ್ನೂ
ನಾಗಸೂರನೆಂಬ ಗಂಡಸನ್ನೂ ಎಳೆದುಕೊಂಡು ಹೋಗುತ್ತಿದ್ದರು. ಅವರನ್
ಕಂಡ ನಾಗಶ್ರೀ ಅವರ ವಿಚಾರವೇನೆಂದು ತನ್ನ ತಂದೆಯನ್ನು ಕೇಳಿದಳ
ಸೋಮಶರ್ಮ ಭಟ್ಟನು ಅವರ ವಿಚಾರವನ್ನು ತಿಳಿದುಬಂದು ಹೇಳಿದನ

"ಮಗಳೇ ಇವರಿಬ್ಬರೂ ನೀಚರು. ಹೆಂಗಸಿನ ಹೆಸರು ಮೋವಾಳ
ಅವಿವಾಹಿತಳು. ನಾಗಸೂರ ಓರ್ವ ವರ್ತಕನ ಮಗ. ಅವನು ಹಣದಾ
ತೋರಿಸಿ ಈಕೆಯೊಂದಿಗೆ ಗುಪ್ತವಾಗಿ ಸ್ನೇಹಮಾಡುತ್ತಿದ್ದ. ಒಂದುದಿನ ಇ
ರಿಬ್ಬರೂ ತಳವಾರನಕೈಗೆ ಸಿಕ್ಕಿಬಿದ್ದರು. ಧರ್ಮಕ್ಕೆ ವಿರೋಧವಾದ ಕೆಲ
ವನ್ನು ಮಾಡಿದುದರಿಂದ ಇವರಿಬ್ಬರಿಗೂ ಕೆಂಪಗೆ ಕಾದಿರುವ ಕಬ್ಬಿಣ

ಪ್ರತಿಮೆಗೆಳನ್ನು ತಬ್ಬಿಕೊಳ್ಳಬೇಕೆಂದು ರಾಜನು ಶಿಕ್ಷೆ ನೀಡಿದ್ದಾನೆಂದನು.

"ಹಾಗಾದರೆ ಪರಪುರುಷ ಸ್ನೇಹ ತಪ್ಪೇ ತಂದೆಯೇ?" ಎಂದು ನಾಗಶ್ರೀ ಸಹಜವಾಗಿ ಕೇಳಿದಳು.

ತಪ್ಪಲ್ಲದೇ ಏನು? ಪರಪುರುಷರ ಸ್ನೇಹ ಮತ್ತು ಪರಸ್ತ್ರೀ ಸಹವಾಸ ಎರಡೂ ಧರ್ಮಕ್ಕೆ ವಿರೋಧವಲ್ಲವೇ" ಎಂದು ತಂದೆ ಉತ್ತರಿಸಿದನು.

"ಹಾಗಾದರೆ ಜೈನಮುನಿಗಳಿಂದ ನಾನು ತೆಗೆದುಕೊಂಡಿರುವ ಬ್ರಹ್ಮಚರ್ಯವ್ರತದಿಂದ ತಪ್ಪೇನು?" ಮಗಳು ಕೇಳಿದಳು.

ಈಗಲೂ ತಂದೆ ಮಗಳ ಮಾತಿಗೆ ಒಪ್ಪಬೇಕಾಯಿತು "ಅನ್ಯಪುರುಷ ಸಹವಾಸವನ್ನು ಮಾಡಬಾರದೆಂಬ–ಬ್ರಹ್ಮಚರ್ಯೆ" ವ್ರತವನ್ನು ಅವಳು ಉಳಿಸಿಕೊಳ್ಳಲು ಅವನು ಒಪ್ಪಿದನು.

ಪುನಃ ಎಂದಿನಂತೆಯೇ ಅವರು ಮುಂದಕ್ಕೆ ನಡೆದರು. ಹತ್ತು ಹೆಜ್ಜೆಗಳ ನ್ನಿಡುವುದರಲ್ಲೇ ಮತ್ತೊಬ್ಬ ಅಪರಾಧಿಯನ್ನು ಕಂಡರು.

"ಇವನ ಅಪರಾಧವೇನು ಅಪ್ಪಾ?" ಎಂದಿನಂತೆ ನಾಗಶ್ರೀಯ ಪ್ರಶ್ನೆ ತಂದೆಯ ಕಿವಿಗೆ ಬಿದ್ದಿತು.

"ಇವನು ಮಹಾದುರಾಶೆಯ ಮನುಷ್ಯ. ಇವನ ವಿದ್ಯೆಗೆ ಮೆಚ್ಚಿ ಮಹಾರಾಜ ಅಸಂಖ್ಯಾತ ಗೋವುಗಳನ್ನು ಇವನಿಗೆ ದಾನಮಾಡಿದ್ದ. ಇವನು ಆ ನೆಪದಲ್ಲಿ ಊರಿನವರ ಹಸುಗಳನ್ನೆಲ್ಲಾ ತನ್ನದೆಂದೇ ಒಳಪಡಿಸಿ ಕೊಳ್ಳಹತ್ತಿದ. ಇದು ರಾಜನಿಗ ತಿಳಿದು ಈಗ ಶಿಕ್ಷೆ ವಿಧಿಸಿದ್ದಾನೆ" ತಂದೆ ಮಗಳಿಗೆ ತಿಳಿಸಿದನು.

ಮಗಳು ತುಸು ನಕ್ಕಳು "ದುರಾಶೆಯನ್ನು ಪಡಬಾರದು. ಸಂಗ್ರಹ ಮಾಡಬಾರದು. ನಮ್ಮ ಜೀವನಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರವೇ ಇಟ್ಟುಕೊಳ್ಳಬೇಕು" ಎಂಬ ಈ ವ್ರತವನ್ನು ಸ್ವೀಕರಿಸುವುದು ತಪ್ಪೇನಿಲ್ಲ ತಾನೇ" ಎಂದುಕೇಳಿದಳು. ಆಗ ಅವನು "ಅಪರಿಗ್ರಹ" ವ್ರತವನ್ನೂ ಸಹ ನಡೆಸಲು ಅನುಮತಿಸಿದನು.

ಈ ವೇಳೆಗೆ ಸೋಮಶರ್ಮಭಟ್ಟನು ಅಹಿಂಸೆ, ಸತ್ಯ, ಅಸ್ತೇಯ ಬ್ರಹ್ಮಚರ್ಯೆ ಮತ್ತು ಅಪರಿಗ್ರಹಗಳೆಂಬ ಪಂಚ ಅಣುವ್ರತಗಳನ್ನು ನಡೆಸಲು ಒಪ್ಪಿಕೊಂಡಿದ್ದನು. ಅದೇ ಸಮಯಕ್ಕೆ ಅವರು ನಡೆಯುತ್ತಾ ಸೂರ್ಯ ಮಿತ್ರಾಚಾರ್ಯರ ಬಳಿಗೆ ಬಂದಿದ್ದರು. ಇಬ್ಬರು ಮುನಿಗಳಿಗೆ ವಂದಿಸಿ ನಡೆದ ವೃತ್ತಾಂತವನ್ನು ತಿಳಿಸಿದರು. ಅವರು ನಸು ನಕ್ಕು. "ಬ್ರಾಹ್ಮಣ ಧರ್ಮ ವಾದರೇನು? ಸೂಕ್ಷ್ಮವಾಗಿ ಅವಲೋಕಿಸಿದರೆ ಸತ್ಯ ಧರ್ಮವೇ ಧರ್ಮ, ಅಂತಹ ಧರ್ಮ ಆತ್ಮನಿಷ್ಠವಾದದ್ದು. ಧರ್ಮವನ್ನು ಜಾತಿಯಿಂದ ಪರಿಗಣಿಸಿದಾಗ ವ್ಯಕ್ತಿನಿಷ್ಠವಾಗಿ ರಾಗದ್ವೇಷಾದಿಗಳು ಉದ್ಭವಿಸುವುವು. ಅಹಿಂಸೆ ಸತ್ಯ, ಅಸ್ತೇಯ ಬ್ರಹ್ಮಚರ್ಯೆ ಮತ್ತು ಅಪರಿಗ್ರಹಗಳು ಯಾವ ಧರ್ಮಕ್ಕೆತಾನೇ ವಿರೋಧ? ಜಗತ್ತಿನ ಸಕಲ ಜನರೂ ಅನುಸರಿಸಲು ಯೋಗ್ಯವಾದುವು" ಎಂದು ಮೊದಲಾಗಿ ಅನೇಕ ವಿಧದಿಂದ ಬೋಧಿಸಿದರು.

ನಾಗಶ್ರೀಗೆ ಅತ್ಯಾನಂದವಾಯಿತು. ಸೋಮಶರ್ಮಭಟ್ಟನಿಗೂ ಒಪ್ಪಿಗೆಯಾಯಿತು. ಇಬ್ಬರೂ ಮತ್ತೆ ಮುನಿಗಳಿಗೆ ನಮಿಸಿ ಆಶೀರ್ವಾದ ಪಡೆದು ಮನೆಗೆ ಬಿಡಲಾರದ ವ್ರತಗಳನ್ನು ಹೊಂದಿ ಮರಳಿದರು.

ಅಹಿಂಸಾ ತತ್ವಪಾಲನೆಯಿಂದಲೇ ಮಾನವರಿಗೆ ಮುಕ್ತಿ.

೧೬

ಚಾಡಿಕೋರ ಮಂತ್ರಿ



ಮಹೇಂದ್ರದತ್ತಮುನಿ ಶ್ರೇಷ್ಠ ತಪಸ್ವಿಯಾಗಿದ್ದರು. ಅವರಿಗೆ ಸ್ಕಂಧ ಕುಮಾರನೇ ಮೊದಲಾದ ಐನೂರುಮಂದಿ ಶಿಷ್ಯರಿದ್ದರು. ಅವರೆಲ್ಲರೂ

ಬ್ರಹ್ಮಚರ್ಯಾದಿ ತಪಸ್ಸನ್ನು ನಿಷ್ಠೆಯಿಂದ ಮಾಡುತ್ತಿದ್ದರು. ಇವರು ನಾ
ಎಲ್ಲಕಡೆ ವಿಹಾರಮಾಡುತ್ತಾ, ಮಳೆಗಾಲದಲ್ಲಿ ಚಾತುರ್ಮಾಸ ವ್ರತ
ಆಚರಿಸುತ್ತ ಕಳಿಂಗದೇಶದ ದಂತಪುರಕ್ಕೆ ಬಂದರು.

ದಂತಪುರದಲ್ಲಿ ಜನಾರ್ಧನನೆಂಬ ಮಹಾರಾಜ;ರಾಜ್ಯಭಾರ ವ
ತ್ತಿದ್ದ. ಅವನ ಆಸ್ಥಾನದಲ್ಲಿ ವ್ಯಾಳನೆಂಬ ಪುರೋಹಿತನಿದ್ದ. ಆತನು
ಮದದಿಂದ ಮಹಾ ಗರ್ವಿಯಾಗಿದ್ದ. ಯಾವ ವಿದ್ವಾಂಸನು ಬಂ
ಅವನೊಂದಿಗೆ ತರ್ಕವಿತರ್ಕಗಳನ್ನು ಮಾಡಿ, ಸೋಲಿಸಿ, ಅಪಮಾನ
ಕಳುಹಿಸುತ್ತಿದ್ದನು.

ಒಮ್ಮೆ ದಂತಪುರಕ್ಕೆ ಮಹೇಂದ್ರದತ್ತ ಮುನಿಗಳು ಶಿಷ್ಯಸಮು
ಸಮೇತ ಆಗಮಿಸಿದರು. ಜನಾರ್ದನ ಮಹಾರಾಜನು ಭಕ್ತಿಯಿಂದ ಸ
ತಿಸಿ ಆಹಾರಾದಿ ಚತುರ್ವಿಧ ದಾನಗಳನಿತ್ತು ಸನ್ಮಾನಿಸಿದನು. ಮಹೇ
ದತ್ತ ಮುನಿ ಮಹಾ ವಿದ್ವಾಂಸರಾಗಿದ್ದರು. ಒಂದು ದಿನ ಮಹಾರಾ
ಸ್ಕಂಧ ಮುನಿಯೊಂದಿಗೆ ಪುರೋಹಿತ ವ್ಯಾಳನ ವಾದ ವಿವಾದಗಳನ್ನು
ಡಿಸಿದನು, ನಾನಾ ವಿದ್ಯಗಳನ್ನು ಕುರಿತು ಬಹುಸಮಯದವರೆಗೆ ಚ
ನಡೆದನಂತರ ವ್ಯಾಳನು ಸಂಪೂರ್ಣವಾಗಿ ಸೋತು ಹೋದನು. ಸೋಲಿ
ಆದ ಅಪಮಾನವನ್ನು ಸಹಿಸಲಾರದೆ ವ್ಯಾಳನು ರಾಜ್ಯವನ್ನೇ ಬಿಟ್ಟು
ಹೋದನು. ಅವನು ಕುಂಭಕಾರಘಟಿಯ ರಾಜನಾದ ದಂಡಕಮಹಾರ
ನಲ್ಲಿಗೆಬಂದು ಮಂತ್ರಿಯಾಗಿ ಸೇರಿದನು.

ಮಹೇಂದ್ರದತ್ತಮುನಿ ಸಂಘವು ವಿಹಾರ ಮಾಡುತ್ತಾ ಮಾಡ
ಕುಂಭಕಾರಘಟಿಗೂ ಬಂದಿತು. ಮಹಾರಾಜ ಮುನಿಗಳಲ್ಲಿ ಮಹಾಭಕ್ತಿ
ನ್ನಿಟ್ಟಿದ್ದವನು. ಮುನಿಗಳನ್ನು ವೈಭವದಿಂದ ಸ್ವಾಗತಿಸಿ ಸತ್ಕರಿಸಿ
ಅವರಿಂದ ಧರ್ಮೋಪದೇಶವನ್ನು ಕೇಳಿ ಆನಂದಿತನಾಗಿ ಆ ವರ್ಷದ ಚಾ
ರ್ಮಾಸವ್ರತವನ್ನು ತನ್ನ ಮನೆಯಲ್ಲೇ ಮಾಡಬೇಕೆಂದು ಬೇಡಿದ
ಅವನ ಶ್ರದ್ಧೆಯನ್ನು ಮನಗಂಡ ಮಹೇಂದ್ರದತ್ತ ಮುನಿಗಳು ಸಮ್ಮ
ದರು. ಮಹಾರಾಜನು ಯಾರನ್ನೂ ಸಂಬದೆ ತಾನೇ ಸ್ವತಃ ಆ
ದಾನಾದಿ ಸತ್ಕಾರಗಳನ್ನು ಮಾಡಿ ಮುನಿಗಳ ಸೇವೆಯನ್ನು ಮಾಡುತ್ತಿದ್ದ

ದೇ ರಾಜ್ಯದಲ್ಲಿ ಮಂತ್ರಿಯಾಗಿದ್ದ ವ್ಯಾಳನು ಈ ಮುನಿಗಳ ಮೇಲಿ
ಡನ್ನು ತೀರಿಸಿಕೊಳ್ಳುವುದು ಹೇಗೆಂದು ಚಿಂತಿಸುತ್ತಿದ್ದ. ಯಾವು
ಯುಕ್ತಿಯಿಂದ ಈ ಮುನಿಗಳಿಗೆ ಉಪದ್ರವವನ್ನಿತ್ತು ಓಡಿಸ
ು ಆಲೋಚಿಸುತ್ತಿದ್ದ. ರಾಜನಿಗೆ ಅವರಮೇಲೆ ಚಾಡಿಹೇಳಲು
ವನ್ನು ಹೊಂಚು ಹಾಕುತ್ತಿದ್ದ.

ಮುನಿಗಳು ಪ್ರತಿದಿನವೂ ನಗರದ ಸಮೀಪದಲ್ಲಿದ್ದ ಕಾಡಿಗೆಹೋಗಿ,
ಏಕಾಂತಸ್ಥಾನದಲ್ಲಿ ಕುಳಿತು ಶಾಸ್ತ್ರದ ಅಧ್ಯಯನವನ್ನು ಮಾಡುತ್ತಿ
ಈ ವಿಚಾರವನ್ನು ತಿಳಿದ ವ್ಯಾಳನು ಒಂದು ತಂತ್ರವನ್ನು ಮಾಡಿ
ಮುನಿಗಳು ಅಧ್ಯಯನ ಮಾಡುವ ಸ್ಥಳದಲ್ಲಿ ಅನೇಕ ಹಿಂಸಾತ್ಮಕ
ಗಳನ್ನು ಭೂಮಿಯಲ್ಲಿ ಹುದುಗಿಸಿಟ್ಟನು. ಅನಂತರ ಸಮಯವನ್ನು
ರಾಜನನ್ನು ಕುರಿತು "ಈ ಮುನಿಗಳು ನಿಜವಾದ ಮುನಿಗಳಲ್ಲ.
ಳ ವೇಷದಲ್ಲಿರುವ ಶತ್ರುರಾಜರು. ಸಮಯವನ್ನು ಕಾದು ನಿಮ್ಮನ್ನು
ಸಲು ಬಂದಿರುವರು. ಬೇಕಾದರೆ ಇವರ ಅಧ್ಯಯನ ಸ್ಥಾನದಲ್ಲಿ
ಹಿಂಸಾಯುಧಗಳನ್ನು ಹುದುಗಿಸಿಟ್ಟಿದ್ದಾರೆ. ಸೇವಕರನ್ನು ಕಳುಹಿಸಿ
ಸಿನೋಡಿರಿ" ಎಂದು ಚಾಡಿ ಹೇಳಿದನು.

ದಂಡಕ ಮಹಾರಾಜನು ತನ್ನ ಆಪ್ತರನ್ನು ಕಳುಹಿಸಿ ಪರೀಕ್ಷಿಸಿದನು.
ಗಳು ದೊರೆತುವು. ಆದರೂ ಮಹಾರಾಜನು ತನ್ನ ಮನಸ್ಸಿನಲ್ಲಿ
ಮುನಿಗಳಾದರೋ ಸೂಕ್ಷ್ಮಾತಿಸೂಕ್ಷ್ಮ ಜಂತುಗಳು ನಾಶವಾಗ
ನ್ನು ಆಹಾರ ವಿಹಾರದಲ್ಲಿ ಎಚ್ಚರವಾಗಿರುತ್ತಾರೆ. ಇಂತಹ ಮುನಿ
ಇಂತಹ ಮೋಸಮಾಡುವುದುಂಟೆ? ಯಾರೋ ಮಾತ್ಸರ್ಯ ಬುದ್ಧಿ
ವರು ಈ ಬಗೆಯ ಕೆಲಸವನ್ನು ಮಾಡಿರಬಹುದು" ಎಂದು ಆಲೋಚಿಸಿ
ಮಾತಿಗೆ ಗಮನಕೊಡದೆ ಉದಾಸೀನವಾಗಿದ್ದುಬಿಟ್ಟನು.

ರಾಜನು ಉದಾಸೀನವಾದುದನ್ನು ತಿಳಿದು ವ್ಯಾಳನು ಮತ್ತೊಂದು
ಕ್ತಿಯನ್ನು ಹುಡುಕಿದನು. ತಾನೇ ಕೆಲವು ಚೋರರನ್ನು ಕಳುಹಿಸಿ
ರಾಜನ ಭಂಡಾರಕ್ಕೆ ಕನ್ನ ಹಾಕಿಸಿದನು. ಚಿನ್ನದ ನಾನಾ ಆಭರಣ
ಅಲ್ಲಲ್ಲೇ ಕೆಡವಿಸಿ, ಬಸದಿಯಲ್ಲಿ, ಮುನಿಗಳು ಮಲಗುತ್ತಿದ್ದ ಒಂದು

ಕೋಣೆಯಲ್ಲಿ ಬಚ್ಚಿಸಿಟ್ಟನು. ಮರುದಿನ ಅರಮನೆಯ ಭಂ
ಕಳ್ಳತನವಾಗಿದೆ ಎಂದು ರಾಜನಿಗೆ ತಿಳಿಸಿ, ತಳವಾರನನ್ನು ಪತ್ತೆ
ಬೇಕೆಂದು ಆಜ್ಞಾಪಿಸಿದನು. ಮಂತ್ರಿಯ ಆಣತಿಯಂತೆ ತಳವಾ
ಸಹಕಾರೀ ಅಧಿಕಾರಿಗಳೊಂದಿಗೆ ಆಭರಣಗಳು ಬಸದಿಯ ಕೋಣೆ
ದನ್ನು ಪತ್ತೆ ಹಚ್ಚಿದ.

ಮುನಿಗಳೇ ರಾತ್ರಿಯಲ್ಲಿ ಈ ಕಳ್ಳತನವನ್ನು ಮಾಡಿದ್ದಾರೆ. ಕ
ಮುನಿಗಳಂತೆ ವೇಷಧಾರಿಗಳಾಗಿರುತ್ತಾರೆ. ನಾನು ಮೊದಲೇ
ಮಾಡಿದೆ. ಈಗಲಾದರೂ ತಮ್ಮ ಚಿತ್ತಕ್ಕೆ ಬಂದಿತಲ್ಲವೇ?"
ರಾಜನನ್ನು ಕೇಳಿದನು.

"ಕದಿಯಬಾರದೆಂಬುದು ಪಂಚಮಹಾವ್ರತಗಳಲ್ಲಿ ಒಂದು.
ಗಳು ಅವನ್ನು ನಡಸತಕ್ಕವರು. ಅಂತಹವರು ಇಂತಹ ಕಳ್ಳ
ಮಾಡುವರೇ? ಯಾರೋ ದುಷ್ಟರು ಈ ಕೆಲಸವನ್ನು ಮಾಡಿ ಅವ
ಹೊರಿಸಲು ಮಾಡಿರುವರೆಂದು ತೋರುತ್ತದೆ" ಎಂದು ಹೇಳಿ
ಚಾಡಿಮಾತನ್ನು ಕಿವಿಗೆ ಹಾಕಿಕೊಳ್ಳದೆ ನಡವೇಬಿಟ್ಟನು.

ವ್ಯಾಳನಿಗೆ ಈಗಲೂ ನಿರಾಶೆಯಾಯಿತು. ಮುಂದೇನು ಮ
ಕೆಂದು ಮತ್ತೆ ದುರಾಲೋಚನೆಯನ್ನು ಮಾಡಲಾರಂಭಿಸಿದನು.
ತನ್ನ ಕೃತ್ರಿಮವಾದ ವಿನಯದ ಆಚರಣೆಯಿಂದ ಮಹಾರಾಣಿ ಸ
ಮನಸ್ಸನ್ನು ಒಲಿಸಿಕೊಂಡನು. ಅವಳ ಸಮ್ಮತಿಯಿಂದ ಒಂದು
ನಾಟಕವನ್ನು ಹೂಡಿದನು.

ಒಬ್ಬ ಮನುಷ್ಯನಿಗೆ ಹಣದಾಶೆ ತೋರಿಸಿ ಮುನಿಯ ವೇ
ಮಾಡಿಸಿದನು. ಅವನ ತಲೆಯನ್ನು ಬೋಳಿಸಿದನು. ಕಾಷಾಯ
ಳನ್ನು ಉಡಿಸಿದನು. ಕಮಂಡಲವನ್ನು ಹಿಡಿಸಿದನು. ಅವನಿಗೆ
ರಾಣಿಯ ಸಂಗಡ ಶೃಂಗಾರ ಸರಸಸಲ್ಲಾಪವನ್ನು ಆಡುತ್ತಿರ
ತರಪೇತಿಯನ್ನು ಕೊಟ್ಟನು. ಈ ಬಗೆಯ ಕೃತಿಮ ನಾಟಕಾ
ಮಹಾರಾಣಿಯೂ ಸಮ್ಮತಿಸಿದಳು.

ಒಂದುದಿನ ಮಹಾರಾಜನು ರಾಜಕಾರ್ಯಗಳನ್ನು ಮುಗಿಸಿ

ರಕ್ಕೆ ಬರುತ್ತಿದ್ದ ಅದೇ ಸಮಯವನ್ನು ಕಾದಿದ್ದ ವ್ಯಾಳನು ಆ ಮುನಿಯು ಮಹಾರಾಣಿಯನ್ನು ಸರಸಸಲ್ಲಾಪಕ್ಕೆ ಕರೆಯುವಂತೆ ನು. ಮಹಾರಾಣಿ ಒಪ್ಪದಿದ್ದರೂ ಅವನು ಬಲವಂತಪಡಿಸುತ್ತಿ ಅದೇ ಸಮಯಕ್ಕೆ ವ್ಯಾಳನು ಮಹಾರಾಜನಿಗೆ ಈ ದೃಶ್ಯವನ್ನು "ನೋಡಿರಿ ಪ್ರಭು, ನಾನು ಮೊದಲು ಹೇಳಿದಾಗಲೆಲ್ಲಾ ನೀವು ಕೊಳ್ಳಲಿಲ್ಲ. ಈಗ ಆ ಮುನಿಗಳು ಅಂತಃಪುರವನ್ನು ಪ್ರವೇಶಿಸಿ ಾಣಿಯವರನ್ನೇ ಬಲಾತ್ಕರಿಸುವ ಸ್ಥಿತಿಗೆ ಬಂದಿದ್ದಾರೆ" ಎಂದು ು.

್ಯಾಳನ ಮಾತಿನಲ್ಲಿ ವ್ಯಂಗ್ಯವೂ ಸೇರಿತ್ತು. ಇದುವರೆಗೆ ನಂಬದಿದ್ದ ಾಜನು ಪ್ರತ್ಯಕ್ಷವಾಗಿ ನೋಡಿದನಂತರ ಸಂದೇಹವು ಅವನ ಮನಸ್ಸಿ ಮೂಡಿತು. ವಿವೇಚನೆಯನ್ನು ಕಳೆದುಕೊಂಡ ಮಹಾರಾಜನು ಾನವಾಗಿ ವಿಚಾರಿಸಲು ಅಸಮರ್ಥನಾಗಿ ಮುನಿಗಳಿಗೆ ಶಿಕ್ಷೆಯನ್ನು ಆಜ್ಞೆ ಮಾಡಿದನು. ಇದೇ ಸಮಯವನ್ನು ಕಾಯುತ್ತಿದ್ದ ವ್ಯಾಳನು ಾಡಿಯು ಈಗ ಫಲಿಸಿತೆಂದು ಅವರಮೇಲೆ ತನ್ನ ಸೇಡನ್ನು ತೀರಿಸಿ ು ಸಿದ್ಧನಾದನು. ಅವರನ್ನು ಭಯಂಕರವಾದ ಶಿಕ್ಷೆಯಿಂದ ಕೊಲ್ಲ ು ಹವಣಿಸಿದನು. ಅವರೆಲ್ಲರನ್ನೂ ಎಳ್ಳಿನಗಾಣಕ್ಕೆ ಕಟ್ಟಿಸಿ, ಗಳಿಂದ ಹೊಡೆಯಿಸಿ ಸಾಯುವಂತೆ ಮಾಡಿದನು.

ುನಿಗಳೆಲ್ಲರೂ ತಮಗೆ ಒದಗಿಬಂದ ಉಪಸರ್ಗವನ್ನು ಶಾಂತಿಯಿಂದ ರು. ಯಾರಮೇಲೂ, ಕೊನೆಗೆ ವ್ಯಾಳನಮೇಲೂ ದ್ವೇಷವನ್ನು ಲಿಲ್ಲ. ಆದರೆ ಶುಕ್ಲಧ್ಯಾನದಿಂದ ಶರೀರವನ್ನು ತ್ಯಜಿಸಿ ಸದ್ಗತಿಯನ್ನು . ಅವರಲ್ಲಿ ಸ್ಕಂದಪುರಾಣ ಮುನಿ ಮಾತ್ರ ತನ್ನ ನಿಮಿತ್ತವಾಗಿ ಮುನಿಗಳಿಗೂ ಇಂತಹ ಘೋರೋಪಸರ್ಗವು ಸಂಭವಿಸಿತೆಂದು ಟ್ಟು, ದ್ವೇಷಭಾವಕ್ಕೆ ಒಳಪಟ್ಟು ತನ್ನ ತಪಸ್ಸಿನ ತೇಜಸ್ಸಿನಿಂದ ನ್ನೂ, ಆ ರಾಜನನ್ನೂ ಸುಟ್ಟುಹಾಕಿದನು. ಚಾಡಿಕೋರ ಮಂತ್ರಿಯ ದ್ಧಿಯಿಂದ ಇಡೀ ರಾಜ್ಯವೇ ದುರ್ದೆಶೆಗೆ ಒಳಗಾಯಿತು.

೧೭

ಎತ್ತಿಗೆ ಜ್ವರಬಂದರೆ ಎಮ್ಮೆಗೆ ಬರೆ



ಕೌಶಾಂಬಿನಗರ ಸಕಲ ಸಮೃದ್ಧವಾದುದು. ಅಲ್ಲಿನ ರಾಜ ಗಂ
ನೀಕ. ಅವನು ರಾಜಧರ್ಮವನ್ನು ನಿಷ್ಠೆಯಿಂದ ಆಚರಿಸುತ್ತಿದ್ದ
ರಾಜ್ಯ ಸುಭಿಕ್ಷವಾಗಿತ್ತು.

ಆ ನಗರದಲ್ಲಿ 'ಗಾರವೇವ'ನೆಂಬ ರತ್ನಗಳನ್ನು ಹಸನು ಮಾಡುವ ಶ್ಯನಿದ್ದ. ಅವನು ರತ್ನಪರೀಕ್ಷೆಯಲ್ಲಿ ಮಹಾ ನಿಪುಣ. ಆದುದರಿಂದ ನ ಮೆಚ್ಚುಗೆಗೂ ಪಾತ್ರನಾಗಿದ್ದ. ಆಗಿಂದಾಗ್ಗೆ ರತ್ನಗಳನ್ನು ಕೊಂಡು ವಿಕೆಯಲ್ಲಿ ರಾಜನಿಗೆ ಸಹಾಯಕನಾಗುತ್ತಿದ್ದ.

ಒಮ್ಮೆ ರಾಜನಿಗೆ ತನ್ನಲ್ಲಿದ್ದ ಒಂದು ಪದ್ಮರಾಗಮಣಿಯನ್ನು ಹಸನು ತಿಸಬೇಕೆಂಬ ಅಪೇಕ್ಷೆಯಾಯಿತು. ಯಥಾಪ್ರಕಾರ ಗಾರದೇವನನ್ನು ಯಿಸಿ ಅವನ ಕೈಯಲ್ಲಿತ್ತು ಕಳುಹಿಸಿದನು. ಅವನು ಅದನ್ನು ತನ್ನ ಗೆ ತಂದು ಹಸನುಮಾಡುವ ಪರಿಕರಗಳನ್ನು ತರಲು, ಅಂಗಳದಲ್ಲಿ ಣಿಯನ್ನಿಟ್ಟು ಮನೆಯೊಳಕ್ಕೆ ಹೋದನು.

ಅದೇ ಸಮಯದಲ್ಲಿ ಜ್ಞಾನಸಾಗರರೆಂಬ ಮುನಿಗಳು ಆಹಾರಕ್ಕಾಗಿ ಬಂದರು. ಮುನಿಗಳ ಆಗಮನವನ್ನು ಕಂಡ ಗಾರದೇವ ಭಕ್ತಿ ನ ಬಂದು ಅವರ ಪಾದಗಳಿಗೆ ಎರಗಿದನು. ಅರ್ಘ್ಯಪಾದಾದಿಗಳಿಂದ ನ್ನು ಕುಳ್ಳಿರಿಸಿದನು. ತಾನೂ ತನ್ನ ಹೆಂಡತಿಯೂ ಸೇರಿ, ಪರಿಶುದ್ಧ ಆಹಾರವನ್ನು ಅವರ ಪಾಣಿಪಾತ್ರದಲ್ಲಿ ಹಾಕಿದರು. ಅವರು ತ್ರೋಕ್ತವಾಗಿ ನೀಡಿದ ಶುದ್ಧಾಹಾರವನ್ನು ಸ್ವೀಕರಿಸಿ, ಆ ದಂಪತಿಗಳನ್ನು ರ್ವದಿಸಿ ನಿರ್ಜನಪ್ರದೇಶದಲ್ಲಿ ಹೋಗಿ ಧ್ಯಾನಸ್ಥರಾದರು.

ಮುನಿಗಳನ್ನು ಸತ್ಕರಿಸುವ ಸಂಭ್ರಮದಲ್ಲಿ ಗಾರದೇವನು ತಾನು ಳದಲ್ಲಿಟ್ಟಿದ್ದ ಪದ್ಮರಾಗಮಣಿಯ ವಿಚಾರವನ್ನು ತಾತ್ಕಾಲಿಕವಾಗಿ ಮರೆ ನು. ಆ ಸಮಯದಲ್ಲಿ ನಿತ್ಯ ಬರುತ್ತಿರುವ ನವಿಲೊಂದು ಬಂದು, ಆ ಯನ್ನು ಹಣ್ಣಿನ ಬೀಜವೆಂದು ಭ್ರಮಿಸಿ, ಕೊಕ್ಕಿನಿಂದ ಕಚ್ಚಿಕೊಂಡು ಹೋಗಿತ್ತು. ಮತ್ತೆ ಆ ಮಣಿಯನ್ನು ನೋಡಿದಾಗ ಅಲ್ಲಿರಲಿಲ್ಲ. ಂದ ಗಾರದೇವನಿಗೆ ಆಶ್ಚರ್ಯವಾಯಿತು. ಮಹಾರಾಜನಿಗೆ ಏನು ವುದೆಂಬ ಭಯವೂ ಅವನ ಮನಸ್ಸಿನಲ್ಲಿ ಮೂಡಿತು. ಯಾರು ಕೊಂಡು ಹೋಗಿರಬಹುದೆಂದು ಆಲೋಚಿಸಿದನು. ಅವನ ಸಂದೇಹ ಗಳ ಮೇಲೇ ಬಂದಿತು. ಅವರನ್ನು ಹೊರತಾಗಿ ಮತ್ತಾರೂ ಮನೆಗೆ ರಲಿಲ್ಲವೆಂಬುದು ಅವನ ಮನಸ್ಸಿನಲ್ಲಿ ದೃಢಪಟ್ಟನಂತರ ಮುನಿಗಳ

ಮೇಲೇ ಅವನಿಗೆ ಸಿಟ್ಟು ಬಂದಿತು. ಕೂಡಲೇ ಒಂದು ಉದ್ದ
ಕೋಲನ್ನು ತೆಗೆದುಕೊಂಡು ಮುನಿಗಳಬಳಿಗೆ ನಡೆದನು.

ಮುನಿಗಳು ಧ್ಯಾನಮಗ್ನರಾಗಿ ಕಾಯೋತ್ಸರ್ಗದಲ್ಲಿದ್ದರು. ಅವ
ಕಂಡಕೂಡಲೇ ಬಾಯಿಗೆ ಬಂದಂತೆ ನಿಂದಿಸಹತ್ತಿದನು.


"ಮುನಿವೇಷದ ಚೋರಶಿಖಾಮಣಿ! ಎಷ್ಟು ಜನಕ್ಕೆ ಹೀಗೆ ಮ
ಮಾಡಿರುವೆ? ನಿನ್ನಂತಹ ವೇಷಧಾರೀ ಮುನಿಗಳಿಂದಲೇ ಒಳ್ಳೆಯ ನಿಷ್ಠ
ಮುನಿಗಳಿಗೂ ಕೆಟ್ಟಹೆಸರು ಬರುತ್ತದೆ. ಒಳ್ಳೆಯಮಾತಿನಲ್ಲಿ ನನ್ನ ಪದ್ಮ
ಮಣಿಯನ್ನು ಕೊಟ್ಟುಬಿಡು. ಇಲ್ಲದಿದ್ದರೆ ನಿನ್ನಗತಿ ನೆಟ್ಟಗಾಗುವು
ಎಂದು ಗದರಿಸಿ ಕೇಳಿದನು.

ಮುನಿಗಳು ಅವನ ರೌದ್ರಾವತಾರವನ್ನು ನೋಡಿ ತಮಗೆ ಪ
ಷ್ಠೋಪಸರ್ಗವಾಗಬಹುದೆಂದು ತಿಳಿದರೂ ಉಪಸರ್ಗದ ಸಮಯ
ಮುನಿಗಳು ಮೌನವ್ರತವನ್ನು ಧರಿಸಿ, ಹಿಂಸಿಸತಕ್ಕವರ ವಿಚಾ
ಮನಸ್ಸಿನಲ್ಲಾದರೂ ಪ್ರತೀಕಾರ ಭಾವನೆಯನ್ನು ತಳೆಯಬಾರದೆಂಬ
ಧರ್ಮದ ನಿಯಮದಂತೆ ಮೌನವನ್ನು ಧರಿಸಿ ನಿಂತರು.

ಮುನಿಯೂ ಮಾತನಾಡದಿದ್ದುದನ್ನು ಕಂಡು ಗಾರದೇವನಿಗೆ ಮತ್ತ
ಕೆರಳಿತು. ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ ತಾನು ಹಿಡಿದಿದ್ದ ಕೋ
ನಿಂದ, ತನ್ನ ಮನಸ್ಸು ತೃಪ್ತಿಯಾಗುವವರೆಗೂ ಥಳಿಸಿದನು. ಇದರಿಂ
ಮುನಿಗಳ ಮೈಮೇಲೆಲ್ಲಾ ಬಾಸುಂಡೆಗಳು ಕಾಣಿಸಿಕೊಂಡುವು. ಕೆಲ
ಯಂತೂ ಚರ್ಮವು ಹರಿದು ರಕ್ತವು ತೊಟ್ಟಿಕ್ಕತೊಡಗಿತು. ಆ
ಮುನಿಗಳು ಮಾತ್ರ ನಿಶ್ಚಲರಾಗಿ ಧ್ಯಾನಮಗ್ನರಾಗಿದ್ದರು. ಅವರ ಮುಖ
ಪರಮ ಶಾಂತಿಯು ನೆಲಸಿ ಆಧ್ಯಾತ್ಮ ತೇಜಸ್ಸು ಕಂಗೊಳಿಸುತ್ತಿತ್ತು.

ತಾನು ಎಷ್ಟು ಥಳಿಸಿದರೂ ಮೌನವಾಗಿಯೇ ಸಹಿಸುತ್ತ ನಿಂ
ಮುನಿಯನ್ನು ತಿರಸ್ಕಾರದಿಂದ ನೋಡಿದ ಗಾರದೇವನು 'ಮಹಾ ಭ
ಎಂದು ಹೇಳಿ ತಾನು ಹಿಡಿದಿದ್ದ ಕೋಲನ್ನು ಮುನಿಗಳತ್ತ ಬೀಸಿ ಎಸೆ
ಎತ್ತಿಗೆ ಜ್ವರಬಂದರೆ ಎಮ್ಮೆಗೆ ಬರೆಹಾಕಿದಂತಾಯಿತು, ನವಿಲು ಮಾಡಿ
ಕೆಲಸಕ್ಕೆ ಮುನಿಗಳಿಗೆ ಏಟು ಹಾಕಿದ್ದುದು.


ಸಂಯೋಗವಶಾತ್ ಪದ್ಮರಾಗಮಣಿಯನ್ನು ಕಚ್ಚಿ ತೆರಳಿದ್ದ ನವಿಲು ಮುನಿಗಳು ನಿಂತಿದ್ದ ಮರದಮೇಲೆಯೇ ಬಂದು ಕುಳಿತಿತ್ತು. ಅದರಲ್ಲಿ ಯಾವ ಸ್ವಾದವೂ ಕಾಣದಿದ್ದುದರಿಂದ ನುಂಗಲೋ ಬೇಡವೋ ಎಂದು ಆಲೋಚಿಸುತ್ತಿತ್ತು. ಅದೇವೇಳೆಗೆ ಗಾರದೇವನು ಎಸೆದ ಕೋಲು ರಭಸದಿಂದ ಬಂದು ನವಿಲಿಗೇ ಬಿದ್ದಿತು. ನವಿಲು ಗಾಬರಿಯಿಂದ ಪದ್ಮರಾಗ ಮಣಿಯನ್ನು ಕೊಕ್ಕಿನಿಂದ ಕೆಳಕ್ಕೆ ಬಿಟ್ಟುಬಿಟ್ಟಿತು. ಆ ಮಣಿ ಮುನಿಗಳ ಮುಂದೆಯೇ ಬಿತ್ತು. ಗಾರದೇವನು ತಾನು ಮಾಡಿದ ತಪ್ಪಿಗಾಗಿ ಪಶ್ಚಾತ್ತಾಪ ಪಟ್ಟು ಮುನಿಗಳಲ್ಲಿ ಕ್ಷಮೆ ಬೇಡಿದನು.



ಉತ್ತಮರಾಗಿ ಬಾಳಲು ಎಲ್ಲರಿಗೂ ಅವಕಾಶವಿದೆ.

೧೮

ಮಾಡಿದ್ದುಣ್ಣೋ ಮಹಾರಾಯ



ಸುರಟದೇಶದಲ್ಲಿ ದ್ವಾರಾವತಿ ಪ್ರಸಿದ್ಧವಾದ ನಗರ. ಅಲ್ಲಿ ಅರ್ಧ ಚಕ್ರಿಯಾಗಿದ್ದ ವಿಷ್ಣು ರಾಜ್ಯಭಾರ ಮಾಡುತ್ತಿದ್ದ. ಆವನಿಗೆ ಒಬ್ಬ ಬಲಿಷ್ಠನಾದ ತಮ್ಮನಿದ್ದ. ಅವನ ಹೆಸರು ಗಜಕುಮಾರ. ಗಜಕುಮಾರನು

ಮಹಾ ಪರಾಕ್ರಮಿ. ಹೋರಾಟಕ್ಕೆ ನಿಂತರೆ ಗೆಲುವು ಅವನಿಗೇ ಸಿದ್ಧ. ಯುದ್ಧಕ್ಕೆ ಗಜಕುಮಾರ ಬಂದಿದ್ದಾನೆಂದು ಕೇಳಿದರೆ ಸಾಕು ಶತ್ರುಗಳು ಹೇಳದೆ ಕೇಳದೆ ಕಾಲಿಗೆ ಬುದ್ಧಿ ಹೇಳುತ್ತಿದ್ದರು. ಅಣ್ಣನಾದ ವಿಷ್ಣುವೂ ಸಹ ಅವನ ಮುಂದೆ ತತ್ತರಿಸಿಹೋಗುತ್ತಿದ್ದ.

ಗಜಕುಮಾರ ಪ್ರಚಂಡ ಪರಾಕ್ರಮಿಯೇನೋ ಹೌದು. ಆದರೆ ಬಹು ಕಾಮಿ. ಯೌವನದ ಸುಂದರ ಹೆಣ್ಣುಗಳೆಂದರೆ ಅವನಿಗೆ ಎಲ್ಲಿಲ್ಲದ ಆಸಕ್ತಿ. ಯಾರಮೇಲಾದರೂ ಕಣ್ಣಿಟ್ಟನೆಂದರೆ, ಎಂತಹ ಭೀಕರ ಅಡಚಣೆ ಎದುರುಬಿದ್ದರೂ, ತನ್ನ ಅಪೇಕ್ಷೆಯನ್ನು ಪೂರ್ಣಗೊಳಿಸದೆ ಬಿಡುತ್ತಿರಲಿಲ್ಲ.

ಸುರಟದೇಶದ ಮಗ್ಗುಲನಾಡೇ ಸೂರದತ್ತನಾಡು. ಪೌದನಪುರ ಅದರ ರಾಜಧಾನಿ. ಅಲ್ಲಿಯ ರಾಜ ಅಪರಾಜಿತ. ಹೆಸರಿನಂತೆ ಅವನು ಶತ್ರುಗಳಿಗೆ ಅಜೇಯನೇ ಆಗಿದ್ದ. ರಣ ಭೈರವನೆಂದು ಅವನ ಕೀರ್ತಿ ಎಲ್ಲೆಡೆ ಹರಡಿತ್ತು ಅವನು ವಿಷ್ಣುವಿಗೂ ತಲೆನೋವಾಗಿದ್ದ. ಶತ್ರು ನಿಗ್ರಹದಲ್ಲಿ ತಡಮಾಡಬಾರದೆಂಬ ಹಿರಿಯರ ನುಡಿ ವಿಷ್ಣುವಿನ ಮನಸ್ಸನ್ನು ಕೊರೆಯುತ್ತಿತ್ತು ಅಪರಾಜಿತನ ಸೊಕ್ಕನ್ನಡಗಿಸಲು ಏನು ಮಾಡಬೇಕೆಂಬುದೇ ಅವನ ಹಗಲಿರುಳಿನ ಚಿಂತೆಯಾಗಿತ್ತು. ಕೊನೆಗೆ ಒಂದು ದಿನ "ಅಪರಾಜಿತನನ್ನು ಸೋಲಿಸಿ ಹಿಡಿದು ತಂದವರಿಗೆ ಏನು ಬೇಡಿದರೂ ಕೊಡುತ್ತೇನೆ" ಎಂದು ನಗರದಲ್ಲಿ ಡಂಗುರ ಹೊಡೆಸಿದ.

ಈ ವಿಚಾರ ಗಜಕುಮಾರನ ಕಿವಿಗೂ ಬಿತ್ತು, ಇಂತಹ ಅವಕಾಶಕ್ಕೇ ಅವನು ಚಡಪಡಿಸುತ್ತಿದ್ದ. ಅಣ್ಣನಲ್ಲಿ ಬಂದು ತಾನೇ ಹೋಗಿ ಅಪರಾಜಿತನನ್ನು ಹಿಡಿದು ತರುವುದಾಗಿ ಹೇಳಿದ. ಅಣ್ಣನು ಸಹ ತಮ್ಮನಿಗೆ ಬೇಕಾದಷ್ಟು ಚತುರಂಗ ಸೈನ್ಯದ ಸಹಾಯವನ್ನಿತ್ತು ಕಳುಹಿಸಿದನು. ಅನಿರೀಕ್ಷಿತವಾಗಿ ದಂಡೆತ್ತಿ ಬಂದ ಗಜಕುಮಾರನನ್ನು ಕಂಡು ಅಪರಾಜಿತ ಅವಾಕ್ಕಾದನು. ಆದರೂ ಹಿಂಜರಿಯಲಿಲ್ಲ. ಧೈರ್ಯವಾಗಿಯೇ ಎದುರಿಸಿ ಹೋರಾಡಿದನು. ಹೋರಾಟ ಭಯಂಕರವಾಗಿಯೇ ನಡೆಯಿತು. ಆದರೆ ಗಜಕುಮಾರನ ಛಲದ ಮುಂದೆ ಅಪರಾಜಿತನ ಸ್ಥೈರ್ಯ ಕುಗ್ಗಿಹೋಯಿತು. ಗಜಕುಮಾರನು ಮುನ್ನುಗ್ಗಿ ಅಪರಾಜಿತನನ್ನು ಸೆರೆಹಿಡಿದು ದ್ವಾರಾವತಿಗೆ

ಕರೆಮೊಯ್ದನು. ಹಿಂಗಟ್ಟು ಮುಂಗಟ್ಟು ಹಾಕಿ ಬಂಧಿಸಿದ ಅವನನ್ನು ಅಣ್ಣನ ಪಾದಗಳ ಮೇಲೆ ಕೆಡವಿದನು.

ತಮ್ಮನ ಸಾಹಸವನ್ನು ನೋಡಿ ವಿಷ್ಣುರಾಜನಿಗೆ ಆನಂದವಾಯಿತು. ಒಂದು ಮುಳ್ಳು ಕಳೆದುದರಿಂದ ಚಿತ್ತಕ್ಕೆ ಶಾಂತಿಯಾಯಿತು ಆನಂದದ ಭರದಲ್ಲಿ ತಮ್ಮನನ್ನು ಕುರಿತು "ಏನು ಬೇಕಾದರೂ ಬೇಡು" ಎಂದು ಕೇಳಿದನು.

"ನನಗೆ ಎಲ್ಲ ವೈಭವವೂ ಇವೆ. ನಿಮ್ಮ ಅಂತಃಪುರದಲ್ಲಿರುವ ಯುವತಿಯರನ್ನು ಬಿಟ್ಟು, ಉಳಿದ ಯಾವ ಯುವತಿಯರಲ್ಲಾದರೂ ರಮಿಸುವ ಅವಕಾಶವನ್ನು ಕೊಡು" ಎಂದು ಕೇಳಿದನು. ವಿಷ್ಣುರಾಜನು ತಮ್ಮನ ಮಾತನ್ನು ಕೇಳಿ ಚಿಂತೆಗೊಳಗಾದನು. ಇದರಿಂದ ಸಜ್ಜನರಾದ ಪ್ರಜೆಗಳಲ್ಲಿ ಅಸಮಾಧಾನ ಮೂಡುವುದೆಂಬ ಭೀತಿ ಅವನನ್ನು ಪೀಡಿಸಿತು. ಆದರೇನು? ಆಡಿದ ಮಾತನ್ನು ನಡೆಸಿಕೊಟ್ಟೇ ತೀರಬೇಕಾಗಿತ್ತು. ಆದುದರಿಂದ ಅನಿರ್ವಾಹದಿಂದ ಒಪ್ಪಿಕೊಂಡನು.

ಅಂದಿನಿಂದ ಗಜಕುಮಾರನ ಕಾಮುಯಜ್ಞಕ್ಕೆ ನಗರದ ಅನೇಕ ಹೆಣ್ಣುಮಕ್ಕಳು ಬಲಿಯಾದರು. ಒಮ್ಮೆ ಒಂದು ಸಾರಿ ಸ್ಪರ್ಶಿಸಿದ ಹೆಣ್ಣನ್ನು ಮತ್ತೊಮ್ಮೆ ಸ್ಪರ್ಶಿಸುವ ತಂಟೆಗೆ ಅವನು ಹೋಗುತ್ತಿರಲಿಲ್ಲ. ಹಲವಾರು ದಿನಗಳ ವರೆಗೆ ಅವನ ಕಾಮುಯಜ್ಞ ಅಬಾಧಿತವಾಗಿ ಜರುಗಿತು. ಆದರೆ "ಅತಿಪರಿಚಯಾದವಜ್ಞ" ಎಂಬಂತೆ ಯಾವುದಾದರೂ ಕೊನೆಯಾಗುವ ಸ್ಥಿತಿಗೆ ಬರಲೇ ಬೇಕಷ್ಟೆ! ಪಾಪಕಾರ್ಯಗಳಾದರೂ ಅಂತ್ಯವನ್ನು ಹೊಂದುವ ದಿನಗಳು ಹೆಚ್ಚು ದೂರವಿರುವುದಿಲ್ಲ.

ಅದೇ ನಗರದಲ್ಲಿ ಪಂಗುಳನೆಂಬ ಅಕ್ಕಸಾಲಿಗನಿದ್ದ. ಅವನ ಹೆಂಡತಿ ಅತ್ಯಂತ ರೂಪವತಿಯಾಗಿದ್ದಳು. ಅವನು ತನ್ನ ಚೆಲುವೆಯಾದ ಪತ್ನಿಯನ್ನು ಜಾಗರೂಕತೆಯಿಂದ ಪಾಲಿಸುತ್ತಿದ್ದನು. ಒಂದು ದಿನ ಅವಳು ಗಜಕುಮಾರನ ದೃಷ್ಟಿಗೆ ಬಿದ್ದಳು. ಕೂಡಲೇ ಅವಳ ಸಂಬಂಧವನ್ನು ಹೊಂದುವುದರಲ್ಲಿ ಅವನು ತಡಮಾಡಲಿಲ್ಲ. ಅವಳೂ ಸಹ ಅವನ ಕಾಮುಪಿಪಾಸೆಗೆ ಬಲಿಯಾದಳು.

ಈ ವಿಚಾರ ಸಂಗುಳನಿಗೆ ತಿಳಿದಾಗ ಅತೀವ ಕ್ರುದ್ಧನಾದನು. ಆದರೆ ರಾಜಪುತ್ರನ ಮೇಲೆ ಅವನ ಆಟ ಸಾಗುವಂತಿರಲಿಲ್ಲ. ಆದುದರಿಂದ ತನ್ನ ಸೇಡನ್ನು ಹೇಗೆ ತೀರಿಸಿಕೊಳ್ಳಬೇಕೆಂದು ಚಿಂತಿಸಹತ್ತಿದನು. ಆತನ ಮೇಲೆ ತನ್ನ ಸೇಡನ್ನು ತೀರಿಸಲು ಸಮಯವನ್ನು ಹೊಂಚುಹಾಕುತ್ತ ಕುಳಿತನು.

ಇತ್ತ ಗಜಕುಮಾರನ ಉಪಟಳ ದಿನೇ ದಿನೇ ಹೆಚ್ಚುತಿತ್ತು. ಅಸಂಖ್ಯಾತ ಹೆಣ್ಣು ಮಕ್ಕಳು ದುಃಖಿತರಾಗಿ ಅವನಿಂದ ಪತಿತರಾಗುತ್ತಿದ್ದರು. ಅವನ ಅಣ್ಣನು ಸಹ ತಮ್ಮನಿಗೆ ಬುದ್ಧಿ ಕಲಿಸಲಾರದೇ, ಏನು ಮಾಡಲೂ ತೋಚದೆ ಮನಸ್ಸಿನಲ್ಲೇ ಕೊರಗುತ್ತಿದ್ದನು.

ಒಮ್ಮೆ ಆ ನಗರದ ಬಹಿರುದ್ಯಾನದಲ್ಲಿ ಭಗವಾನ್ ನೇಮಿನಾಥ ತೀರ್ಥಂಕರರ ಸಮವಸರಣವು ಆಗಮಿಸಿತು. ಅಬಾಲ ವೃದ್ಧರೂ ಸೇರಿ ಅವರ ಧರ್ಮೋಪದೇಶವನ್ನು ಕೇಳಿ ಪುನೀತರಾದರು. ಗಜಕುಮಾರನೂ ಅದರಲ್ಲಿ ಭಾಗಿಯಾಗಿದ್ದನು. ಭಗವಾನರು ಅಂದು ಸ್ತ್ರೀಲೋಲರಿಗೆ ಎಂತಹ ವಿಪತ್ತುಗಳು ಬರುವುದೆಂಬುದನ್ನು ದೃಷ್ಟಾಂತಪೂರ್ವಕವಾಗಿ ವಿವರಿಸಿದರು. ಅವರ ಉಪದೇಶದ ಪ್ರಭಾವದಿಂದ ಗಜಕುಮಾರನ ಮನಸ್ಸು ಪರಿವರ್ತಿತವಾಯಿತು. ತಾನು ಮಾಡಿದ ಅಪಾರ ಪಾಪಕ್ಕಾಗಿ ಮರುಗಿದ. ಪಶ್ಚಾತ್ತಾಪದ ದಳ್ಳುರಿಯಲ್ಲಿ ಬೆಂದುಹೋದನು. ಕೂಡಲೇ ಭಗವಾನರಿಗೆ ಅಡ್ಡಬಿದ್ದು ತನ್ನ ಪಾಪಕೃತ್ಯಗಳಿಗೆ ಪಶ್ಚಾತ್ತಾಪ ಪಟ್ಟು ವೈರಾಗ್ಯವನ್ನು ಹೊಂದಿ, ದೀಕ್ಷಾನ್ವಾಹಿಯಾದನು.

ದೀಕ್ಷೆಯನ್ನು ಪಡೆದ ಗಜಕುಮಾರನು ಒಮ್ಮೆ ಸ್ಮಶಾನದ ಬಳಿ ನಿರ್ಜನವಾದ ಪ್ರದೇಶದಲ್ಲಿ ಕಾಯೋತ್ಸರ್ಗದಲ್ಲಿ ನಿಂತು ತಪಸ್ಸನ್ನು ಮಾಡುತ್ತಿದ್ದನು. ಸಂಗುಳನಿಗೆ ಈ ಸಮಾಚಾರ ಸಿಕ್ಕಿತು. ತನ್ನ ಸೇಡನ್ನು ತೀರಿಸಲು ಇದೇ ಸಮಯವೆಂದು ಬಗೆದ. "ಮಾಡಿದ್ದುಣ್ಣೋ ಮಹಾರಾಯ" ಎಂದು ಹೇಳುತ್ತಾ ಒಂದು ಅಗ್ಗಿಷ್ಟಿಕೆಯಲ್ಲಿ ಬೆಂಕಿಯ ಕೆಂಡವನ್ನಿಟ್ಟು ಚನ್ನಾಗಿ ಉರಿಮಾಡಿ ಅವನ ತಲೆಯ ಮೇಲಿಟ್ಟ. ಹರಿತವಾದ ಆಯುಧವನ್ನು ತಂದು ಅವನ ಶರೀರವನ್ನು ಸೀಳಿ, ಆ ಭಾಗಕ್ಕೆ ಕೆಂಪಗೆ ಕಾದ ಕಬ್ಬಿಣದ ಸಲಾಕಿ

ಯನ್ನು ಮುಟ್ಟಿಸಿ ಸುಡುವಂತೆ ಮಾಡಿದ. ಆದರೂ ಗಜಕುಮಾರ ಮುನಿ ಶಾಂತಿಯಿಂದ ಅವನ್ನು ಸಹಿಸುತ್ತಾ ಕ್ಷಮಾಭಾವದಲ್ಲಿ ನಿಂತು, ಧರ್ಮಧ್ಯಾನ ಮತ್ತು ಶುಕ್ಲಧ್ಯಾನಮಗ್ನನಾಗಿ ಸಮಾಧಿ ಮರಣವನ್ನಪ್ಪಿದನು. ತಾನು ನಾನಾ ಬಗೆಯ ಹಿಂಸೆಯನ್ನು ನೀಡಿದರೂ, ಸ್ವಲ್ಪವಾದರೂ ಸಂಕಟಪಡದೆ, ತನ್ನ ಮೇಲೆ ತುಸುವಾದರೂ ಕೋಪಗೊಳ್ಳದೆ, ಸಹನೆಯಿಂದಲೇ ಶರೀರವನ್ನು ತೊರೆದ ಗಜಕುಮಾರ ಮುನಿಯ ಆತ್ಮ ಸ್ಥೈರ್ಯವನ್ನು ಕಂಡ ಪಂಗುಳನಿಗೆ ಆಶ್ಚರ್ಯವಾಯಿತು. ಅವನ ವಿಚಾರದಲ್ಲಿದ್ದ ದ್ವೇಷ ಭಾವನೆ ನಶಿಸಿ, ಪೂಜ್ಯ ಭಾವನೆ ಉದಿಸಿತು. ದ್ವೇಷ ಭಾವನೆಯನ್ನು ತನ್ನ ಮನಸ್ಸಿನಿಂದ ತೊಲಗಿಸಿ, ಅವನಿಗೆ ಮಣಿದು, ಅವನ ಶವವನ್ನು ಕರ್ಪೂರದಿಂದ ದಹಿಸಿ ತಾನು ಸಹ ಸದ್ಗತಿಯನ್ನು ಹೊಂದುವ ಮಾರ್ಗವನ್ನು ಮುಂದೆ ತನ್ನ ಜೀವನದಲ್ಲಿ ನಿಷ್ಠೆಯಿಂದ ಆಚರಿಸಲಾರಂಭಿಸಿದನು.



ತಪ್ಪಿಗೆ ಶಿಕ್ಷೆ ತಪ್ಪಬೇಕೆಂದು ದೇವರಲ್ಲಿ ಕೇಳಬಾರದು.

೧೯

ಕುಂಬಾರನಿಗೆ ಒಂದು ವರುಷ ಕೋಲಿಗೆ ಒಂದು ನಿಮಿಷ



ಅಕ್ರೂರನೆಂಬುವನು ಮಹಾಹಠವಾದಿ. ಯಾವ ಕೆಲಸವನ್ನು ಹಿಡಿದರೂ, ಅದು ಒಳ್ಳೆಯದಾಗಿರಲಿ, ಕೆಟ್ಟದಾಗಿರಲಿ ಸಾಧಿಸಿಬಿಡುವುದು ಅವನ

ಸ್ವಭಾವ. ಒಮ್ಮೆ ಅವನಿಗೆ ಸಂಸಾರದ ವಿಚಾರದಲ್ಲಿ ವೈರಾಗ್ಯ ಹುಟ್ಟಿ ತಪಸ್ವಿಯಾದನು. ಪಂಚಾಗ್ನಿಯ ಮಧ್ಯೆ ಒಂದೇ ಕಾಲಿನಲ್ಲಿ ನಿಂತು ಹಠದಿಂದ ತಪಸ್ಸನ್ನು ಮಾಡತೊಡಗಿದನು. ಅಲ್ಲಿಗೊಮ್ಮೆ ವೀರಭದ್ರನೆಂಬ ಜೈನಮುನಿ ಬಂದ. ಅವನನ್ನು ಕುರಿತು ಹೀಗೆಂದ—"ನೀನು ಮಾಡುತ್ತಿರುವ ತಪಸ್ಸು ಹಿಂಸೆಗೆ ಮೂಲ. ಧಗಧಗಿಸಿ ಉರಿಯುತ್ತಿರುವ ಬೆಂಕಿಯಿಂದ ಅಸಂಖ್ಯಾತ ಕ್ರಿಮಿಕೀಟಗಳು ಸುಟ್ಟುಹೋಗುತ್ತಿವೆ. ಇದರಿಂದ ಎಂತಹ ಪುಣ್ಯ ಬಂದೀತು?" ಎಂದು ಹೇಳಿದನು.

ಜೈನಮುನಿಯ ಮಾತನ್ನು ಕೇಳಿದ ಅಕ್ರೂರನಿಗೆ ತಡೆಯಲಾರದಷ್ಟು ಸಿಟ್ಟು ಬಂದಿತು. 'ಇದರಲ್ಲಿ ಹಿಂಸೆಯನ್ನು ತೋರಿಸು' ಎಂದು ಕ್ರೋಧದಿಂದ ಅರ್ಭಟಿಸಿದನು.

"ನಿನ್ನ ಬಳಿಯಿರುವ ಕೊಡಲಿಯಿಂದ ಕಟ್ಟಿಗೆಗಳನ್ನು ಸೀಳಿ ನೋಡು" ಎಂದು ನುಡಿದನು. ಅಕ್ರೂರನು ಹಾಗೇ ಮಾಡಿದನು. ಕೊಡಲಿಯಿಂದ ಕಟ್ಟಿಗೆಗಳನ್ನು ಸೀಳಿದಕೂಡಲೇ ಅನೇಕ ಕ್ರಿಮಿಕೀಟಗಳು ಹೊರಬಂದುವು. ಅವನ ಕೋಪ ಶಾಂತವಾಯಿತು. ತಾನು ಮಾಡುತ್ತಿದ್ದ ತಪಸ್ಸು ಹಿಂಸಾಕಾರಣವೆಂದರಿತನು. ಕೂಡಲೇ ಅದನ್ನು ವಿಸರ್ಜಿಸಿ ಜೈನದೀಕ್ಷೆಯನ್ನು ಗ್ರಹಿಸಿ, ಜೈನಸಿದ್ಧಾಂತಾರ ತಪಸ್ಸನ್ನು ಮಾಡತೊಡಗಿದನು.

ಸಹಜವಾಗಿಯೇ ಹಠವಾದಿಯಾಗಿದ್ದುದರಿಂದ ಅಕ್ರೂರನು ದೃಢತೆಯಿಂದಲೇ ಜೈನಮುನಿಧರ್ಮವನ್ನು ಆಚರಿಸತೊಡಗಿದನು. ದಿಗಂಬರನಾದನು. ಕಾಲಿಗೆ ಪಾದರಕ್ಷೆಗಳಿಲ್ಲದೆ ಪಾದಯಾತ್ರೆಯಲ್ಲೇ ಸಂಚರಿಸಿದನು. ಬಿಸಿಲಿನ ಝಳ, ಚಳಿಯ ಕೊರೆತ, ಮಳೆಯ ಹೊಡೆತ, ಗಾಳಿಯ ಬಡಿತ—ಇವೆಲ್ಲವನ್ನೂ ಸಹನೆಯಿಂದ ಸಹಿಸಿ ಧ್ಯಾನಮಗ್ನನಾಗುತ್ತಿದ್ದನು. ಇದರಿಂದ ಆತನಲ್ಲಿ ಆತ್ಮಸ್ಥೈರ್ಯ ಉಂಟಾಯಿತು. ಆತ್ಮಶಕ್ತಿಯ ತೇಜಸ್ಸಿನಿಂದ ಕಂಗೊಳಿಸಿದನು.

